

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 7 ಭಾನುವಾರ 2022

ಸಂಪುಟ: 43 | ಸಂಚಿಕೆ: 113 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಮೈಸೂರು ದಸರಾ ಮಹೋತ್ಸವ–2022

ಇಂದು ಗಜಪಯಣ

● ದಸರಾ ವಿಶೇಷ ಆಕರ್ಷಣೆ ಅಭಿಮನ್ಯು ನೇತೃತ್ವದ ಗಜಪಡೆಗೆ ವೀರನ ಹೊಸಹಳ್ಳಿಯಲ್ಲಿ ಸಾಂಪ್ರದಾಯಿಕ ಪೂಜೆ ಸಲ್ಲಿಕೆಯೊಂದಿಗೆ ಚಾಲನೆ ● ಸಂಜೆ ವೇಳೆಗೆ ಲಾರಿಗಳ ಮೂಲಕ 9 ಆನೆಗಳು ಮೈಸೂರು ಅರಣ್ಯ ಭವನಕ್ಕೆ ಆಗಮನ




ಗಜಪಡೆ ಪೋಸ್ಟರ್ ಬಿಡುಗಡೆ...: ಮೈಸೂರು ದಸರಾದಲ್ಲಿ ಪಾಲ್ಗೊಳ್ಳಲಿರುವ ಗಜಪಡೆಗಳ ಮಾಹಿತಿಯನ್ನು ಒಳಗೊಂಡ ಪೋಸ್ಟರ್ ಅನ್ನು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಹಕಾರ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬಿಡುಗಡೆ ಮಾಡಿದರು. ಶಾಸಕರಾದ ಹರ್ಷವರ್ಧನ್, ತನ್ವೀರ್ ಸೇಠ್, ಸಾ.ರಾ.ಮಹೇಶ್, ಮಂಜೇಗೌಡ, ಡಾ. ತಿಮ್ಮಯ್ಯ, ನಿಗಮ ಮಂಡಳಿಗಳ ಅಧ್ಯಕ್ಷರಾದ ರಘು ಕೌಟಿಲ್ಯ, ಕಾಪು ಸಿದ್ದಲಿಂಗಸ್ವಾಮಿ, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಡಿಸಿ ಡಾ.ಬಗಾದಿ ಗೌತಮ್, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಎಫ್ ಕರಿಕಾಳನ್ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು, ಆ.6(ಎಂಕೆ)–ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಾಳೆ(ಆ.7) ಬೆಳಗ್ಗೆ 9.01ರಿಂದ 9.35ರೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಗಜಪೂಜೆ ನೆರವೇರಿಸುವ ಮೂಲಕ 'ಗಜಪಯಣ'ಕ್ಕೆ ಚಾಲನೆ ನೀಡಲಿದ್ದು, ಮೊದಲ ಹಂತದಲ್ಲಿ 9 ಆನೆಗಳನ್ನು ಕರೆತರಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದ ಅವರು, ಹುಣಸೂರಿನ ವೀರನ ಹೊಸಹಳ್ಳಿಯಿಂದ ಗಜಪಯಣಕ್ಕೆ ಚಾಲನೆ ದೊರಕಲಿದ್ದು, ಈ ಬಾರಿ ದಸರಾ ಉತ್ಸವದಲ್ಲಿ 14 ಆನೆಗಳು ಭಾಗವಹಿಸಲಿವೆ. ದಸರಾ ಹೈ-ಪವರ್ ಕಮಿಟಿ ಮೀಟಿಂಗ್‌ನಲ್ಲಿ ಆನೆಗಳನ್ನು ಕಾಲ್ನಡಿಗೆಯಲ್ಲಿ ಕರೆತರಬೇಕು ಎಂದು ಚರ್ಚಿಸಿ, ಮನವಿ ಮಾಡಲಾಗಿತ್ತು. ಆದರೆ ಇತ್ತೀಚಿನ ಸುಪ್ರೀಂಕೋರ್ಟ್ ಆದೇಶದನ್ವಯ ಆನೆಗಳು ಸುಮಾರು 15 ಕಿಲೋ ಮೀಟರ್ ದೂರವಷ್ಟೇ ಕಾಲ್ನಡಿಗೆಯಲ್ಲಿ ಸಾಗಬೇಕು ಎಂದು ನಿರ್ಬಂಧ ವಿಧಿಸಲಾಗಿದೆ. ಮೈಸೂರು ಅರಮನೆವರೆಗೆ ಸುಮಾರು 76 ಕಿ.ಮೀಟರ್ ದೂರ ಇರುವುದರಿಂದ ಎಂದಿನಂತೆ ವಾಹನಗಳನ್ನು ಬಳಸಿ ಕರೆತರಲಾಗುವುದು. ಆ.10ರಂದು ಮೈಸೂರು ಅರಮನೆ ಆವರಣದಲ್ಲಿ ಗಜಪಡೆಯ ಸ್ವಾಗತಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. 14 ಆನೆಗಳ ಪೈಕಿ 3 ಆನೆಗಳು ಶ್ರೀರಂಗಪಟ್ಟಣ ಹಾಗೂ ಚಾಮರಾಜನಗರ ದಸರಾ ಉತ್ಸವದಲ್ಲಿ ಭಾಗವಹಿಸಲಿವೆ. ಚಾಮರಾಜನಗರ ಹಾಗೂ ಶ್ರೀರಂಗಪಟ್ಟಣ ದಸರಾ ಆಚರಣೆಗೆ ಸರ್ಕಾರದಿಂದ ತಲಾ 1 ಕೋಟಿ ರೂ. ಅನುದಾನ ನೀಡಲು ನಿರ್ಧರಿಸಲಾಗಿದೆ. ಮೈಸೂರು ▶ 9ನೇ ಪುಟಕ್ಕೆ

> “ಈ ವರ್ಷದ ದಸರಾ ಉತ್ಸವದಲ್ಲಿ ಗೋಲ್ಡ್ ಪಾಸ್ ಇರುವುದಿಲ್ಲ. ಗೋಲ್ಡ್ ಪಾಸ್‌ಗೆ ಒತ್ತಡ ಹೆಚ್ಚಾಗುತ್ತದೆ ಎಂಬ ಕಾರಣಕ್ಕಾಗಿ ಪಾಸ್ ವಿತರಣೆ ವಿಚಾರದಲ್ಲಿ ಸದ್ಯದಲ್ಲಿಯೇ ಸೂಕ್ತ ನಿರ್ಣಯ ಕೈಗೊಳ್ಳಲಾಗುವುದು. ವಿಐಪಿ ಮತ್ತು ವಿವಿಐಪಿಗಳಿಗೆ ಯಾವ ರೀತಿಯಲ್ಲಿ ಪಾಸ್ ವಿತರಣೆ ಮಾಡಲಾಗುವುದು ಎಂಬುದನ್ನು ಎರಡ್ಮೂರು ದಿನಗಳಲ್ಲಿ ತಿಳಿಸಲಾಗುವುದು.
>
> – ಎಸ್.ಟಿ.ಸೋಮಶೇಖರ್

ಜಗದೀಪ್ ಧನಕರ್ ಭಾರತದ ನೂತನ ಉಪ ರಾಷ್ಟ್ರಪತಿ



ನವದೆಹಲಿ, ಆ.6–ಭಾರತದ ಉಪ ರಾಷ್ಟ್ರಪತಿಯಾಗಿ ಜಗದೀಪ್ ಧನಕರ್ ಆಯ್ಕೆಯಾಗಿದ್ದಾರೆ. ಶನಿವಾರ ನಡೆದ ಚುನಾವಣೆಯಲ್ಲಿ ಧನಕರ್ 14ನೇ ಉಪ ರಾಷ್ಟ್ರಪತಿಯಾಗಿ ಭರ್ಜರಿ ಜಯ ಸಾಧಿಸಿದ್ದಾರೆ.

ಒಟ್ಟು 780 ಸಂಸದರ ಪೈಕಿ 725 ಸಂಸದರು ಮತ ಚಲಾಯಿಸಿದ್ದರು. ಇದರೊಂದಿಗೆ ಶೇ.93ರಷ್ಟು ಮತದಾನವಾಗಿದ್ದು, 50ಕ್ಕೂ ಹೆಚ್ಚು ಸಂಸದರು ಮತದಾನದಿಂದ ದೂರ ಉಳಿದರು. ಎನ್‌ಡಿಎ ಅಭ್ಯರ್ಥಿಯಾಗಿದ್ದ ಧನಕರ್ 528 ▶ 9ನೇ ಪುಟಕ್ಕೆ



GOLD FINANCE
ಗಿರವಿ ಚಿನ್ನಾಭರಣ ಖರೀದಿ
24 ಕ್ಯಾರೆಟ್ 5200
22 ಕ್ಯಾರೆಟ್ 4600
ನೀವು ಗಿರವಿ ಇಟ್ಟ ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣ ಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225





ಮಳೆಯಿಂದ ಕುಸಿದ ಮನೆ: ಕುಟುಂಬದ ಐವರು ಪಾರು

ಗೋಪಾಲಪುರದಲ್ಲಿ ಗುರುವಾರ ರಾತ್ರಿ ಘಟನೆ



ಮೈಸೂರು, ಆ.6(ಆರ್‌ಕೆ)–ಧಾರಾಕಾರವಾಗಿ ಸುರಿದ ಮಳೆಯಿಂದಾಗಿ ಮನೆಯ ಗೋಡೆ ಕುಸಿದು ಕುಟುಂಬದ ಐವರು ಅಪಾಯದಿಂದ ಪಾರಾಗಿದ್ದಾರೆ. ಈ ಘಟನೆ ಮೈಸೂರು ತಾಲೂಕು, ಜಯಪುರ ಹೋಬಳಿ ಗೋಪಾಲಪುರ ಗ್ರಾಮದಲ್ಲಿ ಗುರುವಾರ ರಾತ್ರಿ ಸಂಭವಿಸಿದೆ.

ಗ್ರಾಮದ ಜವರೇಗೌಡರ ಮಗ ಸ್ವಾಮಿಗೌಡರಿಗೆ ಸೇರಿದ ಮನೆಯ ಗೋಡೆಯೊಂದು ಗುರುವಾರ ರಾತ್ರಿ ಸುಮಾರು 9 ಗಂಟೆ ವೇಳೆಗೆ ಕುಸಿದು ಬಿದ್ದಿತು. ಆಗ ತಾನೆ ಊಟ ಮಾಡಿ ಮಲಗಲೆಂದು ಕೊಠಡಿಗೆ ಹೋಗಬೇಕೆನ್ನುವಷ್ಟರಲ್ಲಿ ಈ ಘಟನೆ ನಡೆದಿದೆ. ಒಂದು ವೇಳೆ ಅವರು ಮಲಗಿದ ನಂತರ ಗೋಡೆ ಕುಸಿದು ಬಿದ್ದಿದ್ದರೆ ಸ್ವಾಮಿಗೌಡ ಸೇರಿದಂತೆ ಕುಟುಂಬದ ಐವರು ಪ್ರಾಣಾಪಾಯಕ್ಕೆ ಸಿಲುಕುತ್ತಿದ್ದರು ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಗ್ರಾಮ ಪಂಚಾಯ್ತಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿ ವರದಿ ಪಡೆದಿದ್ದಾರೆ.

ಮರದಿಂದ ಬಿದ್ದು ವ್ಯಕ್ತಿ ಸಾವು

ಮೈಸೂರು, ಆ.6(ಆರ್‌ಕೆ)–ಮೇಕೆಗಳಿಗೆ ಸೊಪ್ಪು ತರಲೆಂದು ಹೋಗಿದ್ದ ವ್ಯಕ್ತಿಯೋರ್ವ ಮರದಿಂದ ಬಿದ್ದು ಸಾವನ್ನಪ್ಪಿರುವ ಘಟನೆ ಮೈಸೂರಿನ ಬೆಳವಾಡಿ ಸಮೀಪ ಹುಣಸೂರು ರಸ್ತೆಯಲ್ಲಿ ಇಂದು ಬೆಳಗ್ಗೆ ಸಂಭವಿಸಿದೆ.

ಬೆಳವಾಡಿಯ ಶಿವಮೂರ್ತಿ ಬ್ಲಾಕ್, 1ನೇ ಕ್ರಾಸ್ ನಿವಾಸಿ ಲೇಟ್ ಕರಿಯಪ್ಪ ಅವರ ಮಗ ಅನಿಲ್ ಕುಮಾರ್(41) ಸಾವನ್ನಪ್ಪಿದವರು. ಸೆಕ್ಯೂರಿಟಿ ಗಾರ್ಡ್ ಆದ ಅವರು ಮೇಕೆಗಳಿಗೆ ಸೊಪ್ಪು ತರಲೆಂದು ಹೋಗಿದ್ದರು. ಬೆಳವಾಡಿ ಗೇಟ್ ಸಮೀಪ ಕಿರ್ಲೋಸ್ಕರ್ ಕಂಪನಿ ಕಾಂಪೌಂಡ್ ಪಕ್ಕದ ಮರದಿಂದ ಬಿದ್ದು, ಇಂದು ಬೆಳಗ್ಗೆ ಸುಮಾರು 8 ಗಂಟೆ ವೇಳೆಗೆ ಅವರು ಮೃತಪಟ್ಟರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿಜಯನಗರ ಠಾಣೆ ಸಬ್ ಇನ್ಸ್‌ಪೆಕ್ಟರ್ ಶಬರೀಶಗೌಡ ಹಾಗೂ ಸಿಬ್ಬಂದಿ, ಮಹಜರು ನಡೆಸಿದಾಗ ಮರದಡಿ ಅನಿಲ್‌ಕುಮಾರ್ ಮೃತದೇಹ ಪತ್ತೆಯಾಗಿದ್ದು, ವಿದ್ಯುತ್ ಸ್ಪರ್ಶದಿಂದ ಬಿದ್ದಿರಬಹುದು ಅಥವಾ ಆಯತಪ್ಪಿ ಮರದಿಂದ ಬಿದ್ದು ಸಾವನ್ನಪ್ಪಿರಬಹುದೆಂಬುದು ತಿಳಿದು ಬಂದಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ದೇಹ ಒಪ್ಪಿಸಿದರು.

ಮೈಸೂರು ದಸರಾದಲ್ಲಿ ಭಾಗವಹಿಸುವ ಆನೆ, ಮಾವುತರಿಗೆ 1.65 ಕೋಟಿ ರೂ ವಿಮೆ

ಮೈಸೂರು, ಆ.6– ಈ ಬಾರಿ ದಸರಾ ಮಹೋತ್ಸವದಲ್ಲಿ ಭಾಗವಹಿಸುವ 14 ಆನೆಗಳು ಮತ್ತು ಮಾವುತರಿಗೆ ಜಿಲ್ಲಾಡಳಿತವು ಒಟ್ಟು 1.65 ಕೋಟಿ ರೂ. ವಿಮೆ ಮಾಡಿದೆ. ಆಗಸ್ಟ್ 7ರಿಂದ ಅಕ್ಟೋಬರ್ 8ರವರೆಗೆ ವಿಮೆ ಪಾಲಿಸಿ ಮಾಡಿಸಿದ್ದು, ದಸರಾದಲ್ಲಿ ಭಾಗಿಯಾಗುವ 14 ಆನೆಗಳಿಗೆ ಒಟ್ಟು 59 ಲಕ್ಷ ರೂ., 14 ಮಂದಿ ಮಾವುತರು ಮತ್ತು 14 ಮಂದಿ ಕಾವಾಡಿಗರು ಸೇರಿದಂತೆ 28 ಮಂದಿಗೆ 56 ಲಕ್ಷ ರೂ., ವಿಮೆ ಮಾಡಿಸಲಾಗಿದ್ದು, ದಸರಾ ಸಂದರ್ಭದಲ್ಲಿ ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಹಾನಿಯುಂಟಾದರೆ, 50 ಲಕ್ಷ ರೂ., ವಿಮೆ ಮಾಡಿಸಲಾಗಿದೆ. ಒಟ್ಟು 63 ದಿನಗಳಿಗೆ 1.65 ಕೋಟಿ ರೂ. ವಿಮೆ ಪಾಲಿಸಿ ಮಾಡಿಸಿದ್ದು, ಜಿಲ್ಲಾಡಳಿತದಿಂದ 49,900 ಪಾಲಿಸಿ ಮೊತ್ತವನ್ನು ಜಮೆ ಮಾಡಲಾಗಿದೆ ಎಂದು ಜಿಲ್ಲಾಡಳಿತ ಮೂಲಗಳು ತಿಳಿಸಿದೆ.



ಮೈಸೂರು ಮಂಚೇಗೌಡನ ಕೊಪ್ಪಲಿನಲ್ಲಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರ 50ನೇ ಹುಟ್ಟುಹಬ್ಬವನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಈ ವೇಳೆ ವಾರ್ಡ್ ಅಧ್ಯಕ್ಷ ಕಿಟ್ಟಿ ಅಂಕಲ್, ಅನಿತ್‌ಕುಮಾರ್, ಲಾರಿ ಚಂದ್ರಣ್ಣ, ಶ್ರೀಧರ್, ಕಂಟ್ರಾಕ್ಟರ್ ಗೋಪಾಲ್, ಕೇಬಲ್ ಆನಂದ್, ಮಂಜು, ಡೆಲ್ಲಿ ರವಿ, ಅವಿನಾಶ್, ಸುಖೇಶ್, ಪಾಪಚ್ಚಿ ಹಾಗೂ ಹಲವಾರು ಮುಖಂಡರು ಶುಭ ಕೋರಿದರು.



ಮೈಸೂರಿನ ವಿವೇಕಾ ಸೋಷಿಯಲ್ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಎನ್.ಕೃಷ್ಣೇಗೌಡ, ಉಪಾಧ್ಯಕ್ಷರಾಗಿ ರಾಜೇಂದ್ರ, ಕಾರ್ಯದರ್ಶಿಯಾಗಿ ಬಿ.ಹರೀಶ್, ಸಹ–ಕಾರ್ಯದರ್ಶಿಯಾಗಿ ಬೂಕನಕೆರೆ ವಿಜೇಂದ್ರ, ಖಜಾಂಚಿಯಾಗಿ ನಾರಾಯಣ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಜಯಕುಮಾರ್, ಶ್ರೀನಾಥ್, ರವಿಚಂದ್ರ, ಶಿವಣ್ಣ, ಡಾ.ಕೆ.ಪ್ರಭು ಮತ್ತು ವೈ.ಕೆ.ಬಸವರಾಜ ಆಯ್ಕೆಯಾಗಿದ್ದಾರೆ.

ಸಿದ್ದರಾಮಯ್ಯನವರ 75ನೇ ಜನ್ಮದಿನ ಪ್ರಯುಕ್ತ ಇಂದು ಕುಸ್ತಿ ಪಂದ್ಯಾವಳಿ



ಮೈಸೂರು,ಆ.6(ಪಿಎಂ)–ಕಾಳಿಸಿದ್ದನಹುಂಡಿಯ ಅಖಿಲ ಕರ್ನಾಟಕ ಬಡವರ ಬಂಧು ಸಿದ್ದರಾಮಯ್ಯನವರ ಅಭಿಮಾನಿಗಳ ಬಳಗದ ವತಿಯಿಂದ ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯನವರ 75ನೇ ವರ್ಷದ ಜನ್ಮದಿನದ ಅಂಗವಾಗಿ ಆ.7ರಂದು ರಾಷ್ಟ್ರಮಟ್ಟದ 30 ಜೊತೆ ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕಾಂಗ್ರೆಸ್ ಮುಖಂಡ ವರಕೋಡು ಉಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 2.30ಕ್ಕೆ ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಬಳಿಯ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಕುಸ್ತಿ ಪಂದ್ಯಾವಳಿಗೆ ಸ್ವತಃ ಸಿದ್ದರಾಮಯ್ಯನವರೇ ಚಾಲನೆ ನೀಡಲಿದ್ದಾರೆ. ಅಲ್ಲದೆ, ಮಧ್ಯಾಹ್ನ 1ಕ್ಕೆ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದರು. ಮುಖಂಡರಾದ ಜೈಸ್ವಾಮಿ, ಮಹದೇವ, ಬಸವಣ್ಣ, ಕುಮಾರ್, ಗಣೇಶ್, ಬಸವರಾಜು ಮತ್ತಿತರರು ಗೋಷ್ಠಿಯಲ್ಲಿದ್ದರು.

ನಿಧನ



ಕೆ.ಎಸ್.ಶೇಷಾದ್ರಿ

ಮೈಸೂರು,ಆ.6–ಮೈಸೂರಿನ ಕೆ.ಆರ್. ಆಸ್ಪತ್ರೆಯ ನಿವೃತ್ತ ಹಿರಿಯ ಫಾರ್ಮಾಸಿಸ್ಟ್ ಕುವೆಂಪುನಗರ ನಿವಾಸಿದ ಕೆ.ಎಸ್.ಶೇಷಾದ್ರಿ (74) ಅವರು ಶನಿವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ತಾಯಮ್ಮ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕೆ.ಎಸ್. ಶೇಷಾದ್ರಿ ನಿಧನಕ್ಕೆ ಎಸ್.ಎಂ.ಕೃಷ್ಣ ಅಭಿಮಾನಿಗಳ ಬಳಗದ ಅಧ್ಯಕ್ಷ ವಿಕ್ರಾಂತ್ ಪಿ. ದೇವೇಗೌಡ ತೀವ್ರ ಸಂತಾಪ ಸೂಚಿಸಿದ್ದಾರೆ. ಅಂತ್ಯಕ್ರಿಯೆ ನಾಳೆ(ಆ.7) ಬೆಳಗ್ಗೆ 10ಕ್ಕೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.

'ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್'ಗೆ ಎರಡನೇ ದಿನವೂ ಉತ್ತಮ ಪ್ರತಿಕ್ರಿಯೆ

ಸಣ್ಣ ಪಟ್ಟಣಗಳಲ್ಲಿ ದೊಡ್ಡ ಕನಸು ಸಾಕಾರಗೊಳಿಸುವುದನ್ನು ತಿಳಿಸಿಕೊಟ್ಟ 'ಮೈಸೂರು ನವೋದ್ಯಮ ಉತ್ಸವ'

'ಸಣ್ಣ ಪಟ್ಟಣ ದೊಡ್ಡ ಕನಸು' ಬಗ್ಗೆ ಉದ್ಯಮಿಗಳ ಪ್ಯಾನಲ್ ಚರ್ಚೆ



'ಸಣ್ಣ ಪಟ್ಟಣ ದೊಡ್ಡ ಕನಸು' ಪ್ಯಾನೆಲ್ ಚರ್ಚೆಯಲ್ಲಿ ಕೊಡಗಿನ ಅಗ್ರಿ ಟೆಕ್ ಸಂಸ್ಥೆ ಸಂಸ್ಥಾಪಕಿ ಡಾ.ಚೈತ್ರ ನಾರಾಯಣ್, ಶಿವಮೊಗ್ಗದ ಅರೇಕ ಟೀ ಸಂಸ್ಥೆಯ ಸಂಸ್ಥಾಪಕ ನಿವೇದನ್ ನೆಂಪೆ ಹಾಗೂ ಗುಂಡ್ಲುಪೇಟೆಯ ಸೈನ್ಟಿಯನ್ ಸಂಸ್ಥೆಯ ಸಂಸ್ಥಾಪಕ ಜಿ.ಎಸ್.ಡಿ. ಶ್ರೀನಿಧಿ ಇದ್ದಾರೆ.

ಮೈಸೂರು, ಆ.6(ಜಿಎ)– ಸಣ್ಣ ಪಟ್ಟಣಗಳಲ್ಲಿ ಉಳಿದುಕೊಂಡು ದೊಡ್ಡ ಕನಸನ್ನು ಸಾಕಾರಗೊಳಿಸಿಕೊಳ್ಳುವುದು ಹೇಗೆ ಎಂದು ತಿಳಿಸಿಕೊಟ್ಟ 'ಮೈಸೂರು ನವೋದ್ಯಮ ಉತ್ಸವ'...

ಮೈಸೂರಿನಲ್ಲಿ ಸ್ಟಾರ್ಟ್ ಅಪ್‌ಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಆರಂಭವಾಗಿರುವ 3 ದಿನಗಳ 'ಮೈಸೂರು ನವೋದ್ಯಮ ಉತ್ಸವ' (ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್) ಎರಡನೇ ದಿನವೂ ಅನೇಕ ನುರಿತ ಉದ್ಯಮಿಗಳ ಪ್ಯಾನಲ್ ಚರ್ಚೆ ನಡೆಸಿತು.

'ಸಣ್ಣ ಪಟ್ಟಣ ದೊಡ್ಡ ಕನಸು' ಎಂಬುದರ ಬಗ್ಗೆ ಕೊಡಗಿನ ಅಗ್ರಿ ಟೆಕ್ ಸಂಸ್ಥೆ ಸಂಸ್ಥಾಪಕಿಯಾದ ಡಾ.ಚೈತ್ರ ನಾರಾಯಣ್, ಶಿವಮೊಗ್ಗದ ಅರೇಕ ಟೀ ಸಂಸ್ಥೆಯ ಸಂಸ್ಥಾಪಕ ನಿವೇದನ್ ನೆಂಪೆ ಹಾಗೂ ಗುಂಡ್ಲುಪೇಟೆಯ ಸೈನ್ಟಿಯನ್ ಸಂಸ್ಥೆಯ ಸಂಸ್ಥಾಪಕ ಜಿ.ಎಸ್.ಡಿ. ಶ್ರೀನಿಧಿ ಅವರು ಪ್ಯಾನಲ್ ಚರ್ಚೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಉದ್ಯಮಗಳನ್ನು ಆರಂಭಿಸುವಾಗ ಎದುರಾಗುವ ಸವಾಲುಗಳ ಬಗ್ಗೆ ಸುದೀರ್ಘ ಮಾಹಿತಿ ನೀಡಿದರು.

ಕೊಡಗಿನ ಅಗ್ರಿ ಟೆಕ್ ಸಂಸ್ಥೆ ಸಂಸ್ಥಾಪಕಿ ಡಾ.ಚೈತ್ರ ನಾರಾಯಣ್ ಮಾತನಾಡಿ, ಯಾವುದೇ ಉದ್ಯಮ ಆರಂಭಿಸಬೇಕು ಎಂದರೆ ಅದಕ್ಕೆ ಪ್ರಮುಖವಾಗಿ ತಾಳ್ಮೆ ಎಂಬುದು ಬಹಳ ಮುಖ್ಯವಾಗಿರುತ್ತದೆ. ಉದಾಹರಣೆ ಕೊರೊನಾದಂತಹ ಸಂಕಷ್ಟಗಳು ಎದುರಾದಾಗ ಚಿಂತೆಗೀಡಾಗಬಾರದು. ಗ್ರಾಮಾಂತರ ಪ್ರದೇಶಗಳಲ್ಲಿ ಉಳಿದುಕೊಂಡು ಯಾವುದೇ ಉದ್ಯಮವಾದರೂ ಸಹ ನಿರ್ವಹಣೆ ಮಾಡಬಹುದಾಗಿದೆ ಅದಕ್ಕೆ ನಿಮ್ಮ ಯೋಜನೆಗಳು ಉತ್ತಮವಾಗಿರಬೇಕು ಎಂದು ತಿಳಿಸಿದರು. ನವೋದ್ಯಮ ಉತ್ಸವದಲ್ಲಿ ಎಲ್ಲರನ್ನು ಆಕರ್ಷಿಸುತ್ತಿರುವ ಎಲೆಕ್ಟ್ರಿಕ್ ವೆಂಡರ್ ಕಾರ್ಟ್ (ಬ್ಯಾಟರಿ ಚಾಲಿತ ತಳ್ಳುವ ಗಾಡಿ) ಮೈಸೂರಿನ ನ ಭೂತೋ ನ ಭವಿಷ್ಯತಿ ಟೆಕ್ ಪ್ರೈವೇಟ್ ಲಿಮಿಟೆಡ್ ಉತ್ತಮ ಭವಿಷ್ಯಕ್ಕೆ ಅತ್ಯುತ್ತಮ ಸವಾರಿ ಎಂಬ ಶೀರ್ಷಿಕೆ ಅಡಿ ಆರಂಭಿಸಿರುವ ಎಲೆಕ್ಟ್ರಿಕ್ ವೆಂಡರ್ ಕಾರ್ಟ್ ಬೀದಿ ಬದಿ ವ್ಯಾಪಾರಿಗಳಿಗೆ ಸಹಕಾರಿಯಾಗಲಿದೆ. ಇವುಗಳಲ್ಲಿ ಎರಡು ಬಗ್ಗೆಯ ಗಾಡಿಗಳಿದ್ದು, ಅದರಲ್ಲಿ ಪ್ರಮುಖವಾಗಿ 300 ಕೆ.ಜಿ. ಮತ್ತು 200 ಕೆಜಿ. ಸಾಮರ್ಥ್ಯವನ್ನು ಹೊಂದಿವೆ. ಒಂದು ಬಾರಿ ಚಾರ್ಜ್ ಮಾಡಿದರೆ, 40 ಕಿ.ಮೀ ಪ್ರಯಾಣ ಮಾಡಬಹುದಾಗಿದೆ. 300 ಕೆ.ಜಿ. ಸಾಮರ್ಥ್ಯ ಹೊಂದಿರುವ ಗಾಡಿಗೆ ವಿಶೇಷವಾಗಿ ಸೋಲಾರ್ ಅನ್ನು ಅಳವಡಿಸಲಾಗಿದ್ದು, ಸೌರಶಕ್ತಿ ಮೂಲಕವು ಈ ಗಾಡಿ ಚಲಿಸಲಿದೆ. ಈ ಎರಡು ವಾಹನಗಳು ಬೀದಿ ಬದಿ ವ್ಯಾಪಾರಿಗಳಿಗೆ ಉಪಯುಕ್ತವಾಗಲಿದ್ದು, ತರಕಾರಿ ಮಾರಾಟ ಮಾಡುವವರಿಗೆ ಸಹಕಾರಿಯಾಗಲಿದೆ ಎಂದು ಸಾರ್ವಜನಿಕರಿಂದ ಪ್ರಶಂಸೆಯ ಮಾತುಗಳು ಕೇಳಿ ಬರುತ್ತಿವೆ. ಮೊದಲನೇ ದಿನ ಉತ್ಸವದಲ್ಲಿ ಉದ್ಯಮಿಗಳಿಗಾಗಿ ಮೀಸಲಿಡಲಾಗಿತ್ತು. ಮೈಸೂರಿನ ಎಲ್ಲಾ ಪ್ರತಿಷ್ಠಿತ ಉದ್ಯಮಿಗಳಿಂದ ಮೆಚ್ಚುಗೆಗೆ ಪಾತ್ರವಾಗಿ ಉತ್ತಮ ಪ್ರತಿಕ್ರಿಯೆ ದೊರೆತಿತ್ತು. ಎರಡನೇ ದಿನವನ್ನು ಸಾರ್ವಜನಿಕರು ಮತ್ತು ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಮೀಸಲಿಡಲಾಗಿದ್ದು, ಇಂದು 4 ಸಾವಿರಕ್ಕೂ ಅಧಿಕ ಮಂದಿ ಉತ್ಸವದಲ್ಲಿ ಭಾಗವಹಿಸಿದ್ದು, ಎರಡನೇ ದಿನವೂ ಸಹ ಅಭೂತ ಪೂರ್ವ ಪ್ರತಿಕ್ರಿಯೆ ದೊರೆತ್ತಿದೆ ಎಂದು SJCE ವಿಜ್ಞಾನ ಮತ್ತು ತಂತ್ರಜ್ಞಾನ ಉದ್ಯಮಿಗಳ ಪಾರ್ಕ್ (STEP) ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಶಿವಶಂಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.





ಪ್ಯಾನಲ್ ಚರ್ಚೆಗಳು ಉತ್ತಮವಾಗಿ ಮೂಡಿ ಬರುತ್ತಿದ್ದು, ಎರಡು ದಿನ ಉತ್ಸವವನ್ನು ವೀಕ್ಷಿಸಿ ಅನೇಕ ಉದ್ಯಮಿಗಳಿಂದ ನಾವು ಪಾಲ್ಗೊಳಬೇಕಿತ್ತು. ನಮಗೂ ಅವಕಾಶ ನೀಡಿ ಎಂಬ ಮಾತುಗಳು ಕೇಳಿ ಬರುತ್ತಿವೆ. ಮುಂದಿನ ದಿನಗಳಲ್ಲಿ ಎಲ್ಲರಿಗೂ ಅವಕಾಶ ಕಲ್ಪಿಸುವಂತೆ ಹೇಳಲಾಗಿದೆ ಎಂದ ಅವರು, ಅಂತಿಮ ದಿನವಾದ ನಾಳೆ(ಆ.7) ವಿಶೇಷವಾಗಿ ಮೈಸೂರಿನ ಮಕ್ಕಳು ರೂಪಿಸಿರುವ ಯೋಜನೆಗಳು ಮತ್ತು ಉದ್ಯಮದ ಐಡಿಯಾಗಳನ್ನು ನೀಡಿಲಿದ್ದಾರೆ. ಮಹಿಳಾ ಉದ್ಯಮಿಗಳು, ಉದ್ಯಮದಲ್ಲಿ ಸಾಧನೆ ಮಾಡಿರುವವರು ಸೇರಿದಂತೆ ಅಂತಿಮ ದಿನವೂ ಜನತೆಗೆ 'ಮೈಸೂರು ನವೋದ್ಯಮ ಉತ್ಸವ' (ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್) ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಮಾಜಿ ಸಿಎಂ ಸಿದ್ದರಾಮಯ್ಯರಿಂದ ಇಂದು ಶ್ರೀವಿಶ್ವಕರ್ಮ ಸೇವಾ ಟ್ರಸ್ಟ್ ಉದ್ಘಾಟನೆ



ಮೈಸೂರು,ಆ.6(ಪಿಎಂ)– ವಿಶ್ವಕರ್ಮ ಸಮುದಾಯದ ಸರ್ವತೋಮುಖ ಶ್ರೇಯೋಭಿವೃದ್ಧಿಗಾಗಿ ಅಸ್ತಿತ್ವಕ್ಕೆ ತಂದಿರುವ ಶ್ರೀ ವಿಶ್ವಕರ್ಮ ಸೇವಾ ಟ್ರಸ್ಟ್‌ನ ಉದ್ಘಾಟನೆಯನ್ನು ಆ.7ರಂದು ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ನೆರವೇರಿಸಲಿದ್ದಾರೆ ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರದಲ್ಲಿ ಅಂದು ಬೆಳಗ್ಗೆ 10.30ಕ್ಕೆ ತುಮಕೂರು ಜಿಲ್ಲೆ ಮಧುಗಿರಿ ತಾಲೂಕಿನ ನಿಟ್ಟರಹಳ್ಳಿಯ ವಿಶ್ವಕರ್ಮ ಸಂಪನ್ಮೂಲ ಮಠದ ಡಾ.ಶ್ರೀ ನೀಲಕಂಠಾಚಾರ್ಯ ಸ್ವಾಮೀಜಿಯವರ ಸಾನ್ನಿಧ್ಯ ಮತ್ತು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರ ಅಧ್ಯಕ್ಷತೆಯಲ್ಲಿ ಸಿದ್ದರಾಮಯ್ಯನವರು ಟ್ರಸ್ಟ್ ಉದ್ಘಾಟಿಸಲಿದ್ದಾರೆ ಎಂದರು. ಇದೇ ಸಮಾರಂಭದಲ್ಲಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ಸಮುದಾಯದ 130ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.90ರಷ್ಟು ಅಂಕ ಗಳಿಸಿದ ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರ ಸ್ವೀಕರಿಸಲಿದ್ದಾರೆ. ಚಲನಚಿತ್ರ ನಟಿ ಭವ್ಯ ಟ್ರಸ್ಟ್‌ನ ನಾಮಫಲಕ ಅನಾವರಣ ಮಾಡಲಿದ್ದಾರೆ. ಶಾಸಕರಾದ ಹೆಚ್.ಪಿ.ಮಂಜುನಾಥ್, ಎಲ್.ನಾಗೇಂದ್ರ, ಡಾ.ಯತೀಂದ್ರ ಸಿದ್ದರಾಮಯ್ಯ, ಸಿ.ಎಸ್.ಪುಟ್ಟರಾಜು, ಅನಿಲ್ ಚಿಕ್ಕಮಾದು, ಸಿ.ಎಸ್.ನಿರಂಜನಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ, ಮುಖಂಡ ಬಿ.ಕೆ.ರಾಜು, ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಭಾಗ್ಯ ಮಾದೇಶ್, ರಮಣಿ (ರಮೇಶ್), ಎಂ.ಛಾಯಾದೇವಿ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದರು. ಟ್ರಸ್ಟ್‌ನ ಅಧ್ಯಕ್ಷ ಪುಟ್ಟಸ್ವಾಮಾಚಾರ್ ಆನಂದೂರು, ಗೌರವಾಧ್ಯಕ್ಷೆ ಕೆ.ಎನ್.ಶಾಂತಮ್ಮ, ಉಪಾಧ್ಯಕ್ಷ ಎಸ್.ರಾಮಚಂದ್ರ, ಖಜಾಂಚಿ ವರುಣ ನಿಂಗಾಚಾರ್, ಸಂಚಾಲಕ ರವಿಕುಮಾರ್, ಸಂಘಟನಾ ಕಾರ್ಯದರ್ಶಿ ರಾಮಲಿಂಗಾಚಾರ್, ಸಹ ಸಂಘಟನಾ ಕಾರ್ಯದರ್ಶಿ ಎಲ್.ಸತೀಶ್ ಗೋಷ್ಠಿಯಲ್ಲಿದ್ದರು.

ಮೂವರು ಖದೀಮರ ಬಂಧನ: 6.5 ಲಕ್ಷ ರೂ. ಮೌಲ್ಯದ ಆಭರಣ, 3 ದ್ವಿಚಕ್ರ ವಾಹನ ವಶ



ಮೈಸೂರು, ಆ.6 (ಆರ್‌ಕೆ)–ಮೂವರು ಖದೀಮರನ್ನು ಬಂಧಿಸಿರುವ ಮೈಸೂರಿನ ಎನ್.ಆರ್.ವಿಭಾಗದ ಎಸಿಪಿ ಸ್ಕ್ವಾಡ್ ಮತ್ತು ಎನ್.ಆರ್. ಠಾಣೆ ಪೊಲೀಸರು, 6.5 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಹಾಗೂ 3 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಬನ್ನೂರು ಹೋಬಳಿ ಚಾಮನಹಳ್ಳಿ ಗ್ರಾಮದ ನಂಜುಂಡ ಅವರ ಮಗ ಮಂಜುನಾಥ (27), ಪುಟ್ಟಸ್ವಾಮಿ ಅವರ ಮಗ ಗಣೇಶ(27) ಹಾಗೂ ಮಂಡ್ಯ ತಾಲೂಕು ಕೊಮ್ಮೇನಹಳ್ಳಿ ಗ್ರಾಮದ ರಾಜು ಅವರ ಮಗ ಸಂದೀಪ್(23) ಬಂಧಿತ ಆರೋಪಿಗಳು. ಜುಲೈ 22ರಂದು ದ್ವಿಚಕ್ರ ವಾಹನ ಕಳ್ಳತನ ಮತ್ತು ಸರ ಅಪಹರಣಕ್ಕೆ ಯತ್ನಿಸಿದ್ದ ಮಂಜುನಾಥನನ್ನು ಹಿಡಿದು ವಿಚಾರಣೆಗೊಳಪಡಿಸಿದಾಗ ಮತ್ತಿಬ್ಬರು ಭಾಗಿಯಾಗಿದ್ದಾರೆಂಬುದು ತಿಳಿಯಿತು.

ಬೇರೆ ಪ್ರಕರಣದಲ್ಲಿ ಜೈಲಿನಲ್ಲಿದ್ದ ಉಳಿದ ಇಬ್ಬರನ್ನು ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ ಪೊಲೀಸರು, 5 ಲಕ್ಷ ರೂ. ಮೌಲ್ಯದ 127 ಗ್ರಾಂ ತೂಗುವ 5 ಚಿನ್ನದ ಸರಗಳು, 1,50,000 ರೂ. ಬೆಲೆ ಬಾಳುವ 3 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡರು. ಜ್ಞಾನ ಭಾರತಿ ಠಾಣೆ, ಬ್ಯಾಡರಹಳ್ಳಿ ಠಾಣೆ, ತಾವರೆಕೆರೆ, ಕನಕಪುರ, ಕೆಆರ್‌ಎಸ್, ನಂಜನಗೂಡು, ಪಾಂಡವಪುರ ಹಾಗೂ ಕಿರುಗಾವಲು ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಚಿನ್ನದ ಸರ ಹಾಗೂ ದ್ವಿಚಕ್ರ ವಾಹನಗಳನ್ನು ಆರೋಪಿಗಳು ಕಳವು ಮಾಡುತ್ತಿದ್ದರು ಎಂಬುದು ತನಿಖೆಯಿಂದ ತಿಳಿದು ಬಂದಿತು. ಡಿಸಿಪಿಗಳಾದ ಪ್ರದೀಪ್ ಗುಂಟಿ, ಎಂ.ಎಸ್.ಗೀತಾ ಹಾಗೂ ಎನ್.ಆರ್. ಉಪ ವಿಭಾಗದ ಎಸಿಪಿ ಎಂ.ಶಿವಶಂಕರ್ ಮಾರ್ಗದರ್ಶನದಲ್ಲಿ ನಡೆದ ಈ ಪತ್ತೆ ಕಾರ್ಯಾಚರಣೆಯಲ್ಲಿ ಎನ್.ಆರ್.ಠಾಣೆ ಇನ್ಸ್‌ಪೆಕ್ಟರ್ ಅಜರುದ್ದೀನ್, ಸಬ್ ಇನ್ಸ್‌ಪೆಕ್ಟರ್ ಕೆ.ಎಸ್.ಗಂಗಾಧರ್, ಎಎಸ್‌ಐಗಳಾದ ರವಿ, ಅನಿಲ್ ಕೆ.ಶಂಕಪಾಲ್, ಎಸಿಪಿ ಸ್ಕ್ವಾಡ್‌ನ ಲಿಂಗರಾಜಪ್ಪ, ರಮೇಶ, ಸುರೇಶ, ಆರ್.ಆರ್.ಮಂಜುನಾಥ, ಹನುಮಂತ ಕಲ್ಲೇದ, ವೈ.ಟಿ.ಮಹೇಶ್, ದೊಡ್ಡೇಗೌಡ, ಬಸವರಾಜು, ಸಿ.ಸುನೀಲ್ ಕುಮಾರ್, ಕೆ.ಈರೇಶ್, ಗುರುದೇವ ಆರಾಧ್ಯ, ಸಿ.ಎಂ.ಮಂಜು, ಪಿ.ಕುಮಾರ್ ಹಾಗೂ ಶ್ಯಾಂ ಸುಂದರ್ ಅವರು ಪಾಲ್ಗೊಂಡಿದ್ದರು. ಈ ಪತ್ತೆ ಕಾರ್ಯವನ್ನು ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಪ್ರಶಂಸಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

07.08.2022 ಭಾನುವಾರ, ಮಳೆ ನಕ್ಷತ್ರ : ಆಶ್ಲೇಷ, 03.08.2022 ರಿಂದ 16.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ದಶಮೀ, ನಕ್ಷತ್ರ : ಅನೂರಾಧ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ದತ್ತಾಸ್ವಾಮಿಗೆ ತೈಲಾಭಿಷೇಕ, ಚಾತುರ್ಮಾಸ್ಯ ಪ್ರಯುಕ್ತ ಹರಿದ್ವಾರ್, ಋಷಿಕೇಶ್, ಕಾಶಿ, ಶ್ರೀಶೈಲ ಆಶ್ರಮ ಶಾಖೆಗಳಲ್ಲಿ ಸಾಧು ಭಂಡಾರ್, ಅನಾಥಾಶ್ರಮಗಳಲ್ಲಿ ಅನ್ನದಾನ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ, ದತ್ತನಗರ.

■ **ಗಾನಭಾರತೀ :** ಕೃಷ್ಣ ಜಯಂತಿ ಸ್ಪರ್ಧೆಗಳು, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 9 ರಿಂದ.

■ **ಮೈಸೂರು ಯೋಗ ಒಕ್ಕೂಟ, ಅಂತರ್‌ದೃಷ್ಟಿ ಬ್ರೈನ್ ಅಕಾಡೆಮಿ :** 75ನೇ ಸ್ವಾತಂತ್ರ್ಯ ದಿನಾಚರಣೆ ಮತ್ತು ಯೋಗಥಾನ್ ಪ್ರಯುಕ್ತ ಚಿತ್ರಕಲಾ ಸ್ಪರ್ಧೆ, ಸ್ಥಳ : ಬೆಳಗ್ಗೆ 10 ಗಂಟೆಗೆ ಪರಮಹಂಸ ಯೋಗ ಮಹಾವಿದ್ಯಾಲಯ, ರಾಮಕೃಷ್ಣನಗರ ಮತ್ತು ಸಂಜೆ 4ಕ್ಕೆ ಮಹರ್ಷಿ ಪಬ್ಲಿಕ್ ಸ್ಕೂಲ್.

■ **ನಮೋ ಯೋಗ ಭವನ:** ಉಚಿತ ಆರೋಗ್ಯ ತಪಾಸಣೆ ಶಿಬಿರ, ಅಧ್ಯಕ್ಷತೆ: ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಬಿ.ವಿ.ಮಂಜುನಾಥ್, ಪ್ರಾಸ್ತಾವಿಕ ನುಡಿ: ರಾಷ್ಟ್ರೀಯ ಯೋಗ ಚಾಂಪಿಯನ್ ಯೋಗ ಪ್ರಕಾಶ್, ಮುಖ್ಯ ಅತಿಥಿಗಳು: ಡಾ.ವೇದಾವತಿ, ಸ್ಥಳ: ನಮೋ ಯೋಗ ಭವನ, ರಾಮಾನುಜ ರಸ್ತೆ, ಬೆಳಗ್ಗೆ 10 ರಿಂದ.

■ **ಬಸವ ಸಮಿತಿ:** ಶರಣ ಸಂಗಮ 272 ಮತ್ತು ದತ್ತಿ ಕಾರ್ಯಕ್ರಮ, ಸಾನ್ನಿಧ್ಯ : ಕರ್ಪೂರವಳ್ಳಿ ಶ್ರೀ ಜಂಗಮ ಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ಜನ ಚೈತನ್ಯ ಫೌಂಡೇಷನ್:** ರಶ್ಮಿ ಅವರಿಗೆ ಜನ ಚೈತನ್ಯ ಪುರಸ್ಕಾರ ಮತ್ತು ಸ್ಪರ್ಧಾತ್ಮಕ ಪರೀಕ್ಷೆ ವಿದ್ಯಾರ್ಥಿಗಳೊಂದಿಗೆ ಸಂವಾದ, ಉದ್ಘಾಟನೆ: ಲೇಖಕ ನಾ. ದಿವಾಕರ, ಅಧ್ಯಕ್ಷತೆ : ನಿವೃತ್ತ ಜಂಟಿ ಕೃಷಿ ನಿರ್ದೇಶಕ ಶ್ರೀರಂಗ, ಮುಖ್ಯ ಅತಿಥಿಗಳು: ಪ್ರೊ.ಟಿ.ಎಂ.ಮಹೇಶ್, ಡಾ. ವಿ. ಮುನಿವೆಂಕಟಪ್ಪ, ಡಾ. ಅಮ್ಮಸಂದ್ರ ಸುರೇಶ್, ರವಿಗೌಡ, ಡಾ.ಎಲ್.ಸವಿತಾ, ಎನ್.ಶ್ರೀನಿವಾಸಲು, ಎಂ.ಶಿವಣ್ಣ ಕಂದೇಗಾಲ, ಪ್ರಾಸ್ತಾವಿಕ ನುಡಿ:ಜನ ಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 "ಬದುಕು ಬದಲಿಸಿದ ಶೋಧ" ಲೇಖನ ಮತ್ತು ಪ್ರಸ್ತುತಿ–ಸುರೇಂದ್ರನಾಥ್ ಸಾತ್ವಿಕ್, 6.40 ಭಾವಗೀತೆ–ಅಪೂರ್ವ ಶ್ರೀಧರ್, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ–ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.00 ಕೈಮಗ್ಗದಲ್ಲಿ ನೇಯಲಾದ ವಸ್ತ್ರಗಳ ಗುಣಮಟ್ಟ ಪರೀಕ್ಷೆ ಕುರಿತು ಮೈಸೂರಿನ ಮಗ್ಗದ ಮನೆಯ ಪ್ರಶಾಂತ್ ಅವರೊಂದಿಗೆ ಮಾತುಕತೆ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಪಯಣ, 9.40 ನಮ್ಮ ಆರೋಗ್ಯ–ವಿಶ್ವ ಸ್ತನ್ಯಪಾನ ಸಪ್ತಾಹದ ಸಂದರ್ಭದಲ್ಲಿ ಸನ್ಯಪಾನದ ಮಹತ್ವ ಕುರಿತು ಡಾ. ವಾಮನ್ ರಾವ್ ಬಾಪಟ್ ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ಬೆಳ್ಳೂರು ಹೋಬಳಿ ಹಟ್ಣ ಸರ್ಕಾರಿ ಪ್ರೌಢಾಶಾಲಾ ವಿದ್ಯಾರ್ಥಿಗಳಿಂದ "ಯಕ್ಷಗಾನದಲ್ಲಿ ಕರಿಭಂಟನ ಕಾಳಗ", 11.00 ಹರ್ ಘರ್ ತಿರಂಗ್–ಎನ್.ವಿ. ಪಣೀಶ್ ಅವರೊಂದಿಗೆ ಸಂದರ್ಶನ

ಮಧ್ಯಾಹ್ನ: 12.30 ದೇವರನಾಮ–ರಕ್ಷಣಾ ಆರ್., 12.45 ಜನಪದಗೀತೆ–ಚೆನ್ನಾಜಮ್ಮ ಮತ್ತು ತಂಡ, 1.20 ಭಾವಗೀತೆ–ಅಜಯ್ ಜಿ.ಪ್ರಸಾದ್, 2.35 ಚಲನಚಿತ್ರ ಧ್ವನಿ ವಾಹಿನಿ "ಮಯೂರ", 3.40 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ಶಾಂಭವಿ ವಿಲಾಸ, ಪ್ರಸ್ತುತಿ– ಮಂಗಳೂರು ಕೊದಪದವಿನ ಮುಳಿಯ ಗೋವಿಂದ ಭಟ್ ಹಾಗೂ ಕಲಾವಿದರು, 7.00 AIR Nxt ನಮ್ಮ ಕನಸಿಗೆ ನಮ್ಮದೇ ಮಾತು, 9.05 ಚಿಣ್ಣರ ಸುದ್ದಿ ಪ್ರಚಲಿತ ವಿದ್ಯಮಾನಗಳನ್ನು ಒಳಗೊಂಡ ವಾರ್ತಾ ಸಂಚಿಕೆ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ಪ್ರಸಾದ್ ಗುಲ್ವಾನಿ – ಗಾಯನ, 11.00 ಸವಿನೆನಪು

■ **ನೇಚರ್ ಬೆಲ್ ವೆಲ್‌ನೆಸ್ ಕ್ಲಿನಿಕ್ :** ಉದ್ಘಾಟನಾ ಸಮಾರಂಭ, ಉದ್ಘಾಟನೆ: ಆಯೂಷ್ ನಿರ್ದೇಶಕ ಡಾ. ಜಿ.ಎನ್. ಶ್ರೀಕಂಠಯ್ಯ, ಮುಖ್ಯ ಅತಿಥಿಗಳು : ಡಾ. ಜಗದೀಶ್ ಯಾಜಿ, ಶಾಸಕರಾದ ಎಲ್. ನಾಗೇಂದ್ರ, ಜಿ.ಟಿ. ದೇವೇಗೌಡ, ಮಾಜಿ ಶಾಸಕ ವಾಸು, ಪಾಲಿಕೆ ಸದಸ್ಯ ಸುಬ್ಬಯ್ಯ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಸ್ಥಳ: ವಿಜಯನಗರ 2ನೇ ಹಂತ, ಬೆಳಗ್ಗೆ 11ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಮಾನಸೋಲ್ಲಾಸ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ ಅನಂತರಾಮು ಅವರಿಂದ ಭಾರತೀಯ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ರಾಘವೇಂದ್ರಸ್ವಾಮಿ ಮಠ :** ಪಂಡಿತ್ ಕೃಷ್ಣಾಚಾರ್ಯ ನಾಗಸಂಪಿಗೆ ಅವರಿಂದ ರಾಮಾಚಾರಿತ್ರ್ಯ ಮಂಜರಿಯ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 6.30 ರಿಂದ.

■ **ರಂಗಾಯಣ :** ಸುಬ್ಬಯ್ಯನಾಯ್ಡು ರಂಗ ಕಾರ್ಯಾಗಾರದ ಶಿಬಿರಾರ್ಥಿಗಳಿಂದ ಅಶ್ವಪರ್ವ ನಾಟಕ ಪ್ರದರ್ಶನ, ನಿರ್ದೇಶನ : ಕಾರ್ತಿಕ್ ಉಪಮನ್ಯು ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರೊ. ಹೆಚ್.ಬಿ. ದೇವಣ್ಣ ಅವರಿಂದ ಸುರಂಗ ಕವಿಕೃತ ತ್ರಿಷಷ್ಟಿ ಪುರಾತನ ಚಾರಿತ್ರಂ ಕುರಿತು ಪ್ರವಚನ, ಡಿ.ಎಂ.ಸಿದ್ದಲಿಂಗಸ್ವಾಮಿ ಅವರಿಂದ ವಾಚನ, ಸ್ಥಳ: ಸುತ್ತೂರು ಮಠ, ಬೆಳಗ್ಗೆ 6.30 ರಿಂದ.

Promotional Feature

ತಾತನ ಸ್ಮರಣಾರ್ಥ ಶಿಬಿರ



ಎಂ.ಸೋನಿ ಕರೀಗೌಡರ 23ನೇ ಪುಣ್ಯ ಸ್ಮರಣಾರ್ಥ

ಉಚಿತ ಕುಡಿತ ಬಿಡಿಸುವ ಶಿಬಿರ

ಬಸವರಾಜು ಅವರು ಸಮಾಜ ಸೇವೆಗೆ ಪ್ರೇರಕ ಶಕ್ತಿಯಾದ ತಮ್ಮ ತಾತ ಕೆಜಿ ಕೊಪ್ಪಲಿನ ಯಜಮಾನರಾದ ಲೇಟ್ ಎಂ.ಸೋನಿ ಕರಿಗೌಡ ಅವರ 23 ನೇ ವರ್ಷದ ಸವಿ ನೆನಪಿನ ಪುಣ್ಯ ಸ್ಮರಣಾರ್ಥ ಆಗಸ್ಟ್ 12 ರಂದು ಬೃಹತ್ ಮಟ್ಟದಲ್ಲಿ 19 ನೇ ಉಚಿತ ಮದ್ಯ ವರ್ಜನ ಶಿಬಿರ ಆಯೋಜಿಸಿದ್ದಾರೆ. ಮೈಸೂರು ಸೇರಿದಂತೆ ಸುತ್ತಲಿನ ಜಿಲ್ಲೆಯಲ್ಲಿ ಮದ್ಯದ ಸೇರಿದಂತೆ ಮಾದಕ ವಸ್ತುವಿನ ಚಟಕ್ಕೆ ಬಲಿಯಾದ ಯುವಕರನ್ನು ಚಟದಿಂದ ಮುಕ್ತಿಗೊಳಿಸುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ತರಲು ಯೋಜನೆ ರೂಪಿಸಿದ್ದಾರೆ. 21 ದಿನಗಳ ಕಾಲ ಉಚಿತ ಶಿಬಿರ ನಡೆಸುವ ಮೂಲಕ ವ್ಯಸನಿಗಳನ್ನು ಕುಡಿತದ ಚಟದಿಂದ ಬಿಡುಗಡೆ ಮಾಡಿ, ಹೊಸ ಜೀವನ ಕಲ್ಪಿಸಲು ಸಿದ್ದತೆ ನಡೆಸಿದ್ದಾರೆ. ಅದ್ಕಕಾಗಿ ಸ್ವಯಂ ಸೇವಕರ ತಂಡವನ್ನೇ ಸಿದ್ದಪಡಿಸಿದ್ದಾರೆ.

ಬಸವ ಮಾರ್ಗ ಫೌಂಡೇಷನ್‌ನ ವಿಳಾಸ:

ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರ, ನಂ.23/61, ಹೆಬ್ಬಾಳು ರಿಂಗ್ ರಸ್ತೆ, ಶೇಷಾದ್ರಿಪುರಂ ಕಾಲೇಜು ಹತ್ತಿರ, ಭಾರತ್ ಪೆಟ್ರೋಲ್ ಬಂಕ್ ಎದುರು, ಮೈಸೂರು. ದೂ. ಸಂಖ್ಯೆ: **8553111999,8803344999.**

ಕಾಲೇಜುಗಳಲ್ಲಿ ಜಾಗೃತಿ

ತಂಬಾಕು ಸೇರಿದಂತೆ ಮಾದಕ ವಸ್ತುಗಳಿಗೆ ಶಾಲಾ–ಕಾಲೇಜುಗಳು ವಿದ್ಯಾರ್ಥಿಗಲೇ ಬಲಿಯಾಗುತ್ತಿದ್ದಾರೆ ಎಂಬುದನ್ನು ಮನಗಂಡ ಬಸವರಾಜು ಅವರು, ಫೌಂಡೇಷನ್ ಮೂಲಕ ನಗರದ ಕಾಲೇಜುಗಳಲ್ಲಿ ಮಾದಕ ವಸ್ತು ಸಂಬಂಧ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಮಾದಕ ವಸ್ತುವಿನಿಂದ ಆಗುವ ಹಾನಿಯ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಎಂಐಟಿ, ಎಸ್‌ಜೆಸಿಇ, ವಿದ್ಯಾ ವಿಕಾಸ್ ಮತ್ತು ಶೇಷಾದ್ರಿಪುರಂ ಕಾಲೇಜುಗಳಲ್ಲಿ ಈಗಾಲೇ ಜಾಗೃತಿ ಕಾರ್ಯಕ್ರಮ ನಡೆಸಿದ್ದಾರೆ. ಇದರೊಂದಿಗೆ ಮಹಾರಾಜ ಕಾಲೇಜಿನಲ್ಲಿ ನಶಾ ಮುಕ್ತ ಭಾರತ ಅಭಿಯಾನದಡಿ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುತ್ತಿದ್ದಾರೆ. ಹೀಗೆ ಶಾಲಾ–ಕಾಲೇಜುಗಳಲ್ಲಿ ಮಾದಕ ವಸ್ತುಗಳ ವಿರುದ್ಧ ನಿರಂತವರಾಗಿ ಜಾಗೃತಿ ಮೂಡಿಸುತ್ತಿದ್ದಾರೆ.

ನಾನಾ ಪ್ರಶಸ್ತಿ






ಮಾದಕ ವಸ್ತು ವಿರುದ್ಧ ಹೋರಾಡುತ್ತಿರುವ ಬಸವರಾಜು ಅವರ ಸೇವಾ ಕಾರ್ಯವನ್ನು ಗುರುತಿಸಿ ಟೈಮ್ಸ್ ಗ್ರೂಪ್‌ನ ವಿಜಯ ಕರ್ನಾಟಕ ಪತ್ರಿಕೆಯು ಅಚೀವರ್ಸ್ ಆಫ್ ಕರ್ನಾಟಕ ಪ್ರಶಸ್ತಿ ನೀಡಿ ಗೌರವಿಸಿದೆ. ಇದರೊಂದಿಗೆ ಮೈಸೂರು ಮಹಾ ನಗರ ಪಾಲಿಕೆ, ಚಾಮರಾಜೇಂದ್ರ ಮೃಗಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಎಸ್‌ಎಂಟಿ ಕೋವಿಡ್ ಕೇರ್ ಸೆಂಟರ್ ಹಾಗೂ ಸುರಕ್ಷಾ ಫೌಂಡೇಷನ್, ರೋಟರಿ ಸಂಸ್ಥೆ ಸೇರಿದಂತೆ ನಾನಾ ಸಂಘ–ಸಂಸ್ಥೆಗಳು ಇವರ ಸೇವಾ ಕಾರ್ಯವನ್ನು ಗುರುತಿಸಿ ಪ್ರಶಸ್ತಿ ನೀಡಿ ಅಭಿನಂದಿಸಿದೆ.

ಪೌಷ್ಟಿಕ ಆಹಾರ:



ನಾಲ್ಕು ಗೋಡೆಗಳ ಮಧ್ಯೆ ಇರುವ ಶಿಬಿರಾರ್ಥಿಗಳಿಗೆ ರುಚಿಕರವಾದ ಪೌಷ್ಟಿಕ ಅಹಾರ ನೀಡುವ ಮೂಲಕ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಲಾಗಿದೆ. ಮಾಂಸ, ಮೊಟ್ಟೆ, ಮೀನು ಹೀಗೆ ಮಾಂಸ ಆಹಾರದೊಂದಿಗೆ ಹಣ್ಣು– ಹಂಪಲು, ತರಕಾರಿ–ಸೊಪ್ಪು ಬಳಸಿ ಊಟ ತಿಂಡಿ ನೀಡಲಾಗುತ್ತದೆ. ಆರೋಗ್ಯ ರಕ್ಷಣೆಗೆ ಮುಂಜಾನೆ ಮತ್ತು ಸಂಜೆ ಕಷಾಯವನ್ನು ನೀಡಲಾಗುತ್ತಿದೆ.



ಕುಡಿತ ಚಟವಲ್ಲ ರೋಗ

ಇಡೀ ವಿಶ್ವದಲ್ಲಿ ಮದ್ಯ ಸೇವನೆಯಿಂದ ಸಾಯು ವವರ ಸಂಖ್ಯೆ ಹೆಚ್ಚಾಗಿದ್ದು, ಹೃದ್ರೋಗ, ರಸ್ತೆ ಅಪಘಾತದಿಂದ ಸಾಯು ವವರ ಸಂಖ್ಯೆ ಯಷ್ಟೇ ಕುಡಿತದ ಚಟದಿಂದ ಮೃತಪಡು ವವರ ಸಂಖ್ಯೆ ಹೆಚ್ಚಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಈ ಕುಡಿತ ಚಟವಲ್ಲ. ರೋಗ ಎಂಬುದನ್ನು ಸಮಾಜ ಅರಿಯಬೇಕಿದೆ ಎನ್ನುತ್ತಾರೆ ಬಸವ ಮಾರ್ಗ ಫೌಂಡೇಷನ್‌ನ ಅಧ್ಯಕ್ಷ ಎಸ್. ಬಸವರಾಜು.

ಕುಡಿತ, ತಂಬಾಕು, ಸಲ್ಯೂಷನ್, ಗಾಂಜಾ, ಅಫೀಮು ಸೇವನೆಗೆ ಒಳಗಾಗುವರಲ್ಲಿ 16 ರಿಂದ 20 ವಯಸ್ಸಿನ ಯುವಕರೇ ಹೆಚ್ಚಾಗಿದ್ದು, ಒಂದು ಸ್ನೇಹಿತರ ಸಹವಾಸ ಮತ್ತೊಂದು ಕುತೂಹಲಕ್ಕೆ ಬಲಿಯಾಗಿ ದಾಸರಾಗುತ್ತಿದ್ದಾರೆ.

ಸ್ವಯಂ ಸೇವಕರ ತಂಡ

ಕೇಂದ್ರದಲ್ಲಿ ವ್ಯಸನ ಮುಕ್ತರಾಗಲು ಬರುವವರನ್ನು ನೋಡಿಕೊಳ್ಳಲು 25 ಮಂದಿಯ ಸ್ವಯಂ ಸೇವಕರ ತಂಡವಿದೆ. ಇವರ್‍ಯಾರು ವೇತನಕ್ಕೆ ನಿಯೋಜನೆಗೊಂಡವರಲ್ಲ. ಇಲ್ಲಿಯೇ ಕುಡಿತದ ಚಟ ಬಿಡಲು ಬಂದು ಸೇರಿಕೊಂಡವರು, ಕ್ರಮೇಣ ಕುಡಿತದ ಚಟ ಬಿಟ್ಟು, ತಮ್ಮಂತೆ ಬರುವ ಮದ್ಯ ವ್ಯಸನಿಗಳ ಸೇವೆಗೆ ಪಣ ತೊಟ್ಟಿದ್ದಾರೆ. ಕೇಂದ್ರದಲ್ಲಿಯೇ ಆಶ್ರಯ ಪಡೆದು ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬಸವ ಮಾರ್ಗ ಫೌಂಡೇಷನ್‌ನ ವಿಳಾಸ:

ಬಸವ ಮಾರ್ಗ ವ್ಯಸನ ಮುಕ್ತ ಕೇಂದ್ರ, ನಂ.23/61, ಹೆಬ್ಬಾಳು ರಿಂಗ್ ರಸ್ತೆ, ಶೇಷಾದ್ರಿಪುರಂ ಕಾಲೇಜು ಹತ್ತಿರ, ಭಾರತ್ ಪೆಟ್ರೋಲ್ ಬಂಕ್ ಎದುರು, ಮೈಸೂರು. ದೂ. ಸಂಖ್ಯೆ: **8553111999,8803344999.**



ವ್ಯಸನ ಮುಕ್ತ ಸಮಾಜಕ್ಕೆ ಉದ್ಯಮಿ ಬಸವರಾಜು ಪಣ

ಮೈಸೂರು: ಸಾಮಾನ್ಯವಾಗಿ ಉದ್ಯಮ ಕ್ಷೇತ್ರದಲ್ಲಿ ಇರುವವರಿಗೆ ತಮ್ಮ ಉದ್ಯಮವನ್ನು ಮತ್ತಷ್ಟು ಬೆಳೆಸಬೇಕು ಎಂಬ ಹಂಬಲ, ತುಡಿತವಿರುತ್ತದೆ. ಆದರೆ ಮೈಸೂರಿನ ಈ ಉದ್ಯಮಿಗೆ ವ್ಯಸನ ಮುಕ್ತ ಸಮಾಜದ ನಿರ್ಮಾಣದ ಕನಸಿದೆ. ಈ ಕನಸಿನ ಸಾಕಾರಕ್ಕೆ ತಮ್ಮ ಅಮೂಲ್ಯ ಸಮಯದೊಂದಿಗೆ ಆದಾಯದ ಬಹುಪಾಲನ್ನು ಮೀಸಲಿರಿಸಿದ್ದಾರೆ.

ಮದ್ಯದ ದಾಸ್ಯಕ್ಕೆ ಸಿಲುಕಿರುವ ಮದ್ಯ ವ್ಯಸನಿಗಳ ಚಟ ಬಿಡಿಸಿ ಸಮಾಜದ ಮುಖ್ಯ ವಾಹಿನಿಗೆ ತರುವ ಮೂಲಕ ಮದ್ಯ ಮುಕ್ತ ಸಮಾಜದ ನಿರ್ಮಾಣಕ್ಕೆ ಪಣ ತೊಟ್ಟಿದ್ದಾರೆ.

ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಪಟ್ಟ ವ್ಯಸನಿಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ವ್ಯಸನಿಗಳ ಆಶ್ರಮವನ್ನು ಸ್ಥಾಪಿಸಲು ಸಿದ್ದತೆ ನಡೆಸಿದ್ದಾರೆ. ಅವರೇ ಮೈಸೂರು ನಗರದ ಯಶಸ್ವಿ ಉದ್ಯಮಿ ಎಸ್. ಬಸವರಾಜು.

ತಮ್ಮಂತೆ ಮದ್ಯ ವ್ಯಸನಿಗಳಾಗಿದ್ದ ಸ್ನೇಹಿತರೊಂದಿಗೆ ಸೇರಿ ಮದ್ಯ ವರ್ಜನ ಶಿಬಿರಗಳನ್ನು ನಡೆಸುವ ಮೂಲಕ 1500 ಕ್ಕೂ ಹೆಚ್ಚು ಮಂದಿಗೆ ಹೊಸ ಜೀವನದ ಸನ್ಮಾರ್ಗ ತೋರುವ ಮೂಲಕ ದಾರಿದೀಪವಾಗಿದ್ದಾರೆ.

ನಗರ ಹೊರ ವಲಯದಲ್ಲಿರುವ ಹೆಬ್ಬಾಳು ರಿಂಗ್ ರಸ್ತೆಯ ಬಳಿ ಬಸವ ಮಾರ್ಗ ಫೌಂಡೇಷನ್ ನೇತೃತ್ವದಲ್ಲಿ ಮದ್ಯ ವರ್ಜನಾ ಕೇಂದ್ರ ಸ್ಥಾಪಿಸಿ, ಕಳೆದ ಮೂರು ವರ್ಷದ ಅವಧಿಯಲ್ಲಿ 1500 ಮಂದಿ ಮದ್ಯ ವ್ಯಸನಿಗಳನ್ನು ಕುಡಿತದ ದಾಸ್ಯದ ಬಂಧನದಿಂದ ಮುಕ್ತಿಗೊಳಿಸಿದ್ದಾರೆ. ದೇಹಕ್ಕೂ ಮನಸ್ಸಿಗೂ ನೋವುಂಟು ಮಾಡದೇ ವ್ಯಸನ ಮುಕ್ತಗೊಳಿಸುವುದನ್ನೇ ಫೌಂಡೇಷನ್‌ನ ಧ್ಯೇಯವಾಗಿಸಿಕೊಂಡಿದ್ದಾರೆ.

ಇಂಡಿಯನ್ ಟಿವಿ ಮೂಲಕ ಸಮಾಜ ಸುಧಾರಣೆಯೊಂದಿಗೆ, ಸಮಾಜದ ಅಂಡು–ಡೊಂಕನ್ನು ತಿದ್ದುತ್ತಾ, ಶೋಷಿತ ಸಮುದಾಯಕ್ಕೆ ಮಾಧ್ಯಮದ ಮೂಲಕ ದನಿಯಾಗಿರುವ ಬಸವರಾಜು ಅವರು, ತಮ್ಮ ಫೌಂಡೇಷನ್ ಮೂಲಕವೂ ಸಹ ಪರಿಸರ ಸ್ನೇಹಿ ಕಾರ್ಯದೊಂದಿಗೆ ವ್ಯಸನ ಮುಕ್ತ ಸಮಾಜದ ಗುರಿ ಹೊಂದಿದ್ದಾರೆ.

ಕುಡಿತ ಸೇರಿದಂತೆ ಮಾದಕ ವಸ್ತುಗಳ ಸೇವನೆಯ ದಾಸರಾಗಿ ಅಧೋಗತಿಗಿಳಿದ ಯುವ ಜನರಿಗೆ ಹೊಸ ಬದುಕು ನೀಡಿದ್ದಾರೆ.ಮೂಲತಃ ಕೃಷಿಕರಾದ ಮೈಸೂರಿನ ಕೆ.ಜಿ. ಕೊಪ್ಪಲಿನ ನಿವಾಸಿಯಾದ ಲೇಟ್ ಎಂ.ಸೋನಿ ಕರಿಗೌಡ ಮತ್ತು ಬಸಮ್ಮ ಅವರ ಮೊಮ್ಮಗನಾದ ಬಸವರಾಜು ಅವರು, ಶ್ರೀನಿವಾಸ್ ಮತ್ತು ಚನ್ನಮ್ಮ ದಂಪತಿಯ ಮೂವರು ಪುತ್ರರಲ್ಲಿ ಒಬ್ಬರಾಗಿದ್ದಾರೆ. ಕುಟುಂಬದ ಪೋಷಕರು ನಡೆಸುತ್ತಿದ್ದ ಕೃಷಿ ಕಾರ್ಯದೊಂದಿಗೆ ನಾನಾ ವ್ಯಾವಹಾರಿಕ ಚಟುವಟಿಕೆ ನಡೆಸುವ ಮೂಲಕ ಚಿಕ್ಕ ವಯಸ್ಸಿನಲ್ಲಿಯೇ ಯಶಸ್ವಿ ಉದ್ಯಮಿಯಾಗಿ ಬೆಳೆದ ಬಸವರಾಜು ಅವರಿಗೆ ಸಮಾಜ ಸೇವೆ ಮಾಡಬೇಕೆಂಬ ತುಡಿತ ಸದಾ ಮನದಲ್ಲಿ ಇತ್ತು. ಶೋಷಿತ ಮಹಿಳೆಯರು, ಅನಾಥ ಮಕ್ಕಳು ಮತ್ತು ನಿರ್ಲಕ್ಷ್ಯಕ್ಕೆ ಗುರಿಯಾದ ವೃದ್ಧರ ರಕ್ಷಣೆಗೆ ಆಶ್ರಮ ತೆರೆಯ ಬೇಕೆಂಬ ಹಂಬಲದಲ್ಲಿದ್ದರು. ಅದಕ್ಕಾಗಿ ಜಮೀನು ಖರೀದಿಸಿ ಆಶ್ರಮ ನಡೆಸುವ ಹಂತಕ್ಕೆ ವ್ಯವಸ್ಥೆ ಮಾಡಿದ್ದರು. ಈ ಮಧ್ಯೆ ಕೆಲ ಸ್ನೇಹಿತರ ಸಹವಾಸದಿದ ಕಲಿತ ಮದ್ಯ ಸೇವನೆ ಚಟವಾಗಿ ಪರಿಣಮಿಸಿತು. ಇದರಿಂದ ನೆಮ್ಮದಿ, ಮನಃಶಾಂತಿಯನ್ನು ಕಳೆದುಕೊಂಡರು. ಜತೆಗೆ ಪೋಷಕರ ಕೋಪಕ್ಕೆ ಸಹ ಗುರಿಯಾದರು. ತಾವು ಸಹ ಕುಡಿತದ ಚಟ ಬಿಡುವ ಪ್ರಯತ್ನದೊಂದಿಗೆ ತನ್ನಂತೆ ಕುಡಿತದ ಚಟಕ್ಕೆ ಬಲಿಯಾಗಿ ನೆಮ್ಮದಿ ಕಳೆದುಕೊಂಡವರನ್ನು ಮದ್ಯ ಮುಕ್ತರನ್ನಾಗಿ ಸಮಾಜದ ಮುಖ್ಯ ವಾಹಿನಿಗೆ ತರುವ ಸಂಕಲ್ಪ ಮಾಡಿದರು.

ಅದಕ್ಕಾಗಿ ಮದ್ಯ ವರ್ಜನ ಶಿಬಿರಗಳನ್ನು ಆಯೋಜಿಸಲು ನಿರ್ಧರಿಸಿದರು. ಆಗ ತಮ್ಮಂತೆ ಮದ್ಯ ವ್ಯಸನಿಯಾಗಿದ್ದು, ಮದ್ಯ ಬಿಟ್ಟಿದ್ದ ಶಂಕರ್ ಅವರ ಪರಿಚಯವಾಯಿತು. ಅವರ ಮೂಲಕ ತಮ್ಮದೇ ತೋಟದ ಮನೆಯಲ್ಲಿ ಮದ್ಯ ವರ್ಜನ ಶಿಬಿರನ್ನು ಆಯೋಜಿಸಿದರು. ಶಿಬಿರದಲ್ಲಿ ಪಾಲ್ಗೊಂಡಿದ್ದ ನೂರಾರು ಮಂದಿಗೆ ಮನೋ ವೈದ್ಯರು ಮತ್ತು ಆಪ್ತ ಸಮಾಲೋಚಕರ ಮಾರ್ಗದರ್ಶನ, ಕುಡಿತದ ಚಟದಿಂದ ದಾರುಣ ಸ್ಥಿತಿ ತಲುಪಿದ ಕುಡುಕರ ಜೀವನ ವೃತ್ತಾಂತವನ್ನು ಶಿಬಿರಾರ್ಥಿಗಳ ಮುಂದೆ ಬಿಚ್ಚಿಡುವ ಪ್ರಯತ್ನ ಮಾಡಲಾಯಿತು.

ಇದರಿಂದ ಪ್ರಭಾವಿತರಾದ ಬಸವರಾಜು ಅವರು ಕುಡಿತದ ದಾಸ್ಯಕ್ಕೆ ಬಲಿಯಾಗುವುದಿಲ್ಲ ಎಂದು ಶಪಥ ಮಾಡಿ, ಮದ್ಯ ವ್ಯಸನದಿಂದ ಮುಕ್ತರಾಗಿ ಹೊಸ ಜೀವನ ಆರಂಭಿಸಿದರು.

ಸಾವಿರಾರು ಮಂದಿಯ ವ್ಯಸನ ಮುಕ್ತಗೊಳಿಸಿದ

ಬಸವ ಮಾರ್ಗ ಫೌಂಡೇಷನ್

ಮಾದಕ ವ್ಯಸನಿಗಳ ಆಶ್ರಮ ಸ್ಥಾಪನೆಗೆ ಸಂಕಲ್ಪ



ಕುಡಿತ ಸೇರಿದಂತೆ ಮಾದಕ ವಸ್ತುಗಳ ವ್ಯಸನದಿಂದ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಜನರನ್ನು ಚಟದಿಂದ ಬಿಡುಗಡೆಗೊಳಿಸಿ ಸ್ವಯಂ ಉದ್ಯೋಗದ ತರಬೇತಿ, ಸಮಾಜದ ಮುಖ್ಯ ವಾಹಿನಿಗೆ ತರುವುದೇ ನಮ್ಮ ಉದ್ದೇಶ, ಅದಕ್ಕಾಗಿ ವ್ಯಸನಿಗಳ ಆಶ್ರಮವನ್ನು ಸ್ಥಾಪಿಸಲಾಗುವುದು. ವ್ಯಸನ ಮುಕ್ತ ಸಮಾಜವೇ ನನ್ನ ಗುರಿ.

– ಎಸ್.ಬಸವರಾಜು, ಅಧ್ಯಕ್ಷರು, ಬಸವ ಮಾರ್ಗ ಫೌಂಡೇಷನ್.

ಹೆತ್ತವರ ಸಂತಸ:

ಸಮಾಜ ಸೇವೆಗಾಗಿ ಸಂಪಾದನೆಯ ಬಹು ಪಾಲು ಹಣ ವೆಚ್ಚ ಮಾಡುತ್ತಿದ್ದ ಬಸವರಾಜು ಅವರ ಕಾರ್ಯದಿಂದ ಚಿಂತಾಕ್ರಾಂತರಾಗಿದ್ದ ಪೋಷಕರು, ಅದೇ ಸಮಾಜ ಸೇವಾ ಕಾರ್ಯದಿಂದಲ್ಲೇ ಮಗ ಕುಡಿತದಿಂದ ಹೊರ ಬಂದ ಎಂಬ ವಿಷಯ ತಿಳಿದು ಸಂತಸ ಪಟ್ಟರು. ಪುತ್ರನ ಸೇವಾ ಕಾರ್ಯಕ್ಕೆ ಬೆಂಬಲವಾಗಿ ನಿಂತರು. ಸಮಾಜ ಸೇವೆಯಿಂದ ಒಳ್ಳೆಯ ಮಾರ್ಗ ಹಿಡಿದ ಮಗನ ಸಮಾಜ ಸೇವೆ ನಿರಂತರವಾಗಿರಲಿ ಎಂದು ಆಶಿಸಿ, ಪ್ರೋತ್ಸಾಹ ನೀಡುತ್ತಿದ್ದಾರೆ.

ಬಸವ ಮಾರ್ಗ ಫೌಂಡೇಷನ್ ಸ್ಥಾಪನೆ

ಇಂತಹ ಸೇವಾ ಕಾರ್ಯ ಸಂಘಟನೆ ಮೂಲಕ ನಿರಂತರವಾಗಿ ಸಾಗಬೇಕೆಂಬ ಉದ್ದೇಶದಿಂದ ತಮ್ಮಂತೆ ಸಮಾನ ಮನಸ್ಕರು ಮತ್ತು ಸ್ನೇಹಿತರನ್ನು ಸೇರಿಸಿಕೊಂಡು ಬಸವ ಮಾರ್ಗ ಫೌಂಡೇಷನ್ ಸ್ಥಾಪಿಸಿದರು. ಫೌಂಡೇಷನ್‌ನಡಿ ನಗರದ ಹೊರ ವಲಯದಲ್ಲಿರುವ ಹೆಬ್ಬಾಳಿನಲ್ಲಿ ವ್ಯವಸ್ಥಿತ ಕಟ್ಟಡವನ್ನು ಬಾಡಿಗೆಗೆ ಪಡೆದು ಮಾದಕ ವಸ್ತು ವ್ಯಸನಿಗಳ ಸೇವಾ ಕೇಂದ್ರ ತೆರೆದರು. ಇವರ ಸೇವಾ ಕಾರ್ಯಕ್ಕೆ ಹಲವು ಮಂದಿ ಚುನಾಯಿತ ಪ್ರತಿನಿಧಿಗಳು ಸೇರಿದಂತೆ ಸಂಘ–ಸಂಸ್ಥೆ ಗಳು ಸಹ ಕೈ ಜೋಡಿಸಿ ದವು. ಕೇಂದ್ರದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಮಾದರಿ ಕೇಂದ್ರವಾಗಿಸಿದರು. ಮದ್ಯ ವ್ಯಸನಿಗಳ ಪರಿವರ್ತನೆಗೆ ನುರಿತ ಮನೋವೈದ್ಯರು ಮತ್ತು ಆಪ್ತ ಸಮಾಲೋಚಕರನ್ನು ನೇಮಕ ಮಾಡಿದರು. ಹೀಗೆ ಸೇವಾ ಮನೋಭಾವದಿಂದ ಆರಂಭಗೊಂಡ ಕೇಂದ್ರದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಮದ್ಯ ವ್ಯಸನಿಗಳು ದಾಖಲಾಗಿ, ವ್ಯಸನ ಮುಕ್ತರಾಗಿ ಹೊಸ ಜೀವನ ಕಂಡುಕೊಂಡಿದ್ದಾರೆ.



ದೈಹಿಕ, ಮಾನಸಿಕ ಆರೋಗ್ಯ ರಕ್ಷಣೆ:



ಶಿಬಿರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳ ಆರೋಗ್ಯ ರಕ್ಷಣೆಗೆ ಕೇಂದ್ರದಲ್ಲಿ ಹೈಟೆಕ್ ಜಿಮ್ ಸ್ಥಾಪಿಸಲಾಗಿದ್ದು, ವ್ಯವಸ್ಥಿತವಾಗಿ ದೈಹಿಕ ಕಸರತ್ತು ನಡೆಸಲು ಅನುಕೂಲವಾಗುವಂತೆ ತರಬೇತುದಾರರನ್ನು ಸಹ ನಿಯೋಜಿಸಲಾಗಿದೆ. ಜತೆಗೆ ಮಾನಸಿಕ ಆರೋಗ್ಯಕ್ಕೆ ಯೋಗವು ಸಹ ಅಷ್ಟೇ ಮುಖ್ಯ ಎಂದು ಬೆಳಗ್ಗೆ ಮತ್ತು ಸಂಜೆ ಯೋಗದ ತರಗತಿಗಳನ್ನು ನಡೆಸಲಾಗುತ್ತಿದೆ. ಅದಕ್ಕೂ ಸಹ ಯೋಗ ಶಿಕ್ಷಕರನ್ನು ನಿಯೋಜಿಸಲಾಗಿದೆ.

ಮದ್ಯ ಬಿಟ್ಟವರಿಂದಲ್ಲೇ ನೀತಿ ಪಾಠ

ಕೇಂದ್ರದಲ್ಲಿ ಮದ್ಯ ವ್ಯಸನಿಗಳಿಗೆ ವೈಜ್ಞಾನಿಕ ಚಿಕಿತ್ಸೆ ಮತ್ತು ಆಪ್ತ ಸಮಾಲೋಚನೆ ನೀಡುವುದರೊಂದಿಗೆ ನೀತಿ ಪಾಠವು ಮುಖ್ಯ, ಯಾರದ್ದೋ ಜೀವನ ಕಥೆ, ಅನುಭವಿಸಿದ ಕಷ್ಟಗಳನ್ನು ಹೇಳುವ ಬದಲು, ಮದ್ಯ ಬಿಟ್ಟವರಿಂದಲ್ಲೇ ಕುಡುಕರಿಗೆ ನೀತಿ ಪಾಠ ಹೇಳುವ ಮೂಲಕ ಮನ ಪರಿವರ್ತನೆ ಮಾಡಲಾಗುತ್ತಿದೆ. ಈ ಹಿಂದೆ ಇದೇ ಶಿಬಿರದಲ್ಲಿ ಭಾಗವಹಿಸಿ ಕುಡಿತ ಬಿಟ್ಟವರನ್ನು ಕರೆಯಿಸಿ ಅವರು ಕುಡಿತದ ವೇಳೆ ಅನುಭವಿಸಿ ಕಷ್ಟ, ನೋವು, ಕುಡಿತ ಬಿಟ್ಟ ಮೇಲೆ ಹೇಗೆ ಜೀವನ ನಡೆಸುತ್ತಿದ್ದೇವೆ ಎಂಬ ಅನುಭವವನ್ನು ಶಿಬಿರಾರ್ಥಿಗಳೊಂದಿಗೆ ಹಂಚಿಕೊಳ್ಳಲಿದ್ದಾರೆ. ಇದರೊಂದಿಗೆ ಮನೋವೈದ್ಯರು ಮತ್ತು ಆಪ್ತ ಸಮಾಲೋಚಕರ ತಂಡವೇ ಇದೆ. ಪ್ರತಿಯೊಬ್ಬ ವ್ಯಸನಿಗಳ ಸಮಸ್ಯೆಯನ್ನು ನೇರವಾಗಿ ಆಲಿಸುವ ಮೂಲಕ ಅಗತ್ಯ ಸಲಹೆ ಸೂಚನೆಗಳೊಂದಿಗೆ ಮಾರ್ಗ ದರ್ಶನ ನೀಡುತ್ತಿದ್ದಾರೆ. ಕೆಲ ಮನೋವೈದ್ಯರು, ಬಸವರಾಜು ಅವರ ಕಾರ್ಯವನ್ನು ಗುರುತಿಸಿ, ಉಚಿತ ಸೇವೆ ನೀಡುತ್ತಿದ್ದಾರೆ.



ಮಾದಕ ವ್ಯಸನಿಗಳ ಆಶ್ರಮ ಸ್ಥಾಪನೆ:

ಮದ್ಯ ಸೇರಿದಂತೆ ಹಲವು ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾಗಿ ಜೀವನವನ್ನೇ ಕಳೆದುಕೊಂಡು ಕುಟುಂಬ ಮತ್ತು ಬಂಧು–ಬಳಗದವರಿಂದ ದೂರವಾಗಿರುವ ವ್ಯಸನಿಗಳ ರಕ್ಷಣೆಗೆ ಮುಂದಾಗಿರುವ ಬಸವರಾಜು ಅವರು, ಭವಿಷ್ಯದಲ್ಲಿ ಅವರಿಗಾಗಿ ಪ್ರತ್ಯೇಕ ಆಶ್ರಮ ತೆರೆಯಲು ನಿರ್ಧರಿಸಿದ್ದಾರೆ. ನಿರಂತರವಾಗಿ ಆಶ್ರಮದಲ್ಲಿ ಮಾದಕ ವಸ್ತು ವ್ಯಸನಿಗಳಿಗೆ ಶಿಬಿರ ನಡೆಸುವುದರೊಂದಿಗೆ ಸ್ವಯಂ ಉದ್ಯೋಗ ತರಬೇತಿ ನೀಡುವ ವ್ಯವಸ್ಥೆ ನೀಡಿ ಉದ್ಯೋಗ ಕಲ್ಪಿಸಲಾಗುತ್ತಿದೆ.ಕುಡಿತ, ಗಾಂಜಾ ಸೇರಿದಂತೆ ಇನ್ನಿತರ ಮಾದಕ ವಸ್ತುಗಳ ಸೇವನೆಯ ಚಟದಿಂದ ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಮಾದಕ ವಸ್ತು ವ್ಯಸನಿಗಳನ್ನು ವ್ಯಸನದಿಂದ ಮುಕ್ತಗೊಳಿಸಿ ಸಮಾಜದ ಮುಖ್ಯ ವಾಹಿನಿಗೆ ತರುವುದೇ ಬಸವರಾಜು ಅವರ ದೂರ ದೃಷ್ಟಿಯ ಯೋಜನೆಯಾಗಿದೆ.

ಈ ಸೇವಾ ಕಾರ್ಯಕ್ಕೆ ಕೈ ಜೋಡಿಸುವವರು ಮತ್ತು ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತಿ ಇರುವವರು **8553111999, 8803344999** ಸಂಪರ್ಕಿಸಬಹುದು.

ಪರಿಸರ ಸೇವಾ ಕಾರ್ಯ





ಬಸವ ಮಾರ್ಗ ಫೌಂಡೇಷನ್ ಮೂಲಕ ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿರುವ ಬಸವರಾಜು ಅವರು, ಸಮಾಜವನ್ನು ಸದಾ ಹಸಿರಾಗಿಸಲು ಸಹ ಪ್ರಯತ್ನಿಸುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಐನೂರಕ್ಕೂ ಹೆಚ್ಚು ಸಸಿಗಳನ್ನು ನಗರದ ರಸ್ತೆಗಳು ಮತ್ತು ಉದ್ಯಾನಗಳಲ್ಲಿ ನೆಟ್ಟು ನಿತ್ಯ ನೀರುಣಿಸುವ ಮೂಲಕ ನಿರಂತರವಾಗಿ ಪಾಲನೆ, ಪೋಷಣೆ ಮಾಡುತ್ತಿದ್ದಾರೆ. ಜತೆಗೆ ಗಿಡಗಳಿಗೆ ಜಾನುವಾರುಗಳಿಂದ ರಕ್ಷಣೆ ನೀಡಲು ಟ್ರೀ ಗಾರ್ಡ್ ಕೂಡ ಅಳವಡಿಸಿದ್ದಾರೆ.

ಈ ಸೇವಾ ಕಾರ್ಯವನ್ನು ಮದ್ಯ ವರ್ಜನ ಶಿಬಿರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಂದ ನಡೆಸುವ ಮೂಲಕ ಅವರಲ್ಲಿಯೂ ಪರಿಸರ ಕಾಳಜಿ ಮೂಡಿಸುತ್ತಿರುವುದು ವಿಶೇಷವಾಗಿದೆ. ಜತೆಗೆ ಸ್ವಚ್ಛತಾ ಕಾರ್‍ಯಕ್ರಮಗಳನ್ನು ನಡೆಸುತ್ತಾ ಪರಿಸರದ ಸ್ವಚ್ಛತೆಗೂ ಆದ್ಯತೆ ನೀಡಿದ್ದಾರೆ. ರಕ್ತದಾನ ಶಿಬಿರಗಳೊಂದಿಗೆ ಕೋವಿಡ್ ಮುಕ್ತ ಸಮಾಜಕ್ಕಾಗಿ ಲಸಿಕಾ ಅಭಿಯಾನವನ್ನು ಸಹ ಕೇಂದ್ರದಲ್ಲಿ ನಡೆಸಲಾಗಿದೆ.

ಗಿಡ ನೆಡುವ ಕಾರ್ಯಕ್ರಮ



ನಕ್ಕರೆ ಅದೇ ಸ್ವರ್ಗ

ಅಪ್ಪ : ಮಗನೇ, ಯಾರಿಗೂ ಹೆದರಬೇಡ,
ನೀನು ಸಿಂಹದ ಮರಿ ಕಣೋ"

ಮಗ : ಹೌದಪ್ಪ, ಟೀಚರ್ ಕೂಡ ಹೇಳ್ತಿರ್ತಾರೆ,
'ನೀನು ಮನುಷ್ಯ ವಂಶದವನಲ್ಲ ಎಂದು!'

ಮೈಸೂರು ಮಿತ್ರ

ಭಾನುವಾರ, 7 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಬುದ್ಧಿವಂತರು ತಾವು ಇಚ್ಛಾ ಪೂರ್ವಕವಾಗಿ ಕೈಗೊಂಡ ಕಾರ್ಯವನ್ನು ಕೈಗೂಡುವವರೆಗೂ ಬಿಡುವುದಿಲ್ಲ –ಸಮಯೋಚಿತ ಪದ್ಯಮಾಲಿಕಾ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಒಪ್ಪವಿಲ್ಲದ ಮಾತು ತುಪ್ಪವಿಲ್ಲದ ಊಟವಿದ್ದಂತೆ

ನಿಮ್ಮ ಪತ್ರಗಳು

ವಿಶ್ವಸಂಸ್ಥೆ ಹೆಸರಿಗೆ ಮಾತ್ರ

ಮಾನ್ಯರೆ,

ಪ್ರಸ್ತುತ ಜಗತ್ತು ಸಂಘರ್ಷಮಯವಾಗಿದ್ದು, ಎಲ್ಲೆಡೆ ಅಶಾಂತಿ ತಾಂಡವವಾಡುತ್ತಿದೆ. ಪ್ರಮುಖ ಸಮಸ್ಯೆಗಳಾದ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ, ಆಫ್ಘಾನಿಸ್ತಾನದಲ್ಲಿ ತಾಲಿಬಾನ್‌ನ ಆರ್ಭಟದ ನಡುವೆ ಸಾಮಾನ್ಯ ಜನಗಳ ಮೇಲಿನ ದೌರ್ಜನ್ಯ, ಚೀನಾ ಮತ್ತು ತೈವಾನ್ ನಡುವಿನ ಸಂಘರ್ಷ, ಶ್ರೀಲಂಕಾದಲ್ಲಿನ ಆರ್ಥಿಕ ತುರ್ತು ಪರಿಸ್ಥಿತಿ, ಪಾಕಿಸ್ತಾನದಲ್ಲಿನ ರಾಜಕೀಯ ಅಸ್ಥಿರತೆ, ಮೆಕ್ಸಿಕೊ ನಿರಾಶ್ರಿತರ ಸಮಸ್ಯೆ, ಮಯನ್ಮಾರ್‌ನಲ್ಲಿನ ಮಿಲಿಟರಿ ಆಡಳಿತ, ದಕ್ಷಿಣ ಚೀನಾ ಸಮುದ್ರ ಪ್ರದೇಶದ ದೇಶಗಳಾದ ಇಂಡೋನೇಷ್ಯಾ, ಫಿಲಿಪೈನ್ಸ್ ದೇಶಗಳ ಮೇಲೆ ಚೀನಾದ ದೌರ್ಜನ್ಯ, ಚೀನಾ ಮತ್ತು ಜಪಾನ್ ನಡುವಿನ ಸೆಂಕಾಕ್ ದ್ವೀಪ, ಸೋಮಾಲಿಯದಲ್ಲಿನ ಅರಾಜಕತೆ, ಉತ್ತರ ಕೊರಿಯಾದಲ್ಲಿನ ಕ್ರೂರ ಆಡಳಿತ.. ಇನ್ನು ಮುಂತಾದ ವಿವಾದಗಳೊಂದಿಗೆ ಜಾಗತಿಕ ಸಮಸ್ಯೆಗಳು ಜಗತ್ತನ್ನು ಕಾಡುತ್ತಿದೆ.

ವಿಶ್ವಸಂಸ್ಥೆ ಎಂಬ ಹಲ್ಲು ಕಿತ್ತ ಹಾವು ಕೇವಲ ಮೂಕಪ್ರೇಕ್ಷಕನಂತೆ ಸಮಯ ಕಳೆಯುತ್ತಿರುವುದು ದುರದೃಷ್ಟಕರವಾಗಿದೆ. ಪ್ರಸ್ತುತ ವಿಶ್ವಸಂಸ್ಥೆ ಅಮೆರಿಕ ಮತ್ತು ಚೀನಾದ ಕೈಗೊಂಬೆಯಂತೆ ವರ್ತಿಸುತ್ತಿರುವುದು ವಿಶ್ವಸಂಸ್ಥೆಯ ಘನತೆಯನ್ನು ಕುಗ್ಗಿಸುತ್ತಿದೆ.

ವಿಶ್ವಸಂಸ್ಥೆಯನ್ನು ಜಗತ್ತಿನ ಎಲ್ಲಾ ರಾಷ್ಟ್ರಗಳು ಸೇರಿ ಬಲಗೊಳಿಸುವ ಸಮಯ ಬಂದಿದೆ. ಇಲ್ಲವಾದರೆ ವಿಶ್ವಸಂಸ್ಥೆಯನ್ನು ವಿಸರ್ಜನೆ ಮಾಡಿ ಬಲವಾದ ಇನ್ನೊಂದು ಜಾಗತಿಕ ಸಂಸ್ಥೆಯನ್ನು ರೂಪಿಸುವುದು ಅನಿವಾರ್ಯವಾಗಿದೆ.ಇಲ್ಲವಾದರೆ ಹೆಸರಿಗೆ ಮಾತ್ರ ವಿಶ್ವಸಂಸ್ಥೆಯಿರಬೇಕಾಗಿರುತ್ತದೆ.

–ರಾಸುಮ ಭಟ್, ಚಿಕ್ಕಮಗಳೂರು.

ಅಮೃತ ಮಹೋತ್ಸವವೋ? ಕಾಂಗ್ರೆಸ್‌ನ ಒಗ್ಗಟ್ಟಿನ ಪ್ರದರ್ಶನವೋ?

ಮಾನ್ಯರೆ.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಮೃತ ಮಹೋತ್ಸವವನ್ನು ಅವರ ಅಭಿಮಾನಿಗಳ ಬಳಗ ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ದಾವಣಗೆರೆಯಲ್ಲಿ ಲಕ್ಷಾಂತರ ಜನಗಳ ನಡುವೆ ಆಚರಿಸಿಕೊಂಡಿತು.

ಸಿದ್ದರಾಮೋತ್ಸವವನ್ನು ಎಲ್ಲಾ ಪಕ್ಷದ ನಾಯಕರನ್ನು ಒಳಗೊಂಡಂತೆ ನಡೆಸಿದರೆ ಈ ಉತ್ಸವಕ್ಕೆ ಇನ್ನೂ ಹೆಚ್ಚು ಮೆರುಗು ಬರುತ್ತಿತ್ತು. ಬರಿ ಕಾಂಗ್ರೆಸ್ಸಿನ ನಾಯಕರೇ ವೇದಿಕೆಯಲ್ಲಿ ರಾರಾಜಿಸುತ್ತಿರುವುದು ಪಕ್ಷದ ಕಾರ್ಯಕ್ರಮವೋ ಎನಿಸುತ್ತದೆ?

ಅನ್ನಭಾಗ್ಯ, ಕ್ಷೀರಭಾಗ್ಯ, ಅಕ್ಕಿ ಭಾಗ್ಯದಂತಹ ಯೋಜನೆಗಳನ್ನು ಕೊಟ್ಟ ಹಾಗೂ ಸಾಮಾಜಿಕ ನ್ಯಾಯದ ನಾಯಕನ ಉತ್ಸವವನ್ನು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಆಚರಣೆ ..!!? ಹಿಂದುಳಿದ ವರ್ಗದ ನಾಯಕನ ಉತ್ಸವವನ್ನು ರಾಜಕೀಯೇತರವಾಗಿ ಆಚರಿಸಿದರೆ ಸರಿ ಎನಿಸುತ್ತಿತ್ತು. ನಾಡಿನ ಜನತೆಗೆ ಸಿದ್ದರಾಮಯ್ಯೋತ್ಸವವೋ ಕಾಂಗ್ರೆಸ್ ಪಕ್ಷದ ಕಾರ್ಯಕ್ರಮವೋ ಎಂದು ಅನಿಸುತ್ತದೆ.

–ಕಂಗಾಣಿಸೋಮು ಪಿ.ಸಿ., ಕ್ಯಾತಮಾರನಹಳ್ಳಿ, ಮೈಸೂರು

ಸಾಮಾಜಿಕ ಬದ್ಧತೆಗೆ ಸಾಕ್ಷಿಯಾಗಿದ್ದ ಕಶ್ಯಪ್

ಮಾನ್ಯರೆ,



ಮೈಸೂರಿನಲ್ಲಿ ಓರ್ವ ಶ್ರೇಷ್ಠ ಪತ್ರಕರ್ತರಾಗಿ, ಕ್ರೀಡಾ ಪ್ರೇಮಿಯಾಗಿ ವಿಶಿಷ್ಟವಾದ ಮನ್ನಣೆ ಗಳಿಸಿದ್ದ ಹಿರಿಯ ಪತ್ರಕರ್ತ ಹಾಗೂ "ಮನ್ವಂತರ" ಪತ್ರಿಕೆ ರೂವಾರಿ ಕೀರ್ತಿಶೇಷ ವೆಂಕಟರಾಮ್ ಕಶ್ಯಪ್ ಬಹುಮುಖ ಪ್ರತಿಭಾ ಸಂಪನ್ನರು.

ನಾಡು, ನುಡಿ, ಧರ್ಮ, ಸಂಸ್ಕೃತಿ, ಸನಾತನ ಧರ್ಮ ಮುಂತಾದವುಗಳ ಬಗ್ಗೆ ಅಪಾರವಾದ ಕಾಳಜಿ ಮತ್ತು ಆಳವಾದ ಜ್ಞಾನವನ್ನು ಹೊಂದಿದ್ದ ಶ್ರೀಯುತರು, ಅದಕ್ಕಾಗಿ ಅಹರ್ನಿಶಿ ದುಡಿದರು. "ಮನ್ವಂತರ" ಎಂಬ ಧಾರ್ಮಿಕ ಪತ್ರಿಕೆಯನ್ನು 2001ನೇ ಇಸವಿಯಲ್ಲಿ ಪ್ರಾರಂಭಿಸಿ, ಪತ್ರಿಕೋದ್ಯಮದಲ್ಲೂ ಸಹ ತಮ್ಮ ಛಾಪು ಮೂಡಿಸಿದ ಶ್ರೀಯುತರು, ಆಡು ಮುಟ್ಟದ ಸೊಪ್ಪಿಲ್ಲ ಅನ್ನುವ ರೀತಿಯಲ್ಲಿ ಹಲವಾರು ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ಎರಕಾಹೊಯ್ದರು. ಯಾರ ಗಮನಕ್ಕೂ ಬಾರದ ಹಲವಾರು ದೇಸಿ ಹಾಗೂ ಸಾಂಪ್ರದಾಯಿಕ ಕ್ರೀಡೆಗಳಿಗೆ ಜೀವ ತುಂಬಿದರು. ಅವುಗಳನ್ನು ಪ್ರಚುರಪಡಿಸಲು ಅನೇಕ ವರ್ಷಗಳ ಕಾಲ ದೇಸಿ ಕ್ರೀಡಾಕೂಟಗಳನ್ನು ದೇಶಾದ್ಯಂತ ಏರ್ಪಡಿಸಿದರು. ಇಂತಹ ಸೂಕ್ಷ್ಮ ಸಂವೇದನೆಯ ಪತ್ರಕರ್ತ, ಕ್ರೀಡಾ ಮತ್ತು ಪರಿಸರ ಪ್ರೇಮಿ ವೆಂಕಟರಾಮ್ ಅವರಿಗೆ "ಮಾನವ ರತ್ನ" ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭ್ಯವಾಗಿದೆ. ಇತ್ತೀಚೆಗೆ ನಿಧನ ಹೊಂದಿದ ಶ್ರೀಯುತರಿಗೆ ಗೌರವಪೂರ್ವಕ ಶ್ರದ್ಧಾಂಜಲಿ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಹಾನಿಕಾರಕ ಪಾಲಿಸ್ಟರ್ ಧ್ವಜ ನಿಷೇಧಿಸಿ

ಮಾನ್ಯರೆ,


ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಈಗ 'ಹರ್ ಘರ್ ತಿರಂಗ' ಹೆಸರಿನಲ್ಲಿ ಪ್ರತಿ ಮನೆ ಮೇಲೆ ಮೂರು ದಿನಗಳು ರಾಷ್ಟ್ರ ಧ್ವಜ ಹಾರಿಸಿ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕರೆ ನೀಡಿದ್ದಾರೆ.

ಮೊದಲಿದ್ದ ಖಾದಿಯ ವಸ್ತ್ರದಿಂದ ತಯಾರಿಸಿದ್ದು ಮಾತ್ರವಲ್ಲದೆ, ಪಾಲಿಸ್ಟರಿನ (ಪ್ಲಾಸ್ಟಿಕ್) ಬಾವುಟಗಳಿಗೂ ಆಸ್ಪದವಿತ್ತಿದ್ದಾರೆ. ಪರಿಸರ ಕಾಳಜಿ ಇರಬೇಕಾದ ಈ ಕಾಲದಲ್ಲಿ ಇದು ಸರಿಯೇ? ಸತತವಾಗಿ ಆ.13, 14 ಮತ್ತು 15ರಂದು ಧ್ವಜಗಳನ್ನು ಮನೆಗಳ ಮೇಲೆ /ಎದುರು ಹಾರಿಸಬಹುದು ಎಂದಿರುವರು. ಅಂದರೆ ಹಗಲು ಕಳೆದ ಮೇಲೆ ಇರುಳಿನಲ್ಲೂ ಬಾವುಟವನ್ನು ಇಲ್ಲಿಯೇ ಬಿಡಬಹುದು. ಇದು ಧ್ವಜಗಳಿಗೆ ತೋರಲಿರುವ ಅಪಮಾನವಲ್ಲವೇ? ಮೂರು ದಿನಗಳು ಕಳೆದ ಮೇಲೆ ಧ್ವಜವನ್ನು ತೆಗೆಯುತ್ತಾರೆ. ಆಗ ಸಾಮಾನ್ಯವಾಗಿ ಅವುಗಳನ್ನು ಜನರು ತ್ಯಾಜ್ಯವೆಂದು ಬಗೆದು ಬಿಸಾಡುವ ಪ್ರಮೇಯವೇ ಹೆಚ್ಚು. ಇದರಿಂದ ಧ್ವಜಗಳಿಗೆ ಇನ್ನಷ್ಟು ಅಪಮಾನ ಮತ್ತು ಪರಿಸರಕ್ಕೆ ಹೊರೆ, ತಾನೇ?

ಮನೆಯ ಮಂದಿಯು ಕಡ್ಡಾಯವಾಗಿ ಬಾವುಟವನ್ನು ಹಾರಿಸಬೇಕು ಎಂದೇನೂ ಇಲ್ಲ. ಹಾರಿಸದಿದ್ದರೆ ದೇಶಕ್ಕೆ ಅಗೌರವ ತೋರಿದಂತೇನೂ ಅಲ್ಲ. ನಾಡಿನ ಬಗ್ಗೆ ಭಕ್ತಿ, ಪ್ರೀತಿ ಹೇಗಿದ್ದರೂ ಇದ್ದೇ ಇರುತ್ತದೆ. ಜನ ಅದಕ್ಕಾಗಿ ರೊಕ್ಕ ತೆತ್ತಬೇಕಿಲ್ಲ. ನಿಮ್ಮಗಳ ಸಮೀಪದ ಯಾವುದಾದರೂ ಸಂಘ ಸಂಸ್ಥೆಯು ಬಾವುಟಗಳನ್ನು ಉಚಿತವಾಗಿ ಸಾರ್ವಜನಿಕರಿಗೆ ಹಂಚಿದರೆ, ಸ್ವಾತಂತ್ರ್ಯ ದಿವಸದಂದು ಹಾರಿಸುವುದು ಉತ್ತಮ. ಅಲ್ಲದೆ ತರುವಾಯ ಅವೇ ಸಂಸ್ಥೆಗಳು ಬಾವುಟಗಳನ್ನು ಹಿಂಪಡೆಯುವಂತೆ ಸೂಚಿಸಬೇಕು. ಇದರಿಂದ ಪರಿಸರ ಹಾನಿಯನ್ನು ತಪ್ಪಿಸಬಹುದು.

–ಡಿ.ವಿ.ಮೋಹನ್ ಪ್ರಕಾಶ್, ಗೋಕುಲ ಮುಖ್ಯ ರಸ್ತೆ, ಮೈಸೂರು.

ನಮ್ಮ ಮೈಸೂರು ದಂಪತಿಯ ತಲೆದಂಡ!?



ಸಂದರ್ಶನ: ಎ.ಗಣೇಶ

ಆಧುನಿಕ ಜೀವನ ಶೈಲಿಗೆ, ತಮ್ಮ ಅನುಕೂಲಕ್ಕೆ ಪ್ರಕೃತಿಯನ್ನು ಯಾವ ರೀತಿ ಹಾಳು ಮಾಡುತ್ತಿದ್ದೇವೆ ಎಂಬ ಕಥಾ ಹಂದರದೊಂದಿಗೆ ಸಂಚಾರಿ ವಿಜಯ್ ಮುಖ್ಯಭೂಮಿಕೆಯಲ್ಲಿದ್ದ 'ತಲೆದಂಡ' ಚಿತ್ರ 'ಅತ್ಯುತ್ತಮ ಪರಿಸರ ಕಾಳಜಿ' ಚಿತ್ರವಾಗಿ ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ. ಇತ್ತೀಚೆಗೆ 68ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಘೋಷಣೆಯಾಯಿತು. ವಿಶೇಷ ಎಂದರೆ ಮೈಸೂರಿನ ದಂಪತಿ ಈ ಚಿತ್ರದ ಸೂತ್ರಧಾರಿಗಳಾಗಿದ್ದಾರೆ.

ಮೈಸೂರು ವಿವಿಯಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರವೀಣ್ ಕೃಪಾಕರ್ ಈ ಚಿತ್ರದ ನಿರ್ದೇಶಕ. ಅವರ ಪತ್ನಿ ಹೇಮಮಾಲಿನಿ ಕೃಪಾಕರ್ ಬಂಡವಾಳ ಹೂಡುವ ಮೂಲಕ ಪತಿಯ ಕನಸನ್ನು ನನಸು ಮಾಡಿದ್ದಾರೆ. ಕೃಪಾಕರ್ ದಂಪತಿಯ ಕನಸು ಸಾಕಾರಗೊಂಡ ಸಂತಸವನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡಿದ್ದಾರೆ.

ಮೈಸೂರು ಮಿತ್ರ: ಇದು ನಿಮ್ಮ ಮೊದಲ ಪ್ರಯತ್ನವೇ?

ಪ್ರವೀಣ್ ಕೃಪಾಕರ್: ಹಾಗೇನು ಇಲ್ಲ, ಮೈಸೂರು ವಿವಿಯಲ್ಲಿ ಚಲನಚಿತ್ರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾನು ಆಗಾಗ ಸರ್ಕಾರಿ ಡಾಕ್ಯುಮೆಂಟರಿ ಮತ್ತು ಕಿರುಚಿತ್ರ ಮಾಡುತ್ತಿದ್ದೆ. 26 ವರ್ಷಗಳಿಂದ ಕೇಂದ್ರ, ರಾಜ್ಯ ಮತ್ತು ಇತರೆ ಇಲಾಖೆಗಳ 46 ಸಾಕ್ಷ್ಯಚಿತ್ರಗಳನ್ನು ಮಾಡಿದ್ದೇನೆ. 8 ಕಿರುಚಿತ್ರಗಳನ್ನು ಮಾಡಿದ್ದು ಅವು ಕನ್ನಡದ ಕೆಲ ವಾಹಿನಿಗಳಲ್ಲಿ ಪ್ರದರ್ಶನಗೊಂಡಿವೆ. ಈ ಎಲ್ಲಾ ಅನುಭವಗಳನ್ನು ಇಟ್ಟುಕೊಂಡು ದೊಡ್ಡ ಚಿತ್ರ ಮಾಡುವ ಪ್ರಯತ್ನಕ್ಕೆ ಕೈಹಾಕಿದೆ.

ಮಿತ್ರ: 'ತಲೆದಂಡ' ಚಿತ್ರ ಮಾಡುವ ಐಡಿಯಾ ಹೇಗೆ ಬಂತು?

ಪ್ರವೀಣ್ ಕೃಪಾಕರ್: ಆಲದಮರದ ಸಂರಕ್ಷಣೆ ಮಾಡುವ ವ್ಯಕ್ತಿಯ ಕುರಿತಾದ ಚಿತ್ರ ಮಾಡಬೇಕು ಎಂದು ಕಥೆ ಆರಂಭಿಸಿ 2006ರಲ್ಲಿ 'ಆಲದ ಮರ' ಹೆಸರಿನ ಚಿತ್ರದ ಸಿದ್ಧತೆ ಮಾಡಿಕೊಂಡಿದ್ದೆ. ಆದರೆ ತದನಂತರ ಕಮರ್ಷಿಯಲ್ ಸಿನಿಮಾ ಅಥವಾ ಸಾಮಾಜಿಕ ಜಾಲತಾಣದಿಂದ ಯುವ ಪೀಳಿಗೆ ಹೇಗೆ ಹಾಳಾಗುತ್ತಿದೆ ಎಂಬುದರ ಕುರಿತು ಚಿತ್ರ ಮಾಡಬೇಕು ಎಂದು ಬೇರೆ ಕಥೆ ತಯಾರು ಮಾಡಿಕೊಂಡಿದ್ದೆ. ಅದರಂತೆ ಕುಕ್ಕರಹಳ್ಳಿಯಲ್ಲಿ ಮುಹೂರ್ತ ಕೂಡ ಮಾಡಿದೆ. ಕಾರಣಾಂತರದಿಂದ ಆ ಚಿತ್ರ ಪೂರ್ಣವಾಗಲಿಲ್ಲ. ನಂತರ ಏನಾದರೂ ಮಾಡಬೇಕು ಎಂದಾಗ ಈ ಕಥೆ ನೆನಪಾಯಿತು. ಆ ಕಥೆಯನ್ನು ಮತ್ತೆ ಕೈಗೆತ್ತಿಕೊಂಡೆನಾದರೂ ಒಂದು ಮರಕ್ಕೆ ಮಾತ್ರ ಇದು ಸೀಮಿತವಾಗಬಾರದು ಎಂದು ನಿರ್ಧರಿಸಿ. ಸಂಪೂರ್ಣ ಪರಿಸರ ಕುರಿತಾದ ಚಿತ್ರ ಮಾಡಬೇಕು ಎಂದು ನಿರ್ಧರಿಸಿ 'ತಲೆದಂಡ' ಚಿತ್ರದ ಕಥೆ ರೆಡಿ ಮಾಡಿದೆ.



ಮಿತ್ರ: ನಿಮ್ಮ ಪತ್ನಿಯೇ ಸ್ವತಃ ನಿರ್ಮಾಪಕರಾಗಲು ಒಪ್ಪಿದರೆ?

ಪ್ರವೀಣ್ ಕೃಪಾಕರ್: ನನ್ನ ಪತ್ನಿ, 2006ರಲ್ಲಿ ವಿಶೇಷಚೇತನ ಮಕ್ಕಳ ಶಾಲೆ ಆರಂಭಿಸಿದ್ದರು. ಆ ಸಂದರ್ಭದಲ್ಲಿ ನಾನು ಅವರಿಗೆ ಬೆನ್ನೆಲುಬಾಗಿ ನಿಂತಿದ್ದೆ. ನಂತರ ಅವರು ನನಗೆ ಧೈರ್ಯ ತುಂಬಿ ನನ್ನ ಕಾರ್ಯಕ್ಕೆ ನೀನು ಸಂಪೂರ್ಣ ಬೆಂಬಲ ನೀಡಿದ್ದೀಯಾ ನಿನ್ನ ಆಸೆಯನ್ನು ಈಡೇರಿಸಲು ನಾನು ಸಹಾಯ ಮಾಡುತ್ತೇನೆ ಎಂದು ಸ್ವಯಂ ಮುಂದೆ ಬಂದು ನಿರ್ಮಾಪಕಿಯಾದರು. ಇವರ ಈ ಆತ್ಮಸ್ಥೈರ್ಯದಿಂದಲೇ 2016ರಲ್ಲಿ 'ತಲೆದಂಡ' ಚಿತ್ರ ಸೆಟ್ಟೇರಿತು.

ಮಿತ್ರ: ಚಿತ್ರಕ್ಕೆ ಸಂಚಾರಿ ವಿಜಯ್ ಮೊದಲೇ ಆಯ್ಕೆಯಾಗಿದ್ದರೆ?


ಪ್ರವೀಣ್ ಕೃಪಾಕರ್: ಈ ಕಥೆಗೆ ಮುಖ್ಯ ಪಾತ್ರಧಾರಿಯ ಬಗ್ಗೆ ಶೋಧನೆ ಆರಂಭವಾಯಿತು. ಈ ವೇಳೆ ಮೊದಲು ನಮ್ಮ ತಲೆಗೆ ಹೊಳೆದಿದ್ದೇ ನಟ ಸಂಚಾರಿ ವಿಜಯ್. ಅವರು ಈ ಪಾತ್ರವನ್ನು ಅದ್ಭುತವಾಗಿ ನಿರ್ವಹಿಸುವ ಭರವಸೆ ಇತ್ತು. ಏಕೆಂದರೆ ಅವರು ಆವರೆಗೂ ವಿಭಿನ್ನ ಪಾತ್ರಗಳನ್ನು ಮಾಡಿಕೊಂಡು ಬಂದಿದ್ದರು. ನಂತರ ಅವರನ್ನು ಸಂಪರ್ಕಿಸಿ ಅವರಿಗೆ ಕಥೆ ಹೇಳಿದೆವು. ನಮ್ಮ ಕಥೆ ಕೇಳಿದ ತಕ್ಷಣ ಈ ಕಥೆಯನ್ನು ಬೇರೆ ಯಾರಿಗೂ ಹೇಳಬೇಡಿ, ನಾನೇ ಮಾಡುತ್ತೇನೆ ಎಂದಿದ್ದರು. ಹಾಗಾಗಿ ಅವರೇ ಮುಖ್ಯ ಪಾತ್ರಕ್ಕೆ ಆಯ್ಕೆಯಾದರು. ಚಿತ್ರಕ್ಕಾಗಿ ಅವರು ಬಹಳಷ್ಟು ಶ್ರಮಿಸಿದ್ದಾರೆ.


ಮಿತ್ರ: ಇತರೆ ಪೋಷಕ ಪಾತ್ರಗಳ ಆಯ್ಕೆ ಪ್ರಕ್ರಿಯೆ ಹೇಗಿತ್ತು?

ಪ್ರವೀಣ್ ಕೃಪಾಕರ್: ಚಿತ್ರದ ಪ್ರಮುಖ ಜೀವಾಳ–ತಾಯಿ ಮಗನ ಪಾತ್ರ, ತಾಯಿ ಪಾತ್ರಕ್ಕಾಗಿ ಐದು ಮಂದಿ ಕಲಾವಿದರನ್ನು ಭೇಟಿಯಾದೆವು. ನಂತರ ರಂಗಭೂಮಿ ಕಲಾವಿದೆ ಮಂಗಳ ರಘು ಅವರನ್ನು ಆಯ್ಕೆ ಮಾಡಲಾಯಿತು. ಸಾಕ್ಷಾತ್ ತಾಯಿ ಮಗನಂತೆ ನಟಿಸಿ, ಪಾತ್ರಕ್ಕೆ ಇಬ್ಬರೂ ಜೀವ ತುಂಬಿದ್ದಾರೆ. ಇವರೊಟ್ಟಿಗೆ ಚೈತ್ರಾ ಆಚಾರ್, ಮಂಗಳಾ, ರಮೇಶ್ ಪಂಡಿತ್, ಮಂಡ್ಯ ರಮೇಶ್, ಬಿ.ಸುರೇಶ ಇತರರು ಈ ಸಿನಿಮಾದಲ್ಲಿ ಬಣ್ಣ ಹಚ್ಚಿದ್ದಾರೆ. ಚಿತ್ರದಲ್ಲಿ ಕಾಡು, ಆಲದಮರಬೇಕಿತ್ತು. ಕಥೆಗೆ ಅನಿವಾರ್ಯವಾಗಿದ್ದಂತಹ ಆಲದ ಮರಕ್ಕಾಗಿ ಸರಿ ಸುಮಾರು 20 ಸಾವಿರ ಕಿ.ಮೀ ಹುಡುಕಾಟ ನಡೆಸಿ, ಕೊನೆಗೆ ಚಾಮರಾಜನಗರದ ಕೆ.ಗುಡಿ ಅರಣ್ಯ ಪ್ರದೇಶದ ದ್ವಾರದಲ್ಲಿ ದೊಡ್ಡ ಆಲದಮರದ ಬಳಿ ಚಿತ್ರೀಕರಣ ಮಾಡಲಾಯಿತು. ಮೈಸೂರು, ಚಾಮರಾಜನಗರ, ಶಿರಸಿ, ಯಲ್ಲಾಪುರದ ಕೆಲ ಭಾಗಗಳಲ್ಲಿ ಚಿತ್ರೀಕರಣ ಮಾಡಿದ್ದೆವು.

ಮಿತ್ರ: 'ತಲೆದಂಡ'ಕ್ಕೆ ಎಷ್ಟು ಪ್ರಶಸ್ತಿ ಬಂದಿವೆ?

ಪ್ರವೀಣ್ ಕೃಪಾಕರ್: ಅಂತರರಾಷ್ಟ್ರೀಯ ಚಲಚಿತ್ರೋತ್ಸವದಲ್ಲಿ ಆರು ಪ್ರಶಸ್ತಿ ದಕ್ಕಿದೆ. ಗೋವಾದಲ್ಲಿ ನಡೆದ ಅಂತರರಾಷ್ಟ್ರೀಯ ಫಿಲಂ ಫೆಸ್ಟಿವಲ್‌ನಲ್ಲಿ 'ಪನೋರಮಾ' ಪ್ರಶಸ್ತಿಯನ್ನು ಬಾಚಿಕೊಂಡಿತು.






ಹೇಮಮಾಲಿನಿ ಕೃಪಾಕರ್
ನಿರ್ಮಾಪಕಿ ಹಾಗೂ
ಪ್ರವೀಣ್ ಕೃಪಾಕರ್– ನಿರ್ದೇಶಕ.

ತದನಂತರ ನೇರವಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ, ಲಂಡನ್ ಫಿಲಂ ಫೆಸ್ಟಿವಲ್‌ನಲ್ಲಿ ನಾಲ್ಕು ವಿಭಾಗದಲ್ಲಿ ಆಯ್ಕೆಯಾಗಿತ್ತು. ಉತ್ತಮ ಛಾಯಾಗ್ರಹಣ ಪ್ರಶಸ್ತಿಯನ್ನು ಅಶೋಕ್ ಕಶ್ಯಪ್ ಪಡೆದುಕೊಂಡರು. ಘನಾ, ನ್ಯೂಯಾರ್ಕ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿಯೂ ಭಾಗವಹಿಸಿದೆ. ಕೊರೊನಾ ಹಿನ್ನೆಲೆ ಇನ್ನೂ 10 ಚಲನಚಿತ್ರೋತ್ಸವ ಮುಂದೂಡಲಾಗಿದ್ದು, ಭಾಗವಹಿಸುವುದು ಬಾಕಿ ಇದೆ.

ಮಿತ್ರ: ಹಿರಿಯ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರೊಟ್ಟಿಗೆ ನಿಮ್ಮ ಚಿತ್ರಕ್ಕೂ ಪ್ರಶಸ್ತಿ ಲಭಿಸಿದೆ. ಇದರ ಬಗ್ಗೆ ನಿಮ್ಮ ಅನಿಸಿಕೆ ಏನು?

ಪ್ರವೀಣ್ ಕೃಪಾಕರ್: ಗಿರೀಶ್ ಕಾಸರವಳ್ಳಿ ಅವರು ಭಾರತ ಕಂಡ ಅತ್ಯುತ್ತಮ ನಿರ್ದೇಶಕರು. ಅವರ ಚಿತ್ರದೊಂದಿಗೆ ಪ್ರಶಸ್ತಿ ಲಭಿಸಿರುವುದು ಸಂತಸದ ವಿಚಾರ. ಚಿತ್ರ ಪೂರ್ಣವಾದಾಗ ಕಾಸರವಳ್ಳಿ ಮತ್ತು ಪಿ. ಶೇಷಾದ್ರಿ ಅವರಿಗೆ ಮೊದಲು ಈ ಚಿತ್ರವನ್ನು ತೋರಿಸಿದ್ದೆವು. ಕೆಲ ಮಾರ್ಗದರ್ಶನ ನೀಡಿದ್ದರು. ಅದರಂತೆ ಚಿತ್ರ ಮೂಡಿಬಂದಿದೆ. ಈಗ ಅವರೊಟ್ಟಿಗೆ ಪ್ರಶಸ್ತಿ ಪಡೆಯುತ್ತಿದ್ದೇನೆ ಎಂದರೆ ನಿಜವಾಗಿಯೂ ನನಗೆ ಹೆಮ್ಮೆ ಅನ್ನಿಸುತ್ತಿದೆ.



ಮೈಸೂರಲ್ಲಿ ಮಾಡೆಲ್‌ಗಳ ಮೋಹಕ ಭಂಗಿಯ ಮೋಡಿ





ಮೈಸೂರು, ಆ.6(ಜಿಎ)– ಬಣ್ಣ ಬಣ್ಣದ ವಿಭಿನ್ನ ಶೈಲಿಯ ಉಡುಪು ಧರಿಸಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿದ ರೂಪದರ್ಶಿ (ಮಾಡೆಲ್)ಗಳು, ನೆರೆದಿದ್ದವರ ನಿಬ್ಬೆರಗಾಗಿಸಿದರು.

ಮೈಸೂರಿನ ಫ್ಯಾಷನ್ ಉದ್ಯಮಿ ಹಾಗೂ ಪ್ರಸಿದ್ಧ ವಿನ್ಯಾಸಕಿ ಜಯಂತಿ ಬಲ್ಲಾಳ್ ಅವರ 'ನೀಡಲ್ ವರ್ಕ್ಸ್' ಸಂಸ್ಥೆಯ 20ನೇ ವಾರ್ಷಿಕೋತ್ಸವದ ಅಂಗವಾಗಿ ನಗರದ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ ಶನಿವಾರ ಆಯೋಜಿಸಿದ್ದ ಫ್ಯಾಷನ್ ಶೋನಲ್ಲಿ ವಿವಿಧ ರಾಜ್ಯಗಳ ರೂಪದರ್ಶಿಗಳು ಭಾಗವಹಿಸಿದ್ದರು. ಮುಂಬೈ, ಚೆನ್ನೈ ಇನ್ನಿತರ ನಗರಗಳಿಂದ ಆಗಮಿಸಿದ್ದ ರೂಪದರ್ಶಿಯರು ಅತ್ಯಾಕರ್ಷಕ ವಿಶಿಷ್ಟ ವಿನ್ಯಾಸದ ಬಣ್ಣ ಬಣ್ಣದ ತೊಡುಗೆಯೊಂದಿಗೆ ಮೋಹಕ ನಡಿಗೆ ಹಾಕಿದರು. ಇವರೊಂದಿಗೆ ಪುರುಷ ರೂಪದರ್ಶಿಗಳೂ ಹೆಜ್ಜೆ ಹಾಕಿದರು. ಪಾಶ್ಚಾತ್ಯ ಶೈಲಿಯ ಉಡುಪುಗಳ ಪ್ರದರ್ಶನದ ನಡುವೆ ಸಾಂಸ್ಕೃತಿಕ ಶೈಲಿಯ ಸೀರೆ ಧರಿಸಿ ನಗುಮೊಗದೊಂದಿಗೆ ರ್‍ಯಾಂಪ್ ವಾಕ್ ಮಾಡಿ, ವೇದಿಕೆಯ ರಂಗು ಹೆಚ್ಚಿಸಿದರು. ಬಣ್ಣದ ಬೆಳಕಿನ ಓಕುಳಿ ನಡುವೆ ಸೌಂದರ್ಯದ ಗಣಿಗಳಂತಿದ್ದ ಮಾಡೆಲ್‌ಗಳ ಚೆಂದದ ನಡಿಗೆ ಆಸ್ವಾದಿಸುವುದರೊಂದಿಗೆ ವೈವಿಧ್ಯಮಯ ನವನವೀನ ತೊಡುಗೆಗಳನ್ನು ಕಣ್ತುಂಬಿಕೊಂಡ ಪ್ರೇಕ್ಷಕರು, ಚಪ್ಪಾಳೆಯೊಂದಿಗೆ ಸಂತಸ ವ್ಯಕ್ತಪಡಿಸಿದರು.

'ನೀಡಲ್ ವರ್ಕ್ಸ್' ಸಂಸ್ಥಾಪಕಿ ಜಯಂತಿ ಬಲ್ಲಾಳ್ ಅವರು 'ಮೈಸೂರು ಫ್ಯಾಶನ್ ವೀಕ್' ಪರಿಕಲ್ಪನೆ ಮೂಲಕ ಹೆಸರುವಾಸಿಯಾಗಿದ್ದಾರೆ. ವೋಗ್‌ನಿಂದ ಪದವಿ ಪಡೆದ ನಂತರ, ಮೈಸೂರಿನ ತಮ್ಮ ಮನೆಯಲ್ಲಿ ಸಣ್ಣ ಟೈಲರಿಂಗ್ ಘಟಕದೊಂದಿಗೆ ವಸ್ತ್ರ ವಿನ್ಯಾಸ ವೃತ್ತಿ ಆರಂಭಿಸಿ 2002ರಲ್ಲಿ ನೀಡಲ್ ವರ್ಕ್ಸ್ ಸಂಸ್ಥೆ ಮೂಲಕ ತಮ್ಮ ನೈಪುಣ್ಯತೆ ಪಸರಿಸಿದರು. ಬಲ್ಲಾಳ್ 2010ರಲ್ಲಿ ಮೈಸೂರಿನ ಮೊದಲ ಮಾಡೆಲಿಂಗ್ ಸ್ಕೂಲ್ 'ಜೆಬಿ ಸ್ಕೂಲ್ ಆಫ್ ಮಾಡೆಲಿಂಗ್' ಸ್ಥಾಪಿಸಿ, ಪೋಷಿಸುತ್ತಿದ್ದಾರೆ.





Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸೈಟು ಮಾರಾಟಕ್ಕಿದೆ

5000 ಚದರ ಅಡಿ-ವಾಣಿಜ್ಯ ಸೈಟು ಸಂಖ್ಯೆ. 1205/1, ಕಾಂತರಾಜೇ ಅರಸ್ ರಸ್ತೆ, ಕೃಷ್ಣಮೂರ್ತಿಪುರಂ (ಬಲ್ಲಾಳ್ ವೃತ್ತ ಮತ್ತು ಕೆಳ ಸೇತುವೆ ಮಧ್ಯೆ, ರಾಮಮಂದಿರದ ಎದುರು)

ರೂ 15.000/Sqft

ಸಂಪರ್ಕಿಸಿ:

9845022730

(ಮಧ್ಯವರ್ತಿಗಳು ಕ್ಷಮಿಸಿ)

ಮೈಸೂರು ಮಿತ್ರ

ಜಾಹೀರಾತಿಗಾಗಿ ಸಂಪರ್ಕಿಸಿ:

Ph: 0821-2496522 / 23

Email: ad@mysurumithra.com

BOOKINGS OPEN FOR
Construction of
Brand New Architecture
Designed Houses

MUDA APPROVED

20'x40' - 29.5 Lakhs
30'x40' - 42 Lakhs

Near St. Joseph's Central School, Hunsur Road, Mysore.


9740767576, 8884001233

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ಕಳೆದಿದೆ

ಎನ್.ಎಸ್. ಸುಧೀರ್ ಮತ್ತು ಎನ್.ಎಸ್. ಅರುಣ್ ಬಿನ್ ಲೇಟ್ ಎನ್. ಸತ್ಯನಾರಾಯಣರಾವ್, #27, 14ನೇ ಕ್ರಾಸ್, ವಿ.ವಿ. ಮೊಹಲ್ಲಾ, ಜಯಲಕ್ಷ್ಮೀಪುರಂ, ಮೈಸೂರು ನಮ್ಮ ಮನೆಯ ಮೂಲ ದಾಖಲಾತಿಗಳಾದ

(1) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ T.R.ಗೋಪಾಲಸ್ವಾಮಿ ಅಯ್ಯಂಗಾರ್ ರವರಿಗೆ ಮಂಜೂರಾಗಿದ್ದ ಮಂಜೂರಾತಿ ಪತ್ರ.

(2) ಈ ನಿವೇಶನಕ್ಕೆ ಹಣ ಪಾವತಿಸಿದ ಚಲನ್ ಪ್ರತಿ.

(3) ಟಿ.ಆರ್. ಗೋಪಾಲಸ್ವಾಮಿ ಅಯ್ಯಂಗಾರ್ ರವರು ಪಾರ್ಥಸಾರಥಿ ಅಯ್ಯಂಗಾರ್ ರವರಿಗೆ ನೀಡಿದ್ದ ಜಿ.ಪಿ.ಎ. ಪತ್ರ.

(4) ಟಿ.ಆರ್. ಗೋಪಾಲಸ್ವಾಮಿ ಅಯ್ಯಂಗಾರ್ ರವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನಿವೇಶನಕ್ಕಾಗಿ ಸಲ್ಲಿಸಿದ್ದ ಅರ್ಜಿ, ಕಳೆದುಹೋಗಿರುತ್ತದೆ. ಸಿಕ್ಕಿದವರು ಸಂಪರ್ಕಿಸಿ : **9901418888**

ಕರ್ನಾಟಕ ಸರ್ಕಾರ

ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ

CADA

ಕಾವೇರಿ ಜಲಾನಯನ ಯೋಜನೆಗಳು-ಮೈಸೂರು

ಕಾರ್ಯಪಾಲಕ ಅಭಿಯಂತರರವರ ಕಛೇರಿ, ನಂ-2 ವಿಭಾಗ ಕಾಜಯೋ ವಿಜಯನಗರ 1ನೇ ಹಂತ, ಮೈಸೂರು-17. ದೂರವಾಣಿ ಸಂಖ್ಯೆ : 0821-2414090. ಇ-ಮೇಲ್: eecada2mysore@gmail.com

ಟೆಂಡರ್ ಪ್ರಕಟಣೆ ಸಂಖ್ಯೆ:01/2022-23 ದಿನಾಂಕ:20.07.2022

ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ-04, ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ-02, ಹಾಗೂ ಮಂಡ್ಯ ಜಿಲ್ಲೆಯ ಮಂಡ್ಯ ತಾಲ್ಲೂಕಿನ-03, ಆಯಕಟ್ಟು ರಸ್ತೆ ಕಾಮಗಾರಿಗಳು ಹಾಗೂ ಮೈಸೂರು ಜಿಲ್ಲೆಯ ಮೈಸೂರು ತಾಲ್ಲೂಕಿನ-01, ಬಸಿಗಾಲುವೆ ಕಾಮಗಾರಿ ಒಟ್ಟು 10 ಕಾಮಗಾರಿಗಳಿಗೆ K/W-1 & K/W-2 ರ ಪ್ರಕಾರ e-portal ಮೂಲಕ ಐಟಂವಾರು ಟೆಂಡರ್ ಅನ್ನು ಏಕಲಕೊಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳನ್ನು http://eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 27.07.2022 ರಿಂದ ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 12.08.2022 ಸಂಜೆ 4.00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ: 16.08.2022 ಬೆಳಗ್ಗೆ 11.00 ಗಂಟೆಯ ನಂತರ.

ಸಹಿ/-
ಕಾರ್ಯಪಾಲಕ ಅಭಿಯಂತರರು
ನಂ.2 ವಿಭಾಗ, ಕಾಡಾ,
ಕಾಜಯೋ, ಮೈಸೂರು.

ವಾಸಾಸಂಇ/ಮೈ/ಶಿರಡಿ ಸಾಯಿ/341/2022-23

ಸಾರ್ವಜನಿಕರ ಗಮನಕ್ಕಾಗಿ

ಏನೆಂದರೆ, ನನ್ನ ಕಕ್ಷಿದಾರರಾದ ಮೈಸೂರು ನಗರ, ಕುಂಬಾರಕೊಪ್ಪಲು, ಜೋಡಿ ಮನೆ ರಸ್ತೆ, ಮನೆ ನಂ.126 ರಲ್ಲಿ ವಾಸವಾಗಿರುವ ಲೇಟ್ ವಿಷಕಂಠೇಗೌಡ ರವರ ಮಗ ಸುಮಾರು 43 ವರ್ಷ ವಯಸ್ಸಿನ ಶ್ರೀ.ಕೆ.ವಿ.ಚೇತನ್ ಮೊ. ಸಂಖ್ಯೆ: 9972190545 ರವರ ಇರ್ಶಾದೆಯ ಮೇರೆಗೆ,

ಏನೆಂದರೆ ಷೆಡ್ಯೂಲ್ ಸ್ವತ್ತು, ಮೈಸೂರು ನಗರ, ಪಡುವರಹಳ್ಳಿ, ವಿನಾಯಕನಗರ, 4ನೇ ತಿರುವು, ಮನೆ ನಂ.2440 ರಲ್ಲಿ ವಾಸವಾಗಿರುವ ಲೇಟ್ ಚಿಕ್ಕಹೈದೇಗೌಡ ರವರ ಮಗ ಕೆಂಪೇಗೌಡ, ಮತ್ತು ಲೇಟ್ ಮಾದೇಗೌಡ @ ಕರಿಯಪ್ಪ ರವರ ವಾರಸುದಾರರುಗಳಾದ ಪತ್ನಿ ಶ್ರೀಮತಿ ಮಹದೇವಮ್ಮ, ಮಕ್ಕಳುಗಳಾದ ಶ್ರೀಮತಿ ಪಾರ್ವತಿ, ಮಹದೇವ, ಕೃಷ್ಣ, ರುಕ್ಮಿಣಿ, ಸುರೇಶ ರವರುಗಳಿಗೆ ಸೇರಿದ ಸ್ವತ್ತಾಗಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರಾಗಲೀ ಅಥವಾ ಅವರು ಸೂಚಿಸಿದ ವ್ಯಕ್ತಿಯಾಗಲೀ ಖರೀದಿಸಲು ತೀರ್ಮಾನಿಸಿದ್ದು, ಉಭಯತ್ರರು ಕ್ರಯದ ಕರಾರು ಪತ್ರ ನೋಂದಾಯಿಸಲು ಮುಂದಾಗಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನ ಸಂಬಂಧ ಸಾರ್ವಜನಿಕರು ಯಾವುದೇ ರೀತಿಯ ಹಕ್ಕು, ಮಾಲೀಕತ್ವ, ಸ್ವಾಧೀನ, ಹಿತಾಸಕ್ತಿ ಇತರೆ ಯಾವುದೇ ಹಕ್ಕು ಇದ್ದ ಪಕ್ಷದಲ್ಲಿ ಈ ಕೆಳಕಂಡ ವಕೀಲರ ಕಛೇರಿಗೆ ಸಂಬಂಧಪಟ್ಟ ದಾಖಲಾತಿಗಳೊಡನೆ 7 ದಿನದೊಳಗೆ ಹಾಜರುಪಡಿಸತಕ್ಕದ್ದು, ಅಥವಾ ತಮ್ಮ ಲಿಖಿತ ತಕರಾರನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾರಿಂದಲೂ ತಕರಾರು ಅಥವಾ ದಾಖಲಾತಿಗಳು ಬಾರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ತಕರಾರು ಇಲ್ಲವೆಂದು ಕ್ರಯದ ಕರಾರು ಪತ್ರ ನೋಂದಾಯಿಸಲು ಮುಂದುವರಿಯುತ್ತಾರೆ. ನಂತರ ಬರತಕ್ಕ ಯಾವುದೇ ತಕರಾರು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ಹಾಗೂ ಮುಂದಿನ ಯಾವುದೇ ಆಗುಹೋಗುಗಳಿಗೆ ನಮ್ಮ ಕಕ್ಷಿದಾರರಿಗೆ ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ ಮತ್ತು ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೋಗಾದಿ ಗ್ರಾಮದ ಸರ್ವೆ ನಂ.87/1 ರಲ್ಲಿ ವಿಸ್ತೀರ್ಣ 7 ಗುಂಟೆ ಮತ್ತು ಸರ್ವೆ ನಂ.87/7 ರಲ್ಲಿ ವಿಸ್ತೀರ್ಣ 1 ಎಕರೆ 33 ಗುಂಟೆ ಒಟ್ಟು ವಿಸ್ತೀರ್ಣ 2 ಎಕರೆ ಖುಷ್ಕಿ ಜಮೀನಿಗೆ ಚಕ್ಕುಬಂದಿ:-

ಪೂರ್ವಕ್ಕೆ : ಸರ್ಕಾರಿ ಖರಾಬು, ಪಶ್ಚಿಮಕ್ಕೆ: ವರ್ತುಲ ರಸ್ತೆ, ಉತ್ತರಕ್ಕೆ: ಸ.ನ. 85 (ಲಾ.ಸ-85), ದಕ್ಷಿಣಕ್ಕೆ: ಸ.ನಂ.87/8 (ಪೋಡಿ ನಂ.III). ಈ ಮಧ್ಯೆ ವಿಕ್ರಯದಾರರು ಸ್ವಾಧೀನಾನುಭವದಲ್ಲಿರುವ ಖುಷ್ಕಿ ಜಮೀನನ್ನು ನನ್ನ ಕಕ್ಷಿದಾರರು ಖರೀದಿಸಲು ಮುಂದಾಗಿರುವ ಸ್ವತ್ತಾಗಿರುತ್ತದೆ.

ಕಕ್ಷಿದಾರರ ಪರ ವಕೀಲರು
Sd/- Mahesha.S, B.A.L., LLB,
Advocate. M.S.Law Associates
#2513, CH-34, 1st Floor, Room No.6,
New Kantharaje Urs Road,
K.G.Koppal, Mysuru

ದಿನಾಂಕ: 06-08-2022 **Mob.: 94484-54521**

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯ, ಮೈಸೂರು ಜಿಲ್ಲೆ.

Email ID: itstaff_ulb_rammanahalli@yahoo.com www.rammanahalli.mrc.gov.in

ಸಂ:ಪ.ಪಂ.ರ/ನಗರೋತ್ಥಾನ-ಹಂತ 4 / 2022-23 ದಿನಾಂಕ: 04-08-2022

ಸಾರ್ವಜನಿಕ ಪ್ರಕಟಣೆ

ಈ ಮೂಲಕ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪ.ಜಾತಿ / ಪ.ಪಂಗಡದ ಹಾಗೂ ಇತರ ಬಡಜನರು / ಅಂಗವಿಕಲರುಗಳಿಗೆ ತಿಳಿಯಪಡಿಸುವುದೇನೆಂದರೆ, ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ ಹಂತ - 04 ಮತ್ತು 2021-22ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿಯ ಕಾಯ್ದಿರಿಸಿರುವ ಅನುದಾನದಲ್ಲಿ ಶೇ. 24.10 (ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ) ಶೇ.7.25 (ಇತರೆ ಬಡಜನರು 3 ಅಲ್ಪಸಂಖ್ಯಾತರು) ಶೇ.5ರ ವಿಕಲಚೇತನರಡಿಯಲ್ಲಿ ವಿವಿಧ ವೈಯಕ್ತಿಕ ಕಾರ್ಯಕ್ರಮಗಳನ್ನು ಸರ್ಕಾರದ ನಿಯಮ / ಷರತ್ತುಗಳಿಗೊಳಪಟ್ಟು ಕಲ್ಪಿಸಲು ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಯಂ ನಿವಾಸಿಗಳಾಗಿರುವ ಅರ್ಹ ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ. ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಲು ನಿಗಧಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿ ಮಾಡಿ ದಿನಾಂಕ: 30-08-2022 ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸಬಹುದಾಗಿದೆ.

ಕ್ರ.ಸಂ	ನಗರೋತ್ಥಾನ ಯೋಜನೆಯಡಿ ವೈಯಕ್ತಿಕ ಕಾರ್ಯಕ್ರಮಗಳ ವಿವರ	ನಿಗದಿತ ಮೊತ್ತ
1	ಪೌರಕಾರ್ಮಿಕರಿಗೆ ಮನೆಗಳ ನಿರ್ಮಾಣಕ್ಕಾಗಿ ಸಹಾಯಧನ ನೀಡುವುದು.	11.50 ಲಕ್ಷ
2	ಪರಿಶಿಷ್ಟ ಜಾತಿ ಜನಾಂಗದವರು ನಿವೇಶನ ಖರೀದಿಸಲು ಸಹಾಯಧನ	7.50 ಲಕ್ಷ
3	ಮನೆ ನಿರ್ಮಾಣಕ್ಕಾಗಿ ಸಹಾಯಧನ ನೀಡುವುದು (ಪ.ಜಾತಿ-15.00) (ಪ.ಪಂ-9.00) (ಇತರೆ-12.32)	36.32 ಲಕ್ಷ
4	ಅತಿವೃಷ್ಟಿ / ಅನಾವೃಷ್ಟಿಯಿಂದ ಹಾನಿಗೊಳಗಾದ ಮನೆಗಳ ರಿಪೇರಿಗಾಗಿ (ಪ.ಜಾತಿ-0.81) (ಪ.ಪಂ.-0.45)	1.26 ಲಕ್ಷ
5	ಅಂಗವಿಕಲರಿಗೆ ತ್ರಿಚಕ್ರ ವಾಹನ ಖರೀದಿಸಲು ಸಹಾಯಧನ ನೀಡುವುದು.	10.63 ಲಕ್ಷ
	2021-22ನೇ ಸಾಲಿನ ಪಟ್ಟಣ ಪಂಚಾಯಿತಿ ನಿಧಿಯ ಶೇ.24.10, 7.25 & 5ರ ಯೋಜನೆಯ ವೈಯಕ್ತಿಕ ಕಾರ್ಯಕ್ರಮ	
6	ಪರಿಶಿಷ್ಟ ಜಾತಿ ಜನಾಂಗದವರ ಮನೆಯ ಮೇಲ್ಛಾವಣಿ ದುರಸ್ಥಿ ಸಾಮಾಗ್ರಿಗಳ ಖರೀದಿಗಾಗಿ ಸಹಾಯಧನ	45600-00
7	ಪರಿಶಿಷ್ಟ ಪಂಗಡ ಜನಾಂಗದವರ ಮನೆಯ ಮೇಲ್ಛಾವಣಿ ದುರಸ್ಥಿ ಸಾಮಾಗ್ರಿಗಳ ಖರೀದಿಗಾಗಿ ಸಹಾಯಧನ	27600-00
8	ಇತರೆ ಹಿಂದುಳಿದ ವರ್ಗದವರ ಮನೆಯ ಮೇಲ್ಛಾವಣಿ ದುರಸ್ಥಿ ಸಾಮಾಗ್ರಿಗಳ ಖರೀದಿಗಾಗಿ ಸಹಾಯಧನ	24000-00

ಈ ಮೇಲಿನ ಕಾರ್ಯಕ್ರಮಗಳಿಗೆ ಕಛೇರಿಯಿಂದ ನಿಗಧಿತ ಅರ್ಜಿ ನಮೂನೆಯನ್ನು ಪಡೆದು ಜಾತಿ & ಆದಾಯ ದೃಢೀಕರಣ ಪತ್ರ, ಪಡಿತರ ಚೀಟಿ, ಆಧಾರ್ ಕಾರ್ಡ್, ಚುನಾವಣಾ ಗುರುತಿನ ಚೀಟಿಗಳ ಸ್ವಯಂ ದೃಢೀಕೃತ ನಕಲು ಪ್ರತಿಗಳು, ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ-2, ಅಸೆಸ್‌ಮೆಂಟ್ ಪ್ರತಿ ಹಾಗೂ ಇನ್ನಿತರೆ ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸುವುದು. ಮೇಲಿನ ಕಾರ್ಯಕ್ರಮ ಹಾಗೂ ಸೌಲಭ್ಯ ಕಲ್ಪಿಸುವ / ಮಾರ್ಪಡಿಸುವ / ರದ್ದುಪಡಿಸುವ / ವಿತರಣೆ ಮಾಡುವ/ ಮಾಡದಿರುವ ಹಕ್ಕನ್ನು ಸರ್ಕಾರ / ಪಟ್ಟಣ ಪಂಚಾಯಿತಿ ಕಾಯ್ದಿರಿಸಿಕೊಂಡಿರುತ್ತದೆ. ಹೆಚ್ಚಿನ ಮಾಹಿತಿ / ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಭೇಟಿ ನೀಡಿ ಯೋಜನಾ ಶಾಖೆಯಲ್ಲಿ ಪಡೆದುಕೊಳ್ಳತಕ್ಕದ್ದು.

ಸಹಿ/- ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ

ಸಹಿ/- ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ರಮ್ಮನಹಳ್ಳಿ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆಮೈ.ನ.ಪ್ರಾ/ವಕ-4/2022-23 ದಿನಾಂಕ: 04.08.2022

"ಪತ್ರಿಕಾ ಪ್ರಕಟಣೆ"
ಸಾರ್ವಜನಿಕರ ಗಮನಕ್ಕೆ

ಮೈಸೂರು ನಗರ ವಿಶ್ವಸ್ಥ ಮಂಡಳಿ ವತಿಯಿಂದ ನಡೆದ ಹರಾಜಿನಲ್ಲಿ ಶ್ರೀ. ಗಂಗಾಶೆಟ್ಟಿ ರವರಿಗೆ ಮೈಸೂರು ನಗರದ ಜಯಲಕ್ಷ್ಮಿಪುರಂ 4ನೇ ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ 27 ಅಳತೆ 150*93 ಅಡಿಗಳು ನಿವೇಶನ ದಿ:29.04.1946ರಲ್ಲಿ ಮಂಜೂರಾಗಿರುತ್ತದೆ. ಸದರಿ ನಿವೇಶನವನ್ನು ಶ್ರೀ.ಗಂಗಾಶೆಟ್ಟಿ ರವರು ಡಾ|| ಎಂ.ಶ್ರೀನಿವಾಸನ್ ರವರಿಗೆ ಶುದ್ಧಕ್ರಯಕ್ಕೆ ಮಾರಟ ಮಾಡಿದ್ದು, ದಿನಾಂಕ: 08.10.1964 ರಂದು ವರ್ಗಾವಣೆ ಮಾಡಲಾಗಿರುತ್ತದೆ. ನಂತರ ಸದರಿ ನಿವೇಶನವನ್ನು 3 ಭಾಗಗಳಾಗಿ ವಿಂಗಡಿಸುವಂತೆ ಅಂದರೆ ನಿವೇಶನ ಸಂಖ್ಯೆ 27, 27/ಎ, 27/ಬಿ ರಂತೆ ತಲಾ 50*93 ಅಡಿ ವಿಸ್ತೀರ್ಣದಂತೆ ನಿವೇಶನವನ್ನು ವಿಂಗಡಿಸಿ ಮಂಡಳಿಯು ಆದೇಶ ಮಾಡಿರುತ್ತದೆ. ತದನಂತರ ಡಾ|| ಎಂ.ಶ್ರೀನಿವಾಸನ್‌ರವರು ನಿವೇಶನ ಸಂಖ್ಯೆ 27/ಎ, ಅಳತೆ 50*93 ಅಡಿಗಳನ್ನು ಶ್ರೀ ಕೆ.ಆರ್.ವಿ.ಶೆಟ್ಟಿರವರಿಗೆ ನೋಂದಾಯಿತವಲ್ಲದ ಶುದ್ಧ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ. ಶ್ರೀ ಕೆ.ಆರ್.ವಿ.ಶೆಟ್ಟಿ ರವರು ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ: 19.05.1972ರಲ್ಲಿ ನೋಂದಾಯಿಸಿಕೊಂಡು, ಉತ್ತರ ಪತ್ರ ಪಡೆದಿರುತ್ತಾರೆ.

ಕ್ರಯದಾರರಾದ ಶ್ರೀ.ಕೆ.ಆರ್.ವಿ.ಶೆಟ್ಟಿರವರು ನೋಂದಾಯಿತವಲ್ಲದ ಶುದ್ರ ಕ್ರಯ ಪತ್ರ ಆಧಾರದ ಮೇಲೆ (Un-Registered Sale Deed) ವರ್ಗಾವಣೆ / ಹಕ್ಕುಪತ್ರ ಪಡೆಯಲು ಪ್ರಾಧಿಕಾರವನ್ನು ಕೋರಿರುವುದರಿಂದ ಸದರಿಯವರ ಹೆಸರಿಗೆ ವರ್ಗಾವಣೆ ಪತ್ರ ಹಾಗೂ ಹಕ್ಕುಪತ್ರ ನೀಡಲು ಯಾರಿಂದಾದರು ತಕರಾರು ಏನಾದರು ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 7 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ತಕರಾರು ಸಲ್ಲಿಸುವುದು. ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು.

ವಿಶೇಷ ತಹಸೀಲ್ದಾರ್
ವಲಯ ಕಛೇರಿ -4
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ
ಮೈಸೂರು



ಪುರಸಭಾ ಕಾರ್ಯಾಲಯ, ತಿ.ನರಸೀಪುರ, ಮೈಸೂರು ಜಿಲ್ಲೆ.

Email : tpnarasipura@ymail.com, itstaff_ulb_tnarasipura@yahoo.com Phone : 08227-261232
Website : www.tnarasipuratown.gov.in Fax : 08227-261232

ಸಂಖ್ಯೆ ತಿ.ನ.ಪು.ಪು. ಕಂ.ನಿ.ಪಿ.ಆರ್.ಸಾ.ಪ್ರ.3 / 2022-23 ದಿನಾಂಕ: 26-07-2022

ಬಹಿರಂಗ ಹರಾಜು ಪ್ರಕಟಣೆ

ವಿಷಯ:- 2022-23ನೇ ಸಾಲಿನ ಖಾಸಗೀ ಬಸ್ ನಿಲ್ದಾಣದ ಶುಲ್ಕ ಮತ್ತು ನೆಲಬಾಡಿಗೆ ಶುಲ್ಕ ವಸೂಲಾತಿ ಹಕ್ಕನ್ನು ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ.

ಉಲ್ಲೇಖ:- 1) ಪುರಸಭಾ ಕಾಯ್ದೆ 1964 ಕಲಂ 72 ರಂತೆ
2) ಮಾನ್ಯ ಅಧ್ಯಕ್ಷರು, ಪುರಸಭೆ, ತಿ.ನರಸೀಪುರ ಕಛೇರಿ ಟಿಪ್ಪಣಿ ಆದೇಶದ ರೀತ್ಯಾ.

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಉಲ್ಲೇಖ (1) ರಂತೆ ಮತ್ತು ಉಲ್ಲೇಖ (2) ರ ತೀರ್ಮಾನದ ಮೇಲೆ ವಿವಿಧ ಬಾಬ್ತುಗಳ ವಾರ್ಷಿಕ ಸುಂಕ ವಸೂಲಾತಿ ಹಕ್ಕನ್ನು 2022-23ನೇ ಸಾಲಿಗೆ ಎಂಟು ತಿಂಗಳ ಅವಧಿಗೆ ದಿನಾಂಕ: 19/08/2022 ರಿಂದ 31/03/2023 ವರೆಗೆ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟು ದಿನಾಂಕ: 18-08-2022 ಬೆಳಗ್ಗೆ 11.00 ಗಂಟೆಗೆ ಪುರಸಭೆಯ ಸಿ.ಡಿ.ಎಸ್ ಭವನದಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

ಇಚ್ಛೆವುಳ್ಳವರು ವಿಧಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ, ಮುಂದಿನ ನಿಯಮಗಳಿಗೆ ಒಳಪಟ್ಟು ಹರಾಜಿನಲ್ಲಿ ಭಾಗವಹಿಸಿ ಭೇಡ್ ಸವಾಲಿನ ಮೂಲಕ ಸುಂಕ ವಸೂಲಿ ಮಾಡುವ ಹಕ್ಕನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಕ್ರ.ಸಂ	ಬಾಬ್ತುಗಳ ವಿವರ	ಮುಂಗಡ ಠೇವಣಿ ಮೊತ್ತ	ನಿಗಧಿಪಡಿಸಿರುವ ಕನಿಷ್ಠ ಬಿಡ್ಡಿನ ದರ (ಲಕ್ಷ ರೂ.ಗಳಲ್ಲಿ)	ಹರಾಜು ಅವಧಿ
1	ಬಸ್ಸು ನಿಲ್ದಾಣದ ಶುಲ್ಕ	ರೂ.10,000-00	ರೂ.2,16,000-00 ಮೇಲ್ಪಟ್ಟು	19/08/2022 ರಿಂದ 31/03/2023 ರವರೆಗೆ
2	ನೆಲ ಬಾಡಿಗೆ ಶುಲ್ಕ	ರೂ.10,000-00	ರೂ.3,36,000-00 ಮೇಲ್ಪಟ್ಟು	19/08/2022 ರಿಂದ 31/03/2023 ರವರೆಗೆ

ಷರತ್ತುಗಳು:

1. ಮೇಲಿನ ಬಾಬ್ತುಗಳ ಹರಾಜುಗಳ ಕಾಲಾವಧಿಯ ದಿನಾಂಕ: 19/08/2022 ರಿಂದ 31/03/2023 ರ ವರೆಗೆ ಜಾರಿಯಲ್ಲಿರುತ್ತದೆ.
2. ಬಹಿರಂಗ ಹರಾಜನ್ನು ಪುರಸಭೆಯ ಸಿ.ಡಿ.ಎಸ್.ಭವನದಲ್ಲಿ ನಡೆಸಲಾಗುವುದು.
3. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹರಾಜಿನ ಮುನ್ನ ಪ್ರಕಟಣೆಯಲ್ಲಿ ನಮೂಧಿಸಿರುವ ಠೇವಣಿ ಹಣವನ್ನು ಬೆಳಿಗೆ 10.30 ರ ಒಳಗೆ ಮುಂಗಡ ಠೇವಣಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು.
4. ಹರಾಜುದಾರರೆ ಖುದ್ದಾಗಿ ಬಿಡ್ ಮಾಡತಕ್ಕದ್ದು, ಅವರ ಪರವಾಗಿ ಬೇರೆಯವರು ಬಿಡ್ ಮಾಡತಕ್ಕದ್ದಲ್ಲ.
5. ಈ ಪುರಸಭೆಗೆ ಮೇಲ್ಕಂಡ ಬಾಬ್ತುಗಳನ್ನು ಉಳಿಸಿಕೊಂಡಿರುವವರು ಭಾಗವಹಿಸುವಂತಿಲ್ಲ.
6. ಬಾಬ್ತುಗಳನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಬಹಿರಂಗ ಹರಾಜು ಮಾಡಲಾಗುವುದು.
7. ಹರಾಜನ್ನು ಅನುಮೋದಿಸುವ ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಪುರಸಭೆ ಕಾಯ್ದಿರಿಸಿ ಕೊಂಡಿದ್ದು ಹಾಗೂ ಹರಾಜು ವೇಳೆಯಲ್ಲಿ ಬರಬಹುದಾದ ತಂಟೆ - ತಕರಾರುಗಳಿಗೆ ಹರಾಜು ಮಾಡುವವರ ತೀರ್ಮಾನವೇ ಅಂತಿಮವಾಗಿರುತ್ತದೆ.
8. ಹರಾಜು ಪಡೆದಿರುವ ಬಿಡ್ಡುದಾರರು ಸ್ಥಳದಲ್ಲಿ ಹರಾಜಿನ ಬಿಡ್ಡು ಮೊಬಲಗನ್ನು ಪಾವತಿಸತಕ್ಕದ್ದು.
9. ಅಂತಿಮ ಹರಾಜು ಬಿಡ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಪುರಸಭೆ ಕಾಯ್ದಿರಿಸಿಕೊಂಡಿರುತ್ತದೆ. ಬಹಿರಂಗ ಹರಾಜಿನ ಯಶಸ್ವಿಯಾಗದ ಬಿಡ್‌ದಾರರಿಗೆ ಸ್ಥಳದಲ್ಲಿಯೇ ಅವರು ಪಾವತಿಸಿದ ಠೇವಣಿಯನ್ನು ಮರುಪಾವತಿ ಮಾಡಲಾಗುವುದು.
10. ಅತಿವೃಷ್ಟಿಗೆ ಸಂಬಂಧಪಟ್ಟಂತೆ ಅಹಿತಕರ ಘಟನೆಗಳು ಸಂಭವಿಸಿದಲ್ಲಿ ಬಂದ್ ಮತ್ತು ಚುನಾವಣೆಯ ಸಂದರ್ಭಗಳಲ್ಲಿ ಆಗುವ ನಷ್ಟಗಳಿಗೆ ಪರಿಹಾರ ಕೇಳಲು ಅಖೈರು ಬಿಡ್ಡುದಾರರಿಗೆ ಅವಕಾಶವಿರುವುದಿಲ್ಲ ಮತ್ತು ಪುರಸಭೆ ಜವಾಬ್ದಾರಿಯಾಗಿರುವುದಿಲ್ಲ.
11. ಯಶಸ್ವಿ ಬಿಡ್ಡುದಾರರು ಮೇಲ್ಕಂಡ ಎಲ್ಲಾ ಷರತ್ತುಗಳಿಗೆ ಒಪ್ಪಿ ರೂ.100/-ಗಳ ಮೌಲ್ಯದ ಛಾಪ ಕಾಗದಲ್ಲಿ ಮುಚ್ಚಳಿಕೆ ಬರೆದುಕೊಟ್ಟ ನಂತರ ಬಿಡ್ಡುದಾರರಿಗೆ ವಹಿಸಲಾಗುವುದು.
12. ಯಶಸ್ವಿ ಬಿಡ್ಡುದಾರರು ಪುರಸಭೆಯವರು ನಿಗಧಿಪಡಿಸಿದ ದರದಲ್ಲಿಯೇ ಶುಲ್ಕ ವಸೂಲಿ ಮಾಡುವುದು.
13. ಸರ್ಕಾರದಿಂದ ಆಗಿದ್ದಾಂಗೆ ವಿಧಿಸುವ ಮಾರ್ಗಸೂಚಿ ಮತ್ತು ಸುತ್ತೋಲೆ ಹಾಗೂ ಪುರಸಭೆ ಅಧಿನಿಯಮಗಳಿಗೆ ಬದ್ಧರಾಗತಕ್ಕದ್ದು.
14. ಯಶಸ್ವಿ ಬಿಡ್ಡುದಾರರು ಯಾವುದೇ ಹಕ್ಕನ್ನು ಯಾವ ರೀತಿಯಲ್ಲೂ ಬೇರೆಯವರಿಗೆ ಒಳಬಾಡಿಗೆ ನೀಡಬಾರದು.
15. ಖಾಸಗಿ ಬಸ್ಸುಗಳಿಗೆ ದಿನ ಒಂದಕ್ಕೆ ರೂ.15/- ಗಳನ್ನು ವಸೂಲಿ ಮಾಡತಕ್ಕದ್ದು.
16. ನೆಲಬಾಡಿಗೆ ಶುಲ್ಕ ದಿನ ಒಂದಕ್ಕೆ ರೂ.10/- ಗಳನ್ನು ವಸೂಲಿ ಮಾಡತಕ್ಕದ್ದು.
17. ಪುರಸಭಾ ಸದಸ್ಯರು ನಾಮ ನಿರ್ದೇಶಿತ ಸದಸ್ಯರು, ಭೇಡ್ ಸವಾಲ್‌ನಲ್ಲಿ ಭಾಗವಹಿಸುವಂತಿಲ್ಲ.
18. ಸರ್ಕಾರದ ಸುತ್ತೋಲೆ ಮತ್ತು ಮಾರ್ಗಸೂಚಿ ಹಾಗೂ ಪುರಸಭೆ ನಿಯಮಗಳನ್ನು ಉಲ್ಲಂಘಿಸಿದ ಬಿಡ್ಡುದಾರರ ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ದುಸರ ಹರಾಜು ಮಾಡಲಾಗುವುದು.

ಸಹಿ/- ಅಧ್ಯಕ್ಷರು, ಪುರಸಭೆ, ತಿ.ನರಸೀಪುರ

ಸಹಿ/- ಉಪಾಧ್ಯಕ್ಷರು ಪುರಸಭೆ, ತಿ.ನರಸೀಪುರ

ಸಹಿ/- ಸ್ಥಾಯಿ ಸಮಿತಿ ಅಧ್ಯಕ್ಷರು ಪುರಸಭೆ, ತಿ.ನರಸೀಪುರ

ಸಹಿ/- ಮುಖ್ಯಾಧಿಕಾರಿ ಪುರಸಭೆ, ತಿ.ನರಸೀಪುರ



ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿ

ಸಮರಕ್ಕೆ ಮೈಸೂರು ವಾರಿಯರ್ಸ್ ಸಜ್ಜು

ಬಹು ನಿರೀಕ್ಷಿತ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿ ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿನ ಶ್ರೀಕಂಠದತ್ತ ನರಸಿಂಹರಾಜ (ಎಸ್‌ಡಿಎನ್‌ಆರ್) ಒಡೆಯರ್ ಕ್ರಿಕೆಟ್ ಮೈದಾನದಲ್ಲಿ ಭಾನುವಾರದಿಂದ ಆರಂಭವಾಗಲಿದೆ. ಮೂರು ವಾರಗಳ ಈ ಚುಟುಕು ಕ್ರಿಕೆಟ್ ಉತ್ಸವವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ), ದಿವಂಗತ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸ್ಮರಣಾರ್ಥ ಆಯೋಜಿಸಿದೆ. ಶ್ರೀಯುತ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಮಾಜಿ ಅಧ್ಯಕ್ಷರು ಆಗಿದ್ದರು. ಈ ಪಂದ್ಯಾವಳಿಯನ್ನು ಭಾನುವಾರ ಮಧ್ಯಾಹ್ನ 2 ಗಂಟೆಗೆ ಮೈಸೂರು ರಾಜವಂಶಸ್ಥರಾದ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಲಿದ್ದಾರೆ.


ಉದ್ಘಾಟನಾ ಪಂದ್ಯದಲ್ಲಿ, ಆರ್.ಸಮರ್ಥ ಸಾರಥ್ಯದ ಮಂಗಳೂರು ಯುನೈಟೆಡ್ ಹಾಗೂ ಅಭಿಮನ್ಯು ಮಿಥುನ್ ನಾಯಕತ್ವದ ಹುಬ್ಬಳಿ ಟೈಗರ್ಸ್ ಮುಖಾಮುಖಿಯಾಗಲಿವೆ. ಮೊದಲ ಪಂದ್ಯ ಮಧ್ಯಾಹ್ನ 3 ಗಂಟೆಗೆ ಪ್ರಾರಂಭವಾಗಲಿದೆ.

ಎರಡನೇ ಪಂದ್ಯ ಕರುಣ್‌ನಾಯರ್ ಸಾರಥ್ಯದ ಮೈಸೂರು ವಾರಿಯರ್ಸ್, ಕೆ.ಗೌತಮ್ ನಾಯಕತ್ವದ ಶಿವಮೊಗ್ಗ ಸ್ಟ್ರೈಕರ್ಸ್ ಒಟ್ಟಿಗೆ ಸೆಣಸಲಿದೆ. ಆಗಸ್ಟ್ 7 ರಿಂದ 15ರವರೆಗೆ ಮೈಸೂರಲ್ಲಿ ಒಟ್ಟು 18 ಪಂದ್ಯಗಳು ನಡೆಯಲಿವೆ. ಅಂತಿಮ ಪಂದ್ಯವೂ ಸೇರಿದಂತೆ ಉಳಿದೆಲ್ಲಾ ಪಂದ್ಯಗಳು ಆಗಸ್ಟ್ 17 ರಿಂದ 26ರವರೆಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿವೆ. ಈ ಬಾರಿಯ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿಯ ಸಂದರ್ಭದಲ್ಲಿ 'ಮೈಸೂರು ಮಿತ್ರ' ಪಂದ್ಯಾವಳಿಯ ಪ್ರಾಯೋಜಕರು, ತರಬೇತುದಾರರು ಮತ್ತು ಮೈಸೂರು ವಾರಿಯರ್ಸ್ ತಂಡದ ನಾಯಕರು ಸಂದರ್ಶನ ನಡೆಸಿದ್ದು, ಅದು ನಮ್ಮ ಓದುಗರಿಗಾಗಿ...



ನಮ್ಮದು ಸಮರ್ಥ ತಂಡ

ಅರ್ಜುನ್‌ರಂಗ



ಸೈಕಲ್ ಪ್ಯೂರ್ ಅಗರಬತ್ತಿ ತಯಾರಕರಾದ ಎನ್‌ಆರ್ ಸಮೂಹ (ಎನ್‌ಆರ್ ಗ್ರೂಪ್) 2004ರಿಂದಲೂ ಕ್ರಿಕೆಟ್ ಬೆಂಬಲಿಸುತ್ತಾ ಬಂದಿದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳನ್ನು ಪ್ರಾಯೋಜಿಸುತ್ತಿರುವ ಹೆಸರಾಂತ ಕಂಪನಿಯೂ ಇದಾಗಿದೆ. ಈಗ ಮೈಸೂರು ವಾರಿಯರ್ಸ್ ತಂಡವನ್ನು ಪ್ರಾಯೋಜಿಸುತ್ತಿದ್ದು, ಇದರ ವ್ಯವಸ್ಥಾಪಕ ನಿರ್ದೇಶಕರಾದ ಅರ್ಜುನ್‌ರಂಗ ಅವರು ಈ ವರ್ಷ ತಮ್ಮ ತಂಡದ ಮೇಲಿನ ನಿರೀಕ್ಷೆ ಹಾಗೂ ಟ್ರೋಫಿ ಗೆಲ್ಲುವ ವಿಶ್ವಾಸವನ್ನು 'ಮೈಸೂರು ಮಿತ್ರ'ನಲ್ಲಿ ವ್ಯಕ್ತಪಡಿಸಿದ್ದಾರೆ...

ಮೈಸೂರು ಮಿತ್ರ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಕಪ್ ಹೆಸರನ್ನು ಈ ವರ್ಷ ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿ ಎಂದು ಬದಲಾಯಿಸಲಾಗಿದೆ?

ಅರ್ಜುನ್ ರಂಗ: ಈ ಪ್ರಶ್ನೆಯನ್ನು ನೀವು ಕೆಎಸ್‌ಸಿಎ ಅವರಲ್ಲೇ ಕೇಳಬೇಕು. ಆದರೆ, ನನಗೆ ಗೊತ್ತಿರುವಂತೆ ಇದಕ್ಕೆ ಕಾರಣ ಏನಿರಬಹುದು. ಪಂದ್ಯಾವಳಿಯ ಅವಧಿ ಮೂರು ವರ್ಷಗಳಾಗಿದ್ದು, ಪ್ರತಿ ಮೂರು ವರ್ಷಗಳಿಗೊಮ್ಮೆ, ಪಂದ್ಯಾವಳಿಯನ್ನು ಅವರು ನವೀಕರಣ ಮಾಡಿಕೊಳ್ಳುತ್ತಿದ್ದಾರೆ. ಇದಾಗಿ ಒಂಭತ್ತು ವರ್ಷಗಳಾಗಿದ್ದು, ಡಿಸೆಂಬರ್ 10, 2013ರಂದು ನಿಧನರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ಕೆಎಸ್‌ಸಿಎಯು ಬದಲಿಸಿರಬಹುದು. ಅವರು ಕೆಎಸ್‌ಸಿಎ ಅಧ್ಯಕ್ಷರಾಗಿ ಮರು ಆಯ್ಕೆಗೊಂಡ ವಾರದ ಅಂತರದಲ್ಲಿ ನಿಧನರಾದರು. ಅಷ್ಟೇ ಅಲ್ಲ ಕ್ರಿಕೆಟ್‌ಗಾಗಿ ಅವರು ಸಾಕಷ್ಟು ಕೆಲಸ ಮಾಡಿದ್ದಾರೆ ಮತ್ತು ಅವರ ಕೊಡುಗೆಗಳಿಗೆ ಬೆಲೆಕಟ್ಟಲಾಗದು.

ಮಿತ್ರ: ಈ ಬಾರಿ ಮೈಸೂರು ವಾರಿಯರ್ಸ್ ತಂಡದ ಆತ್ಮಸ್ಥೈರ್ಯ ಹೇಗಿದೆ?

ಅರ್ಜುನ ರಂಗ: ತಂಡದ ಆತ್ಮಸ್ಥೈರ್ಯ ಚೆನ್ನಾಗಿದೆ. ಭಾನುವಾರ(ಆ.7)ರಿಂದ ಟೂರ್ನಿ ಆರಂಭವಾಗುತ್ತಿದೆ. ಸಾಮಾನ್ಯವಾಗಿ ತಂಡದ ಜೊತೆ ನಮಗೆ 20ದಿನಗಳ ಕಾಲಾವಕಾಶ ದೊರೆಯುತ್ತಿತ್ತು. ಈ ಬಾರಿ ಜುಲೈ 31ರಂದು ತಂಡವನ್ನು ಆಯ್ಕೆ ಮಾಡಲಾಯಿತು. ಹಾಗಾಗಿ, ಉತ್ತಮ ರೀತಿ ತಂಡವನ್ನು ಕಟ್ಟಲು ಹಾಗೂ ತರಬೇತಿ ನೀಡಲು ಹೆಚ್ಚಿನ ಸಮಯ ಲಭ್ಯವಾಗಿದೆ. ಆದರೆ, ಮಳೆಯಿಂದಾಗಿ ಮೂರು ದಿನಗಳು ತಂಡದ ಆಟಗಾರರು ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಲು ಸಾಧ್ಯವಾಗಲಿಲ್ಲ. ತಂಡದ ಆಟಗಾರರು ಟಿ20 ಪಂದ್ಯಾವಳಿಯನ್ನು ಆಡಲು ಸಮರ್ಥರಿದ್ದಾರೆ. ಹಾಗಾಗಿ, ತಂಡದ ಮುಖ್ಯ ತರಬೇತುದಾರರು ಹಾಗೂ ನಾಯಕ ಕರುಣ್‌ನಾಯರ್ ಅನುಭವಿಗಳಾಗಿದ್ದು, ಯುವ ಆಟಗಾರರಿಗೆ ಹೆಚ್ಚಿನ ಮಾರ್ಗದರ್ಶನ ನೀಡುತ್ತಿದ್ದಾರೆ. ಅವರನ್ನು ಹುರಿದುಂಬಿಸುವ ಕೆಲಸ ಮಾಡುತ್ತಿದ್ದು, ತಂಡವು ಸಮತೋಲನದಿಂದಿದೆ

ಮಿತ್ರ: ಒಮ್ಮೆ ಪಂದ್ಯಗಳು ಪ್ರಾರಂಭವಾದರೆ ಆಟಗಾರರ ನಡುವೆ ಸಹಜವಾಗಿ ಪರಸ್ಪರ ಹೊಂದಾಣಿಕೆ ಸಾಧ್ಯವಾಗುತ್ತದೆ ಅಲ್ಲವೇ?

ಅರ್ಜುನ ರಂಗ: ಹೌದು, ಏಕೆಂದರೆ ಇದು ಸುದೀರ್ಘ ಪಂದ್ಯಾವಳಿ. ಹಲವು ಪಂದ್ಯಗಳು ನಡೆಯುತ್ತವೆ. ಸಾಮಾನ್ಯವಾಗಿ, ಪ್ರತಿಯೊಂದು ತಂಡವೂ ಎದುರಾಳಿ ತಂಡದ ವಿರುದ್ಧ ಒಮ್ಮೆ ಮಾತ್ರ ಆಡಬಹುದು. ಐದು ಪಂದ್ಯಗಳ ಹಾಗೂ ಇದರ ಮಧ್ಯೆ ಅನೇಕ ಬಿಡುವಿನ ದಿನಗಳು ಇರುತ್ತದೆ. ಈ ಬಾರಿ ಪ್ರತಿ ತಂಡದ ಜೊತೆ ಎರಡು ಪಂದ್ಯಗಳು ನಡೆಯುತ್ತಿದೆ. ಇದರಿಂದಾಗಿ, ಲೀಗ್‌ನಲ್ಲಿ ಒಟ್ಟು 10 ಪಂದ್ಯಗಳಲ್ಲಿ ಆಟಗಾರರು ಜೊತೆಯಲ್ಲಿ ಇರುತ್ತಾರೆ. ಹಾಗಾಗಿ, ಆಟಗಾರರ ನಡುವೆ ಹೊಂದಾಣಿಕೆಗೆ ಇದು ಸಾಧ್ಯವಾಗುತ್ತದೆ.

ಮಿತ್ರ: ತಮಿಳುನಾಡು ಸಹ ಇದೇ ರೀತಿಯ ಪಂದ್ಯಾವಳಿಯ (ತಮಿಳುನಾಡು ಪ್ರೀಮಿಯರ್ ಲೀಗ್(TNPL)) ಆತಿಥ್ಯ ವಹಿಸಿತ್ತು. ಅದರೊಂದಿಗೆ ಮಹಾರಾಜ ಟ್ರೋಫಿ T20 ಪಂದ್ಯಾವಳಿಯನ್ನು ಹೇಗೆ ಹೋಲಿಸುತ್ತೀರಾ?

ಅರ್ಜುನ ರಂಗ: ಕರ್ನಾಟಕದಲ್ಲೇ ಪ್ರಥಮ ಬಾರಿಗೆ T20 ಲೀಗ್ ಅನ್ನು ಪ್ರಾರಂಭಿಸಲಾಯಿತು. ನಂತರ, ತಮಿಳುನಾಡಿನವರೂ ಟಿ20 (TNPL)ಲೀಗ್ ಪ್ರಾರಂಭಿಸಿದರು. ಅಲ್ಲಿಂದ ನಟರಾಜನ್, ಮಸೂದ್ ಶಾರೂಕ್‌ಖಾನ್ ಮತ್ತು ಜಗದೀಶನ್, ಸಾಯಿ ಸುದರ್ಶನ ಸೇರಿದಂತೆ ಒಳ್ಳೆಯ ಆಟಗಾರರು ತಮಿಳುನಾಡಿನಿಂದ ಬಂದಿದ್ದಾರೆ.

ತಮಿಳುನಾಡು ಪ್ರೀಮಿಯರ್ ಲೀಗ್ ಮತ್ತು ಮಹಾರಾಜ ಟ್ರೋಫಿ T20 ಪಂದ್ಯಾವಳಿಗಳು ಸ್ಥಳೀಯ ಮಟ್ಟದಲ್ಲಿ ಐಪಿಎಲ್ ವಾತಾವರಣ ಸೃಷ್ಟಿಸಲಿವೆ. ಅಲ್ಲದೇ ಯುವಕರಲ್ಲಿನ ಪ್ರತಿಭೆ, ಅನುಭವ, ಕೌಶಲ್ಯ ಹೊರಹೊಮ್ಮಲು ಸಹಕಾರಿಯಾಗಿದೆ. ಈ ಪಂದ್ಯಾವಳಿಗಳಲ್ಲಿ ಸ್ಥಳೀಯ ಆಟಗಾರರು ಭರ್ಜರಿ ಪ್ರದರ್ಶನ ನೀಡುವ ಮೂಲಕ ತಮ್ಮ ಸಾಧನೆ ಉತ್ತಮಪಡಿಸಿಕೊಳ್ಳಲು ಯತ್ನಿಸುತ್ತಾರೆ. ಇದನ್ನು ಯುವ ಕ್ರಿಕೆಟಿಗರಿಗೆ ಪರೀಕ್ಷಾರ್ಥ ಸ್ಥಳ (ವೇದಿಕೆ) ಎಂದೇ ನಾನು ಭಾವಿಸುತ್ತೇನೆ. ಐಪಿಎಲ್ ತಂಡಗಳ ಎಲ್ಲಾ ಪ್ರಮುಖ ಆಯ್ಕೆದಾರರು ಹಾಗೂ ಪಾಲುದಾರರು, ಇಂತಹ ಪಂದ್ಯಗಳಲ್ಲಿ ಮಿಂಚುವ ಆಟಗಾರರ ಮೇಲೆ ತಮ್ಮ ಗಮನ ಕೇಂದ್ರಿಕರಿಸುತ್ತಾರೆ.

ಮಿತ್ರ: ಮೈಸೂರು ವಾರಿಯರ್ಸ್ ಪ್ರಾಯೋಜಕರಾಗಿ, ಈ ಬಾರಿಯ ತಂಡದ ಸಂಯೋಜನೆ ಬಗ್ಗೆ ಏನು ಹೇಳುತ್ತೀರಿ?

ಅರ್ಜುನ ರಂಗ: ಪ್ರಥಮ ಬಾರಿಗೆ, ಕೆಎಸ್‌ಸಿಎ ಒಂದು ಹೊಸ ಮತ್ತು ವಿಶಿಷ್ಟವಾದ ಮಾದರಿ ರೂಪಿಸಿದೆ. ಇಲ್ಲಿ ತಂಡದ ಪ್ರಾಯೋಜಕರಿದ್ದಾರೆಯೇ ವಿನಃ ತಂಡದ ಒಡೆಯರಿಲ್ಲ. ಇದು ಫ್ರಾಂಚೈಸಿ ಮಾದರಿಯೂ ಅಲ್ಲ. ಪ್ರಾಯೋಜಕರಾಗಿ, ತಂಡದ ಆಯ್ಕೆಯಲ್ಲಿ ನಮ್ಮ ಪಾತ್ರವಿಲ್ಲ ಹಾಗೂ ಆಯ್ಕೆಯನ್ನು ಕೆಎಸ್‌ಸಿಎ ಮಾಡಿದೆ. ಆಯ್ಕೆ ಮುಗಿದ ಮೇಲೆಯೇ, ನನ್ನ ತಂಡದ ಸದಸ್ಯರ್‍ಯಾರು ಎಂಬುದು ನನಗೆ ಗೊತ್ತಾಯಿತು. ಕೆಎಸ್‌ಸಿಎ ಆಯ್ಕೆದಾರರು, ತರಬೇತುದಾರರು ಹಾಗೂ ಸಹಾಯಕ ತರಬೇತುದಾರನ್ನು ನೇಮಕ ಮಾಡಿದ್ದರು. ಆ ನಿಟ್ಟಿನಲ್ಲಿ ನನಗೆ ಯಾವ ಆಯ್ಕೆಯೂ ಇರಲಿಲ್ಲ. ಆದರೆ, ತಂಡವನ್ನು ನಿಗದಿಗೊಳಿಸಿದ ಮೇಲೆ, ನನಗೆ ಅವರು ಅತ್ಯಂತ ಸಾಮರ್ಥ್ಯವುಳ್ಳ ತಂಡವನ್ನು ಆರಿಸಿದ್ದಾರೆ ಎನಿಸಿತು. ಇದು ಎಲ್ಲಾ ಸಂಭಾವ್ಯ ರಾಜ್ಯ ಮತ್ತು ರಾಷ್ಟ್ರೀಯ ಕ್ರಿಕೆಟರ್‌ಗಳ ಅನುಭವ ಮತ್ತು ಯುವಕರ ಸಾಮರ್ಥ್ಯಗಳ ಮಿಶ್ರಣವಾಗಿದೆ.

ಮಿತ್ರ: ಪ್ರಾಯೋಜಕರಿಲ್ಲದೆಯೇ ಹೇಗೆ ತಂಡವನ್ನು ಆಯ್ಕೆ ಮಾಡಲಾಯಿತು ಎಂಬುದನ್ನು ವಿವರಿಸುವಿರಾ?

ಅರ್ಜುನ ರಂಗ: ಈ ಬಾರಿ ತಂಡದ ಆಯ್ಕೆಯಲ್ಲಿ ಕೆಎಸ್‌ಸಿಎ ಡ್ರಾಫ್ಟಿಂಗ್ ವಿಧಾನ ಅನುಸರಿಸಿದ್ದು, ಇದರ ಪ್ರಕಾರ ಪ್ರತಿಯೊಂದು ತಂಡವೂ ಒಬ್ಬ ಆಟಗಾರನನ್ನು ಆಯ್ಕೆ ಮಾಡಿಕೊಳ್ಳುವ ನಿಯಮವಿದೆ. ನಂತರ, ಪ್ರತಿಯೊಂದು ತಂಡವೂ ಪ್ರಥಮ ಮತ್ತು ದ್ವಿತೀಯ ಆದ್ಯತೆಯ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಓರ್ವ ಪ್ರಾಯೋಜಕನಾಗಿ ನನಗೆ ಅತ್ಯುತ್ತಮ ತಂಡ ಸಿಕ್ಕಿದೆ.

ಮಿತ್ರ: ತಂಡದ ಸಂಯೋಜನೆಯಲ್ಲಿ, ತಾವು ವಿಭಿನ್ನವಾಗಿ ಏನನ್ನಾದರೂ ಮಾಡಿರುವಿರಾ?

ಅರ್ಜುನ ರಂಗ: ತಂಡದ ಬಗ್ಗೆ ನನಗೆ ಸಂತೋಷವಿದೆ. ಒಂದು ಉತ್ತಮ ಕ್ರಿಕೆಟ್ ತಂಡವಾಗಬೇಕಾದರೆ, ಬಲಿಷ್ಠ ಆರಂಭಿಕ ಆಟಗಾರರಿರಬೇಕು. ಅದಕ್ಕೆ ಅನುಗುಣವಾಗಿ ತಂಡದ ಆರಂಭಿಕರಾಗಿ ನಾಯಕ ಕರುಣ್ ನಾಯರ್, ನಿಹಾಲ್ ಉಲ್ಲಾಳ್, ಪವನ್ ದೇಶಪಾಂಡೆ, ಮತ್ತು ನಾಗಭರತ್ ಅವರಿಗೆ ಅವಕಾಶ ಕಲ್ಪಿಸಿದ್ದೇವೆ. ಆನಂತರ, ಮಧ್ಯಮ ಕ್ರಮಾಂಕದಲ್ಲಿ ಬ್ಯಾಟ್ಸ್‌ಮನ್ ಮತ್ತು ಆಲ್‌ರೌಂಡರ್ ಒಳಗೊಂಡಂತೆ ಶ್ರೇಯಸ್ ಗೋಪಾಲ್, ಶುಭಾಂಗ್ ಹೆಗಡೆ, ಎಸ್.ಶಿವರಾಜ್, ಭರತ್ ಧುರಿ ಮತ್ತು ಲೋಚನ್ ಅಪ್ಪಣ್ಣ ಇದ್ದಾರೆ. ವೇಗದ ಬೌಲರ್‌ಗಳಾಗಿ ಪ್ರತೀಕ್ ಜೈನ್, ವಿದ್ಯಾಧರ ಪಾಟೀಲ್ ಮತ್ತು ಆದಿತ್ಯ ಗೋಯಲ್ ತಂಡದಲ್ಲಿದ್ದು, ತಂಡ ಸಮತೋಲನದಿಂದ ಕೂಡಿದೆ.

ಉತ್ತಮ ಪ್ರದರ್ಶನದ ವಿಶ್ವಾಸ

ಕರುಣ್ ನಾಯರ್



ಮೈಸೂರು ವಾರಿಯರ್ಸ್ ನಾಯಕ ಕರುಣ್ ನಾಯರ್ ಅಂತರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಉತ್ತಮ ದಾಖಲೆ ಹೊಂದಿದ್ದಾರೆ. 2016ರಲ್ಲಿ ಜಿಂಬಾಬ್ವೆ ವಿರುದ್ಧ ಏಕದಿನ ಪಂದ್ಯ ಹಾಗೂ ಇಂಗ್ಲೆಂಡ್ ವಿರುದ್ಧ ಟೆಸ್ಟ್ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ ಅವರು, ಟೆಸ್ಟ್‌ನಲ್ಲಿ ತ್ರಿಶತಕ ಗಳಿಸಿದ ಭಾರತದ 2ನೇ ಆಟಗಾರ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಅಲ್ಲದೇ ತಮ್ಮ ಮೊದಲ ಶತಕವನ್ನು ತ್ರಿಶತಕವಾಗಿ ಪರಿವರ್ತಿಸಿದ ವಿಶ್ವದ 3ನೇ ಕ್ರಿಕೆಟಿಗ. ಕರುಣ್‌ನಾಯರ್ ಪ್ರಸ್ತುತ ಕರ್ನಾಟಕ ರಣಜಿ ಟ್ರೋಫಿ ತಂಡದ ಹಾಲಿ ಸದಸ್ಯ ಮತ್ತು ಕರ್ನಾಟಕ ಹಿರಿಯರ ತಂಡ ಹಾಗೂ 2017ರಿಂದ ಮೈಸೂರು ವಾರಿಯರ್ಸ್ ನಾಯಕರಾಗಿದ್ದಾರೆ. ಇವರು ಮುಂಬೈ ಇಂಡಿಯನ್ಸ್, ರಾಜಸ್ಥಾನ್ ರಾಯಲ್ಸ್, ಇಂಡಿಯಾ 'ಎ', ಡೆಲ್ಲಿ ಕ್ಯಾಪಿಟಲ್ಸ್, ಕಿಂಗ್ಸ್ ಇಲೆವೆನ್ ಪಂಜಾಬ್, ಸನ್‌ರೈಸರ್ಸ್ ಹೈದರಾಬಾದ್, ಕೋಲ್ಕತಾ ನೈಟ್ ರೈಡರ್ಸ್‌ಗಳಲ್ಲಿ ಇಂಡಿಯನ್ ಪ್ರಿಮೀಯರ್ ಲೀಗ್ ಪಂದ್ಯಾವಳಿಯಲ್ಲಿ ಆಡಿದ್ದಾರೆ. ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ್ದಾರೆ. ಅದರ ತುಣುಕು ಇಲ್ಲಿದೆ...

ಮೈಸೂರು ಮಿತ್ರ ನೀವು ತಂಡದ ಸ್ವಲ್ಪ ಒಳನೋಟ ನೀಡುತ್ತೀರಾ?

ಕರುಣ್ ನಾಯರ್: ಮೈಸೂರು ವಾರಿಯರ್ಸ್ ಅತ್ಯುತ್ತಮ ತಂಡವಾಗಿದೆ. ತಂಡದಲ್ಲಿ ಆಲ್‌ರೌಂಡರ್ಸ್, ಹಿರಿಯರು, ಕಿರಿಯರನ್ನು ಒಳಗೊಂಡ ಸೊಗಸಾದ ಮಿಶ್ರಣವಿದೆ. ನಾವು ಒಳ್ಳೆಯ, ಕುತೂಹಲಕಾರಿ ಕ್ರಿಕೆಟ್ ಎದುರು ನೋಡುತ್ತಿದ್ದೇವೆ.

ಮಿತ್ರ ತಂಡದ ಮನೋಬಲದ ಬಗ್ಗೆ ತಿಳಿಸುವಿರಾ?

ಕರುಣ್: ನಾವು ಪಂದ್ಯಾವಳಿಯ ಅತ್ಯುತ್ತಮ ಫ್ರಾಂಚೈಸಿಯಾಗಿದ್ದೇವೆ. ಆದ್ದರಿಂದ ಪ್ರತಿಯೊಂದು ಸಹ ಅನುಕ್ರಮವಾಗಿದೆ ಎಂಬುದನ್ನು ಖಾತರಿಪಡಿಸಿಕೊಂಡಿದ್ದೇವೆ ಒಂದು ಉತ್ಸಾಹದ ಪರಿಸರವಿದೆ ಹಾಗೂ ಪಂದ್ಯಾವಳಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಲು ಎದುರು ನೋಡುತ್ತಿದ್ದೇವೆ.

ಮಿತ್ರ ಮಳೆಯಿಂದಾಗಿ ನಿಮ್ಮ ತರಬೇತಿ ಸಮಯ ಹಾಳಾಯಿತು. ಪಂದ್ಯಗಳ ಸಮಯದಲ್ಲಿ ಮಳೆಯಾಗುವ ಸಂಭವವಿದೆಯಲ್ಲಾ?

ಕರುಣ್: ಹವಾಮಾನವನ್ನು ನಾವು ನಿಯಂತ್ರಿಸಲು ಸಾಧ್ಯವಿಲ್ಲ ಆಯಾಯ ದಿನ ಹೇಗಿರುತ್ತದೆಯೋ ಅದರಂತೆ ನಾವು ಸಾಗಬೇಕು. ಆದರೆ ಹವಾಮಾನ ಉತ್ತಮವಾಗಿರುತ್ತದೆ ಎಂದು ನಾವು ಭಾವಿಸುತ್ತೇವೆ. ಅಷ್ಟಕ್ಕೂ ನಾವು ಎಲ್ಲದಕ್ಕೂ ಸಿದ್ಧತೆ ಮಾಡಿಕೊಂಡಿದ್ದೇವೆ

ಮಿತ್ರ: ತಂಡವನ್ನು ಮುನ್ನಡೆಸುತ್ತಿರುವುದಕ್ಕೆ ಹೇಗನಿಸುತ್ತಿದೆ ?

ಕರುಣ್: ಈ ಜವಾಬ್ದಾರಿಯಿಂದ ನಾನು ವಿನಮ್ರನಾಗಿದ್ದೇನೆ. ನನ್ನ ಆಟದ ಅನುಭವವನ್ನು ತಂಡಕ್ಕೆ ಧಾರೆ ಎರೆಯುವ ಮೂಲಕ ಉತ್ತಮ ಆಟಗಾರರನ್ನು ಬೆಳೆಸುತ್ತೇನೆ ಮೈಸೂರು ವಾರಿಯರ್ಸ್ ಜೊತೆ ಇದು ನನ್ನ 2ನೇ ವರ್ಷದ ನಾಯಕತ್ವ ನಾನು ಆಶಾವಾದಿಯಾಗಿದ್ದೇನೆ. ಖಂಡಿತವಾಗಿ ನಾವೆಲ್ಲರೂ ತಂಡದ ಗೆಲುವಿಗೆ ಶ್ರಮಿಸುತ್ತೇವೆ.

ಮಿತ್ರ: ನೀವು ತಂಡದ ಸಾಮರ್ಥ್ಯದ ಬಗ್ಗೆ ಯೋಚಿಸಿದ್ದೀರಾ ?

ನಾಯರ್: ಉತ್ತಮ ಬ್ಯಾಟ್ಸ್‌ಮನ್ ಮತ್ತು ಬೌಲರ್‌ಗಳನ್ನು ನಾವು ಹೊಂದಿದ್ದೇವೆ. ಒಂದು ಒಳ್ಳೆಯ ತಂಡವಾಗಿ ಆಡಲಿದ್ದೇವೆ. ಮೈದಾನಕ್ಕೆ ಇಳಿದ ಮೇಲೆ ಇದು ಗೊತ್ತಾಗಲಿದೆ. ನಾವು ಆಟವಾಡುವ ಸಂದರ್ಭಗಳಲ್ಲಿ ಒಬ್ಬರನ್ನೊಬ್ಬರು ಅರಿಯುವ ಅವಕಾಶ ದೊರಕುತ್ತದೆ. ಹಾಗೂ ನಮ್ಮ ಕೌಶಲ್ಯದ ಪ್ರದರ್ಶನ ವಾಗುತ್ತದೆ. ಸುಧಾರಣೆಗೆ ಅವಕಾಶ ಇದ್ದರೆ ಖಂಡಿತವಾಗಿ ನಾವು ಅದನ್ನು ಮಾಡುತ್ತೇವೆ.

ಸಮರ್ಥ ಪ್ರತಿಭೆಗಳಿವೆ...

ಪಿ.ವಿ.ಶಶಿಕಾಂತ್



ಮೈಸೂರು ವಾರಿಯರ್ಸ್‌ನ ಮುಖ್ಯ ಕೋಚ್. ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಮನ್ನಾಗುಡ್ಡದವರಾದ ಶಶಿಕಾಂತ್, 1987–88ರಿಂದ 1996–97ರವರೆಗೆ ಕರ್ನಾಟಕದಿಂದ ಭಾರತೀಯ ಮಾಜಿ ಪ್ರಥಮ ದರ್ಜೆ ಕ್ರಿಕೆಟರ್ ಆಗಿದ್ದಾರೆ. ಇವರು 1994ರಲ್ಲಿ ಮೊಹಿನ್-ಉದ್-ದೌಲ ಗೋಲ್ಡ್ ಕಪ್ ಟೂರ್ನಮೆಂಟ್ ಗೆದ್ದ ಕರ್ನಾಟಕದ ನಾಯಕರಾಗಿದ್ದಾರೆ. ರೆಸ್ಟ್ ಇಂಡಿಯಾದ ವಿರುದ್ಧ ಕರ್ನಾಟಕಕ್ಕೆ 1996–97ರಲ್ಲಿ ಇರಾನಿ ಕಪ್ ತಂದುಕೊಟ್ಟಿದ್ದಾರೆ. 2017ರ ಏಪ್ರಿಲ್‌ನಲ್ಲಿ ಇವರು ಕರ್ನಾಟಕ ಹಿರಿಯರ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದರು. 2018ರಲ್ಲಿ ಬಿಸಿಸಿಐನಿಂದ ಮಿಜೋರಾಂ ಕ್ರಿಕೆಟ್ ತಂಡದ ಕೋಚ್ ಆಗಿಯೂ ನೇಮಕಗೊಂಡಿದ್ದರು. ಕಳೆದ ನಾಲ್ಕೈದು ವರ್ಷಗಳಿಂದ ಹಾಲಿ ಭಾರತೀಯ ಆಟಗಾರರಾದ ಕೆ.ಎಲ್.ರಾಹುಲ್, ಪ್ರಸಿದ್ಧ ಕೃಷ್ಣ ಮನೀಶ್ ಪಾಂಡೆ ಮಯಾಂಕ್ ಅಗರ್ವಾಲ್, ಅಭಿಮನ್ಯು ಮಿಥುನ್, ಇನ್ನಿತರ ಮಂದಿಯೊಂದಿಗೆ ಕೆಲಸ ಮಾಡಿದ್ದಾರೆ ರಾಯಲ್ಸ್ ಚಾಲೆಂಜರ್ಸ್ ಬೆಂಗಳೂರಿನ ಸಹಾಯಕ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಇವರು ತಮ್ಮ ತಂಡ ಹಾಗೂ ಅದರ ಸಾಮರ್ಥ್ಯದ ಬಗ್ಗೆ 'ಮೈಸೂರು ಮಿತ್ರನೊಂದಿಗೆ ಮುಕ್ತವಾಗಿ ಮಾತನಾಡಿದ್ದಾರೆ...

ಮೈಸೂರು ಮಿತ್ರ: ಓರ್ವ ಅನುಭವಿ ತರಬೇತುದಾರರಾಗಿ, ಮೈಸೂರು ವಾರಿಯರ್ಸ್ ತಂಡವನ್ನು ನೀವು ಹೇಗೆ ಪರಿಗಣಿಸುತ್ತೀರಿ?

ಶಶಿಕಾಂತ್: ತಂಡವು ಅನುಭವಿಗಳು ಹಾಗೂ ಯುವ ಪ್ರತಿಭೆಗಳ ಮಿಶ್ರಣವಾಗಿದೆ. ಶ್ರೇಯಸ್ ಗೋಪಾಲ್, ಶುಭಾಂಗ್ ಹೆಗಡೆ, ಪ್ರತೀಕ್ ಜೈನ್, ಲೋಚನ್ ಅಪ್ಪಣ್ಣ, ನಿತಿನ್ ಮತ್ತು ವಿದ್ಯಾಧರ ಪಾಟೀಲ್ ಅವರಂತಹ ನುರಿತ ಆಟಗಾರರಿದ್ದಾರೆ. ಟೆಸ್ಟ್ ಕ್ರಿಕೆಟ್ ಹಾಗೂ ಕೆಪಿಎಲ್‌ನಲ್ಲಿ ಅವರೆಲ್ಲಾ ಈಗಾಗಲೇ ಗಣನೀಯ ಸಾಧನೆ ಮಾಡಿದ್ದಾರೆ. ಅದೇ ರೀತಿ ಇತ್ತೀಚಿನ T20 ಪಂದ್ಯಾವಳಿಗಳಲ್ಲೂ ಉತ್ತಮ ಸಾಧನೆ ಮಾಡಿದ ಯುವ ಆಟಗಾರರಿದ್ದಾರೆ. ಡ್ರಾಫ್ಟ್‌ನಲ್ಲಿ ನಾವು ಅವರನ್ನು ಆಯ್ಕೆ ಮಾಡಿದೆವು. ತಮ್ಮ ತಮ್ಮ ವಿಭಾಗಗಳಲ್ಲಿ ಅವರೆಲ್ಲರೂ ಉತ್ತಮ ಸಾಧನೆ ಮಾಡುತ್ತಿದ್ದಾರೆ. ತಂಡದ ಆತ್ಮಸ್ಥೈರ್ಯ ಉತ್ತುಂಗದಲ್ಲಿದೆ.

ಮಿತ್ರ: ಮಳೆಯಿಂದ ತಂಡ ಬೆರೆಯುವ ಮತ್ತು ತರಬೇತಿಗೆ ಸಾಧ್ಯವಾಗಿಲ್ಲ. ತಂಡದ ಸದಸ್ಯರು ಪರಸ್ಪರ ಬೆರೆಯುವುದು ಹೇಗೆ?

ಶಶಿಕಾಂತ್: ದುರದೃಷ್ಟವಶಾತ್, ಹವಾಮಾನ ವೈಪರಿತ್ಯದಿಂದಾಗಿ ತಂಡದ ಸದಸ್ಯರು ಬೆರೆಯಲು ಹಾಗೂ ಅಭ್ಯಾಸಕ್ಕೂ ಸಮಯ ಸಿಗಲಿಲ್ಲ. ಇದೆಲ್ಲವನ್ನೂ ಹಿಮ್ಮೆಟ್ಟಿ ನಮ್ಮಲ್ಲಿ ಟೀಂ ಸ್ಪಿರಿಟ್ ಇದೆ. ತಂಡದಲ್ಲಿ ಉತ್ತಮ ಪ್ರದರ್ಶನದ ಉಮ್ಮಸ್ಸು ಇರುವುದನ್ನು ನಾನು ಕಂಡಿದ್ದು, ಅದೇ ಅತೀವ ಭರವಸೆಯಿಂದ ಸಾಗಲಿದ್ದೇವೆ.

ಮಿತ್ರ: ತಂಡದ ಸಾಮರ್ಥ್ಯದ ಬಗ್ಗೆ ನೀವೇನು ಹೇಳುತ್ತೀರಾ?

ಶಶಿಕಾಂತ್: ನಾವು ಎಲ್ಲಾ ವಿಭಾಗಗಳಲ್ಲೂ ಪರಿಪೂರ್ಣರಾಗಿದ್ದೇವೆ ಬ್ಯಾಟಿಂಗ್‌ನಲ್ಲಿ ಉತ್ತಮರಿದ್ದೇವೆ ಅತ್ಯುತ್ತಮ ಆಲ್‌ರೌಂಡರ್‌ಗಳಿದ್ದಾರೆ. ಬೌಲಿಂಗ್‌ನಲ್ಲಿ ಕೂಡ ಉತ್ತಮ ಸಾಧಕರಿದ್ದಾರೆ. ಒಟ್ಟಾರೆ ಅನುಭವ ಹಾಗೂ ಯುವ ಆಟಗಾರರಿಂದ ಕೂಡಿದ ಸಮತೋಲನದ ತಂಡವಾಗಿದೆ. ಅವರೆಲ್ಲರೂ ಪ್ರತಿದಿನ ತಮ್ಮ ಸಾಮರ್ಥ್ಯ ಉತ್ತಮಪಡಿಸಿಕೊಳ್ಳಲು ಬದ್ಧರಾಗಿದ್ದಾರೆ.

ಮಿತ್ರ: ಮೈಸೂರು ವಾರಿಯರ್ಸ್ ತಂಡಕ್ಕೆ ತರಬೇತಿ ನೀಡುವುದು ಯಾವ ರೀತಿ ಇರುತ್ತದೆ?

ಶಶಿಕಾಂತ್: ನನ್ನ ಮೇಲೆ ದೊಡ್ಡ ಜವಾಬ್ದಾರಿ ಇದೆ. ಈ ಜವಾಬ್ದಾರಿಯನ್ನು ಯಶಸ್ವಿಯಾಗಿ ಪೂರೈಸುತ್ತೇನೆ ಎಂಬ ಭರವಸೆ ಇದೆ. ಮೈಸೂರು ವಾರಿಯರ್ಸ್‌ನಂತಹ ತಂಡದ ಜೊತೆ ಕೆಲಸ ಮಾಡುವುದರಿಂದ 2 ಉದ್ದೇಶಗಳು ಪೂರೈಸುತ್ತವೆ ಪ್ರತಿಭಾವಂತ ಆಟಗಾರರಿಗೆ ತರಬೇತಿ ನೀಡುವುದು ಹಾಗೂ ಕ್ರಿಕೆಟ್ ಮೇಲಿನ ಪ್ರೀತಿಯಿಂದಾಗಿ ಎಲ್ಲರನ್ನು ಜೊತೆಯಾಗಿ ಕೊಂಡೊಯ್ಯುವುದು.

ಮಹಾರಾಜ ಟ್ರೋಫಿ ಟಿ–20 ಕ್ರಿಕೆಟ್ ಪಂದ್ಯಾವಳಿ ವೇಳಾಪಟ್ಟಿ

ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಗ್ಲೇಡ್ಸ್) ಮೈದಾನದಲ್ಲಿ ಆ.7ರಿಂದ 15ರವರೆಗೆ ನಡೆಯುವ ಪಂದ್ಯಗಳು

ದಿನಾಂಕ	ಪಂದ್ಯ	ಸಮಯ
ಆ.7	ಹುಬ್ಬಳ್ಳಿ ಟೈಗರ್ಸ್ / ಮಂಗಳೂರು ಯುನೈಟೆಡ್ ಮೈಸೂರು ವಾರಿಯರ್ಸ್ / ಶಿವಮೊಗ್ಗ ಸ್ಟ್ರೈಕರ್ಸ್	ಮಧ್ಯಾಹ್ನ 3 ಸಂಜೆ 7
ಆ.8	ಬೆಂಗಳೂರು ಬ್ಲಾಸ್ಟರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್ ಮೈಸೂರು ವಾರಿಯರ್ಸ್ / ಮಂಗಳೂರು ಯುನೈಟೆಡ್	ಮಧ್ಯಾಹ್ನ 3 ಸಂಜೆ 7
ಆ.9	ಗುಲ್ಬರ್ಗಾ ಮೈಸ್ಟಿಕ್ಸ್ / ಶಿವಮೊಗ್ಗ ಸ್ಟೈಕರ್ಸ್ ಬೆಂಗಳೂರು ಬ್ಲಾಸ್ಟರ್ಸ್/ ಹುಬ್ಬಳ್ಳಿ ಟೈಗರ್ಸ್	ಮಧ್ಯಾಹ್ನ 3 ಸಂಜೆ 7
ಆ.10	ಮೈಸೂರು ವಾರಿಯರ್ಸ್ / ಹುಬ್ಬಳ್ಳಿ ಟೈಗರ್ ಮಂಗಳೂರು ಯುನೈಟೆಡ್ / ಶಿವಮೊಗ್ಗ ಸ್ಟೈಕರ್ಸ್	ಮಧ್ಯಾಹ್ನ 3 ಸಂಜೆ 7
ಆ.11	ಬೆಂಗಳೂರು ಬ್ಲಾಸ್ಟರ್ಸ್/ ಮಂಗಳೂರು ಯುನೈಟೆಡ್ ಮೈಸೂರು ವಾರಿಯರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್	ಮಧ್ಯಾಹ್ನ 3 ಸಂಜೆ 7
ಆ.12	ಹುಬ್ಬಳ್ಳಿ ಟೈಗರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್ ಬೆಂಗಳೂರು ಬ್ಲಾಸ್ಟರ್ಸ್/ ಶಿವಮೊಗ್ಗ ಸ್ಟೈಕರ್ಸ್	ಮಧ್ಯಾಹ್ನ 3 ಸಂಜೆ 7
ಆ.13	ಹುಬ್ಬಳ್ಳಿ ಟೈಗರ್ಸ್ / ಶಿವಮೊಗ್ಗ ಸ್ಟೈಕರ್ಸ್ ಮೈಸೂರು ವಾರಿಯರ್ಸ್/ ಬೆಂಗಳೂರು ಬ್ಲಾಸ್ಟರ್ಸ್	ಮಧ್ಯಾಹ್ನ 3 ಸಂಜೆ 7
ಆ.14	ಮೈಸೂರು ವಾರಿಯರ್ಸ್ / ಶಿವಮೊಗ್ಗ ಸ್ಟೈಕರ್ಸ್ ಗುಲ್ಬರ್ಗಾ ಮೈಸ್ಟಿಕ್ಸ್ / ಮಂಗಳೂರು ಯುನೈಟೆಡ್	ಮಧ್ಯಾಹ್ನ 3 ಸಂಜೆ 7
ಆ.15	ಮಂಗಳೂರು ಯುನೈಟೆಡ್ / ಬೆಂಗಳೂರು ಬ್ಲಾಸ್ಟರ್ಸ್ ಗುಲ್ಬರ್ಗಾ ಮೈಸ್ಟಿಕ್ಸ್ / ಹುಬ್ಬಳ್ಳಿ ಟೈಗರ್ಸ್	ಮಧ್ಯಾಹ್ನ 3 ಸಂಜೆ 7
	ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಎರಡನೇ ಹಂತದಲ್ಲಿ ಆ.17ರಿಂದ 26ರವರೆಗೆ ನಡೆಯುವ ಪಂದ್ಯಗಳು	
ಆ.17	ಮೈಸೂರು ವಾರಿಯರ್ಸ್ / ಮಂಗಳೂರು ಯುನೈಟೆಡ್ ಬೆಂಗಳೂರು ಬ್ಲಾಸ್ಟರ್ಸ್/ ಶಿವಮೊಗ್ಗ ಸ್ಟೈಕರ್ಸ್	ಮಧ್ಯಾಹ್ನ 3 ಸಂಜೆ 7
ಆ.18	ಬೆಂಗಳೂರು ಬ್ಲಾಸ್ಟರ್ಸ್/ ಗುಲ್ಬರ್ಗಾ ಮೈಸ್ಟಿಕ್ಸ್ ಹುಬ್ಬಳ್ಳಿ ಟೈಗರ್ಸ್ / ಮೈಸೂರು ವಾರಿಯರ್ಸ್	ಮಧ್ಯಾಹ್ನ 3 ಸಂಜೆ 7
ಆ.19	ಹುಬ್ಬಳ್ಳಿ ಟೈಗರ್ಸ್ / ಶಿವಮೊಗ್ಗ ಸ್ಟೈಕರ್ಸ್ ಮಂಗಳೂರು ಯುನೈಟೆಡ್ / ಗುಲ್ಬರ್ಗಾ ಮೈಸ್ಟಿಕ್ಸ್	ಮಧ್ಯಾಹ್ನ 3 ಸಂಜೆ 7
ಆ.20	ಮಂಗಳೂರು ಯುನೈಟೆಡ್ / ಶಿವಮೊಗ್ಗ ಸ್ಟೈಕರ್ಸ್ ಮೈಸೂರು ವಾರಿಯರ್ಸ್ / ಬೆಂಗಳೂರು ಬ್ಲಾಸ್ಟರ್ಸ್	ಮಧ್ಯಾಹ್ನ 3 ಸಂಜೆ 7
ಆ.21	ಮೈಸೂರು ವಾರಿಯರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್ ಹುಬ್ಬಳ್ಳಿ ಟೈಗರ್ಸ್ / ಬೆಂಗಳೂರು ಬ್ಲಾಸ್ಟರ್ಸ್	ಮಧ್ಯಾಹ್ನ 3 ಸಂಜೆ 7
ಆ.22	ಶಿವಮೊಗ್ಗ ಸ್ಟೈಕರ್ಸ್ / ಗುಲ್ಬರ್ಗಾ ಮೈಸ್ಟಿಕ್ಸ್ ಮಂಗಳೂರು ಯುನೈಟೆಡ್/ ಹುಬ್ಬಳ್ಳಿ ಟೈಗರ್ಸ್	ಮಧ್ಯಾಹ್ನ 3 ಸಂಜೆ 7
ಆ.23	ಕ್ವಾಟರ್ ಫೈನಲ್ ಪಂದ್ಯ	
ಆ.25	2ನೇ ಕ್ವಾಟರ್ ಫೈನಲ್	
ಆ.26	ಫೈನಲ್ ಪಂದ್ಯ ಜರುಗಲಿದೆ	

ಇವರೇ ಮೈಸೂರು ವಾರಿಯರ್ಸ್...

1. ಕರುಣ್ ನಾಯರ್ — ನಾಯಕ



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಆಫ್ ಬ್ರೇಕ್ ಬೌಲರ್
- ಕರ್ನಾಟಕ ರಣಜಿ ತಂಡದ ಆಟಗಾರ
- ಕರ್ನಾಟಕ ಹಿರಿಯರ ತುಡ ಹಾಗೂ ವೈಸೂರು ವಾರಿಯರ್ಸ್ (2017)ಹಾಲಿ ನಾಯಕ
- ಇಂಡಿಯಾ 'ಎ', ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್, ರಾಜಸ್ಥಾನ್ ರಾಯಲ್ಸ್, ಡೆಲ್ಲಿ ಕ್ಯಾಪಿಟಲ್ಸ್, ಕಿಂಗ್ಸ್ ಇಲೆವೆನ್ ಪಂಜಾಬ್, ಸನ್‌ರೈಸರ್ಸ್ ಹೈದರಾಬಾದ್, ಕೋಲ್ಕತಾ ನೈಟ್ ರೈಡರ್ಸ್ ತಂಡಗಳ ಪರ ಆಡಿದ್ದಾರೆ.

2. ಶ್ರೇಯಸ್ ಗೋಪಾಲ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಲೆಗ್‌ಸ್ಪಿನ್ ಬೌಲರ್
- ಕರ್ನಾಟಕ ರಣಜಿ ತಂಡದ ಆಟಗಾರ
- 2017ರಿಂದ ಮೈಸೂರು ವಾರಿಯರ್ಸ್ ತಂಡ (ಕೆಪಿಎಲ್), ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್, ರಾಜಸ್ಥಾನ್ ರಾಯಲ್ಸ್, ಸನ್‌ರೈಸರ್ಸ್ ಹೈದರಾಬಾದ್ ಪರ ಆಡಿದ್ದಾರೆ.

3. ಪವನ್ ದೇಶಪಾಂಡೆ



- ಲೆಫ್ಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಆಫ್ ಸ್ಪಿನ್ ಬೌಲರ್
- ಕರ್ನಾಟಕ ರಣಜಿ ತಂಡದ ಆಟಗಾರ
- ಪಾಂಡಿಚೇರಿ ರಣಜಿ ತಂಡ, ಕರ್ನಾಟಕ ಅಂಡರ್–16, 19 ಮತ್ತು 23 ತಂಡ ಹಾಗೂ ಐಪಿಎಲ್‌ನಲ್ಲಿ ಆರ್‌ಸಿಬಿ ಪರ ಆಡಿದ್ದಾರೆ.

4. ವಿದ್ಯಾಧರ್ ಪಾಟೀಲ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಮಧ್ಯಮ ವೇಗದ ಬೌಲರ್
- ಕರ್ನಾಟಕ ರಣಜಿ ತಂಡ ಹಾಗೂ ಭಾರತ ಅಂಡರ್–19 ತಂಡದ ಆಟಗಾರ.

5. ನಿಹಾಲ್ ಉಲ್ಲಾಲ್ (ವಿಕೆಟ್ ಕೀಪರ್)



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ವಿಕೆಟ್ ಕೀಪರ್
- ಕರ್ನಾಟಕದ ಅಂಡರ್–19, 23 ತಂಡದ ಆಟಗಾರ
- ಕರ್ನಾಟಕ ಹಿರಿಯರ ತಂಡದ ಸದಸ್ಯ ಹಾಗೂ ಮೈಸೂರು ವಾರಿಯರ್ಸ್ ತಂಡದ ಮಾಜಿ ಸದಸ್ಯ

6. ಪ್ರತೀಕ್ ಜೈನ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಮಧ್ಯಮ ವೇಗದ ಬೌಲರ್
- ಕರ್ನಾಟಕ ಹಿರಿಯರ ತಂಡದ ಸದಸ್ಯ ಹಾಗೂ ಮೈಸೂರು ವಾರಿಯರ್ಸ್ ತಂಡದ ಮಾಜಿ ಸದಸ್ಯ
- ಆರ್‌ಸಿಬಿ ತಂಡದ ನೆಟ್ ಬೌಲರ್.

7. ಭರತ್ ಧುರಿ



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಮಧ್ಯಮ ವೇಗದ ಬೌಲರ್
- ಕೆಎಸ್‌ಸಿಎ ಅಧ್ಯಕ್ಷರ ಇಲೆವೆನ್, ಡಾ.ತಿಮ್ಮಪ್ಪಯ್ಯ ಟ್ರೋಫಿ ಹಾಗೂ ಕೆಪಿಎಲ್‌ನಲ್ಲಿ ವಿವಿಧ ಫ್ರಾಂಚೈಸಿ ಪರ ಆಡಿದ್ದಾರೆ.

8. ಚಿರಂಜೀವಿ



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ವಿಕೆಟ್ ಕೀಪರ್
- ಕರ್ನಾಟಕ ಅಂಡರ್–19, 25 ತಂಡದ ಆಟಗಾರ
- ಕೆಪಿಎಲ್‌ನಲ್ಲಿ ವಿವಿಧ ಫ್ರಾಂಚೈಸಿ ಪರ ಆಡಿದ್ದಾರೆ.

9. ಶುಭಾಂಗ್ ಹೆಗ್ಡೆ



- ಲೆಫ್ಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಸ್ಪಿನ್ ಬೌಲರ್
- ಕರ್ನಾಟಕ ರಣಜಿ ತಂಡದ ಆಟಗಾರ
- ಕರ್ನಾಟಕ ಅಂಡರ್–16, 19 ಮತ್ತು 23 ಹಾಗೂ ಭಾರತ ಅಂಡರ್–19, 23 ತಂಡದ ಪರ ಆಡಿದ್ದಾರೆ.
- ಆರ್‌ಸಿಬಿ ತಂಡದ ನೆಟ್ ಬೌಲರ್

10. ಲೋಚನ್ ಅಪ್ಪಣ್ಣ



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಮಧ್ಯಮ ವೇಗದ ಬೌಲರ್
- ಕರ್ನಾಟಕ ಅಂಡರ್–19, 23 ತಂಡದ ಆಟಗಾರ
- ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ಪರ ಆಡಿದ್ದಾರೆ

11. ಎಸ್.ಶಿವರಾಜ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್
- ಕರ್ನಾಟಕ ಅಂಡರ್–25 ಹಾಗೂ ವಿವಿಧ ಫ್ರಾಂಚೈಸಿ ಪರ ಆಡಿದ್ದಾರೆ.

12. ಮೋನಿಶ್ ರೆಡ್ಡಿ



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಮಧ್ಯಮ ವೇಗದ ಬೌಲರ್
- ಕರ್ನಾಟಕ ಅಂಡರ್–19, 23 ತಂಡ ಪರ ಆಡಿದ್ದಾರೆ.

13. ಟಿ.ಎನ್.ವರುಣ್‌ರಾವ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಆಫ್‌ಸ್ಪಿನ್ ಬೌಲರ್
- ಬೆಂಗಳೂರು ಸೆಕೆಂಡ್ ಡಿವಿಜನ್ ಲೀಗ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದಿದ್ದಾರೆ.

14. ರಾಹುಲ್ ಪ್ರಸನ್ನ



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಸ್ಪಿನ್ ಬೌಲರ್
- ಕರ್ನಾಟಕ ಅಂಡರ್–14, 16 ಹಾಗೂ 19 ತಂಡ ಪರ ಆಡಿದ್ದಾರೆ.

15. ನಿತಿನ್ ಬಿಲ್ಲೆ



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ವಿಕೆಟ್ ಕೀಪರ್
- ರೈಲ್ವೆ ರಣಜಿ ತಂಡ, ಕರ್ನಾಟಕ ಅಂಡರ್–19, 23 ಹಾಗೂ 25 ತಂಡದ ಪರ ಆಡಿದ್ದಾರೆ.
- ಕೆಪಿಎಲ್‌ನ ಹಿಂದಿನ ಆವೃತ್ತಿಯಲ್ಲಿ ವಿವಿಧ ಫ್ರಾಂಚೈಸಿ ಪರ ಆಡಿದ್ದಾರೆ.

16. ಆದಿತ್ಯ ಗೋಯಲ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಮಧ್ಯಮ ವೇಗದ ಬೌಲರ್
- ಕರ್ನಾಟಕ ಅಂಡರ್–19, 23 ಹಾಗೂ 25 ತಂಡದ ಪರ ಆಡಿದ್ದಾರೆ.

17. ಅಭಿಷೇಕ್ ಆಹ್ಲಾವತ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಆಫ್‌ಸ್ಪಿನ್ ಬೌಲರ್
- ಕರ್ನಾಟಕ ಅಂಡರ್–19, 23 ಹಾಗೂ 25 ತಂಡದ ಪರ ಆಡಿದ್ದಾರೆ.

18. ನಾಗಭರತ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್
- ಕರ್ನಾಟಕ ಅಂಡರ್–19, 25 ಹಾಗೂ ಕೆಪಿಎಲ್‌ನ ಹಿಂದಿನ ಆವೃತ್ತಿಯಲ್ಲಿ ವಿವಿಧ ಫ್ರಾಂಚೈಸಿ ಪರ ಆಡಿದ್ದಾರೆ.

19. ಕೆ.ಅರುಣ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಲೆಗ್‌ಸ್ಪಿನ್ ಬೌಲರ್
- ಮೈಸೂರು ವಿವಿ ದಕ್ಷಿಣ ವಲಯ ಹಾಗೂ ಅಂತರ ವಲಯ ಪಂದ್ಯಾವಳಿ ಅಂಡರ್–19, 23, ಶಾಫಿ ದಾರಾಶಾ ಟ್ರೋಫಿಯಲ್ಲಿ ಆಡಿದ್ದಾರೆ.

20. ಹೆಚ್.ತುಷಾರ್



- ರೈಟ್‌ಹ್ಯಾಂಡ್ ಬ್ಯಾಟ್ಸ್‌ಮನ್ ಮತ್ತು ಸ್ಪಿನ್ ಬೌಲರ್
- ಕರ್ನಾಟಕ ಅಂಡರ್–19, 23 ಹಾಗೂ 25 ತಂಡದ ಪರ ಆಡಿದ್ದಾರೆ.

ನಗೆ ಬುಗ್ಗೆ

ಗುಂಡ ತನ್ನ ಹೆಂಡತಿಯ ಬಳಿ..
ಗುಂಡ : ಗುಂಡಿ, ನಿನ್ನ ತಂದೆ ಇನ್ನೂ ತಮಾಷೆ ಮಾಡೋದು ಬಿಟ್ಟಿಲ್ಲ.
ಗುಂಡಿ : ಯಾಕೆ ಏನಾಯಿತು?
ಗುಂಡ : ನನ್ನ ಮಗಳನ್ನು ಮದುವೆಯಾಗಿ ನೀನು ಖುಷಿಯಾಗಿದ್ದೀಯಾ ಅಂತಾರೆ...!

ತಂಗಿ: ಅಣ್ಣ.. ನಾಳೆ ನನ್ನ ಫ್ರೆಂಡ್ ಬರ್ತಡೇ. ಏನು ಗಿಫ್ಟ್ ಕೊಡ್ಲಿ?
ಅಣ್ಣ : ನಿನ್ನ ಫ್ರೆಂಡ್ ನೋಡೋಕೆ ಹೇಗಿದಾಳೆ?
ತಂಗಿ : ಸಖತ್ತಾಗಿದ್ದಾಳೆ.
ಅಣ್ಣ : ಹಾಗಾದರೆ ನನ್ನ ಮೊಬೈಲ್ ನಂಬರ್ ಕೊಡು!

ಹೆಂಡತಿ: ರೀ... ನಿನ್ನೆ ರಾತ್ರಿ ನನ್ನ ಕನಸಿನಲ್ಲಿ ನೀವು ನನಗೆ ಚಿನ್ನದ ಸರ, ಓಲೆ, ಬಳೆ ಎಲ್ಲಾ ಕೊಡಿಸಿದ್ರಿ...
ಗಂಡ: ಜೋಪಾನವಾಗಿ ಇಟ್ಕೊ. ಪದೇ ಪದೇ ಕೊಡಸಕ್ಕೆ ಆಗಲ್ಲ....

ವಾರಭವಿಷ್ಯ

7.8.2022 ರಿಂದ 13.8.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ
ರವಿ–ಕಟಕ, ಚಂದ್ರ–ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ–ಮೇಷ, ಬುಧ–ಸಿಂಹ, ಗುರು–ಮೀನ, ಶುಕ್ರ–ಕಟಕ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ' 'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಾರದಾರಂಭಕ್ಕೆ ಹಲವು ಮೂಲಗಳಿಂದ ಹಣ ಗಳಿಕೆಯಾಗುವುದು. ನೂತನ ವಸ್ತ್ರಾಭರಣ ಪ್ರಾಪ್ತಿ. ನೌಕರಿ ಸ್ಥಳದಲ್ಲಿ ಒತ್ತಡ ಹಾಗೂ ಜವಾಬ್ದಾರಿಗಳು ಹೆಚ್ಚಾಗಲಿದೆ. ರಾಜಕಾರಣಿಗಳಿಗೆ ಜನ ವಿರೋಧ ಎದುರಿಸಬೇಕಾಗುವುದು ಹಾಗೂ ಕಾನೂನು ತೊಡಕುಗಳು ಉಂಟಾಗುವುದು. ಮೊಂಡುತನ ಬಿಡದೆ 'ದಂತ ಹೋದರೂ ಪಂಥ ಬಿಡೆ' ಎಂಬಂತೆ ನಿಮ್ಮ ಪರಿಸ್ಥಿತಿ ಆಗುವುದು. ಅತಿ ವೇಗ ಅಪಾಯಕ್ಕೆ ಆಹ್ವಾನ.
– ಶ್ರೀ ಗಣೇಶ ಸೇವೆ, ಶುಭಸಂಖ್ಯೆ–1.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
'ಚತುರತೆಯ ಮುಂದೆ ಹಣೆ ಬರಹವೇ ಗೆಲ್ಲುವುದು'. ವಾರದಾರಂಭಕ್ಕೆ ನಿರೀಕ್ಷಿತ ಹಣ ಕೈಗೆ ಬರುವುದು. ಬಂಧು ಬಳಗದವರ ಮಿಲನದಿಂದ ಮನಃ ಸಂತೋಷ, ಶನಿ ಪ್ರಭಾವದಿಂದ ಪ್ರಮುಖ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದು. ವಿದ್ಯಾರ್ಥಿಗಳು ಅಭ್ಯಾಸದಲ್ಲಿ ನಿರುತ್ಸಾಹ ತೋರುವರು. ಭೂಮಿ ಕ್ರಯ–ವಿಕ್ರಯ ವಿಷಯಗಳಲ್ಲಿ ನಿರ್ಧಾರಕ್ಕೆ ಮುನ್ನ ನಿಧಾನಿಸಿ. ಸಹೋದರರಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಬಹುದು.
– ಶ್ರೀ ಮನೆದೇವರ ದರ್ಶನ, ಶುಭಸಂಖ್ಯೆ–7.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ನಾನಾ ರೀತಿಯಿಂದ ಹಣಕಾಸಿನ ಆದಾಯವಿದ್ದರೂ ಅದು ಅತ್ತಿತ್ತ ಹರಿದು ಹೋಗುವುದು. ಅತಿಯಾದ ಕಾರ್ಯಭಾರಗಳಿಂದ ದೈಹಿಕವಾಗಿಯೂ, ಮಾನಸಿಕವಾಗಿಯೂ ಬಳಲುವಿರಿ. ವ್ಯಯಸ್ಥಿತ ರಾಹುವಿನಿಂದ ಆಕಸ್ಮಿಕ ಆಸ್ಪತ್ರೆ ಖರ್ಚುಗಳು ಎದುರಾಗಬಹುದು. ಆಹಾರ ಪಾನೀಯಗಳಲ್ಲಿ ಸಂಯಮ ಕಾಪಾಡಿಕೊಳ್ಳಿ. ಧಾರ್ಮಿಕ ಕಾರ್ಯಗಳಲ್ಲಿ ವಿಘ್ನ ಉಂಟಾಗುವ ಸಾಧ್ಯತೆ. ವಾರಾಂತ್ಯಕ್ಕೆ ಆಪ್ತಮಿತ್ರರ ಭೇಟಿ.
– ಶ್ರೀ ದೇವಿ ದರ್ಶನ, ಶುಭಸಂಖ್ಯೆ–4

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಗುರು ಕೃಪೆ, ಶನಿ ಕೃಪೆ ಎರಡೂ ಉಂಟು. 'ಕಬ್ಬಿಣ ಕಾದಾಗ ತಟ್ಟಿಕೊಳ್ಳಿ'. ಹಿತೈಷಿಗಳ ಸಹಕಾರದಿಂದ ಯತ್ನ ಕೆಲಸಗಳು ಗುರಿ ತಲುಪುವುದು. ನಿಮ್ಮ ಕಾರ್ಯಕ್ಷೇತ್ರದಲ್ಲಿ ಜಯವನ್ನೂ, ಲಾಭವನ್ನೂ ಹೊಂದುವಿರಿ. ವಕೀಲ ವೃತ್ತಿಯವರಿಗೆ ಪ್ರಸಿದ್ಧಿ ಹಾಗೂ ಧನಲಾಭ ಉಂಟಾಗುವುದು. ಗಣ್ಯ ವ್ಯಕ್ತಿಗಳನ್ನು ಭೇಟಿಯಾಗುವಿರಿ. ಸಣ್ಣಪುಟ್ಟ ಅನಾರೋಗ್ಯ, ವೈದ್ಯರ ದರ್ಶನ ಅನಿವಾರ್ಯವಾಗುವುದು.
– ಶ್ರೀ ಕಾರ್ತಿಕೇಯಸ್ವಾಮಿ ದರ್ಶನ, ಶುಭಸಂಖ್ಯೆ–3.

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)
'ಸಮಯಕ್ಕಾದವನೇ ನೆಂಟ' ಎಂಬಂತೆ ಅಪರಿಚಿತರಿಂದ ಸಹಾಯ ದೊರೆಯುವುದು. ಈ ವಾರದಲ್ಲಿ ಗ್ರಹ ಸಂಯೋಗಗಳು ಉತ್ತಮ ಫಲವನ್ನು ಕೊಡಲಿದೆ. ಸುಖ ಭೋಜನ, ದೇಹಸೌಖ್ಯ, ಶಯನಾದಿ ಸುಖಗಳು ದೊರೆಯಲಿದೆ. ಸಟ್ಟಾ ಲಾಟರಿಗಳಲ್ಲಿ ಜಯ ದೊರೆಯುವ ಸಾಧ್ಯತೆ ಇದೆ. ಪುಣ್ಯ ಕಾರ್ಯಗಳಲ್ಲಿ ಆಸಕ್ತಿ ತೋರುವಿರಿ. ಅಧ್ಯಾತ್ಮ ಸಾಧಕರ ಆಶೀರ್ವಾದ ದೊರೆಯುವುದು.
– ಶ್ರೀ ರಾಮನಾಮ ಸ್ತುತಿ, ಶುಭಸಂಖ್ಯೆ–2.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ವಾರದ ಪೂರ್ವಾರ್ಧಕ್ಕೆ ವಿತ್ತಲಾಭ, ಸುಖ ಸಂತೋಷ, ಉತ್ತಮ ಭೋಜನ, ಶಯನ ಸುಖ, ಮನಸ್ಸು ಪ್ರಫುಲ್ಲವಾಗಿರುತ್ತದೆ. ಪ್ರತಿಸ್ಪರ್ಧಿಗಳು ಹಿಂದೆ ಸರಿಯುವರು. ಕಳೆದುಕೊಂಡಿದ್ದನ್ನು ಪಡೆದುಕೊಳ್ಳುವಿರಿ. ವಾರದ ಉತ್ತರಾರ್ಧಕ್ಕೆ ಹೀಗೇ ಆಗಬೇಕೆಂದು ಬಯಸದೆ, ಆಗಿದ್ದನ್ನು ಒಪ್ಪಿಕೊಳ್ಳಿ. ಸಾಧ್ಯವಾಗಲ ಶಕ್ಯವಾದ ಕೆಲಸಕ್ಕೆ ಕೈ ಹಾಕದಿರಿ. ವಾಹನ ಚಾಲನೆಯಲ್ಲಿ ಸೇಫ್ಟಿ ಫಸ್ಟ್, ಸ್ಪೀಡ್ ನೆಕ್ಸ್ಟ್.
– ಶ್ರೀ ಗುರುರಾಯರ ದರ್ಶನ, ಶುಭಸಂಖ್ಯೆ–4.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ವಾರದ ಆದಿಗೆ ಮಿತ್ರ ಜನರ ಸಂಪರ್ಕದಿಂದ ಮನೋಲ್ಲಾಸ. ಗುರುಬಲದಿಂದ ಹೊಸ ಸಂಪಾದನೆಯ ಮಾರ್ಗಗಳು ಉಂಟಾಗಲಿದೆ. ಸ್ವಂತ ಕೆಲಸ ಕಾರ್ಯಗಳಲ್ಲಿ ಉಂಟಾಗಿದ್ದ ಅಡ್ಡಿ ಆತಂಕಗಳು ಸೂರ್ಯೋದಯವಾದ ತಕ್ಷಣ ಮಂಜು ಕರಗಿದಂತೆ ಭಾಸವಾಗುವುದು. ನಿಮ್ಮ ಸಾತ್ವಿಕ ನಡತೆಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾಗುವಿರಿ. ನೆರೆಹೊರೆಯಲ್ಲಿ ಉಂಟಾಗಿದ್ದ ಕಲಹಗಳು ಸುಖಾಂತ್ಯವಾಗುವುದು.
– ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ, ಶುಭಸಂಖ್ಯೆ–3.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ವಾರದಾರಂಭಕ್ಕೆ ಶುಭಚಂದ್ರ ಭ್ರಮಣದಿಂದ ಇಷ್ಟ ಕಾರ್ಯ ಸಿದ್ಧಿ. ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ಖಾಸಗಿ ಸಂಸ್ಥೆ ಉದ್ಯೋಗಿಗಳಿಗೆ ವಿಶೇಷ ಧನಲಾಭವಾಗುವ ಸಾಧ್ಯತೆ. ವಾರಮಧ್ಯಾನಂತರ ಸಾಡೇಸಾತಿಯ ಪ್ರಭಾವದಿಂದ ನಾನಾ ರೀತಿಯ ಕ್ಲೇಶಗಳನ್ನು ಎದುರಿಸಬೇಕಾಗುತ್ತದೆ. ಅಡ್ಡ ಮಾತುಗಳಿಂದ ಮನಃಶಾಂತಿ ಕೆಡುವುದು. ಮಂಡಿ ನೋವು, ಕೀಲು ನೋವು ಕಾಡಬಹುದು.
– ಶ್ರೀ ಶನಿ ಚಾಲೀಸ ಪಠಿಸಿ, ಶುಭಸಂಖ್ಯೆ–5.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಈ ವಾರದಲ್ಲಿ ಗ್ರಹ ಸಂಯೋಗ ಅಷ್ಟು ಅನುಕೂಲವಿಲ್ಲದ ಕಾರಣ 'ಕೈಗೆ ಬಂದ ತುತ್ತು ಬಾಯಿಗಿಲ್ಲ' ಎಂಬಂತೆ ಆಗುವುದು. ನಿಮ್ಮ ಕರ್ತವ್ಯ ನಿರ್ವಹಿಸುತ್ತಾ ಭಗವಧ್ಯಾನ ಮಾಡಿ, ಒಳ್ಳೆಯ ಸಮಯ ಬಂದೇ ಬರುತ್ತದೆ. ಸಜ್ಜನರ ಸಹವಾಸದಿಂದ ಮಾರ್ಗದರ್ಶನ ದೊರೆಯುವುದು. ಸರ್ಕಾರಿ ಅಧಿಕಾರಿಗಳ ಅನುಗ್ರಹದಿಂದ ಕಾರ್ಯ ಸಾಧನೆಯಾಗುವುದು. ಆಪ್ತ ಬಂಧುವರ್ಗದವರಿಂದ ಅನುಕೂಲ ಉಂಟಾಗುವುದು.
– ಶ್ರೀ ಆದಿತ್ಯ ಹೃದಯ ಪಠಿಸಿ, ಶುಭಸಂಖ್ಯೆ–6.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ಬಂಧು ಜನರ, ಆಪ್ತೇಷ್ಟರ ಭೇಟಿಯಿಂದ ವಾರಕ್ಕೆ ಸ್ವಾಗತ. ಅಧಿಕಾರಿ ವರ್ಗದವರ ಭೇಟಿಯಿಂದ ಕಾರ್ಯ ಸಾಧನೆ. ಗುರು ಕೃಪೆಯಿಂದ ಮುಟ್ಟಿದ್ದೆಲ್ಲಾ ಚಿನ್ನ ಅಲ್ಲದಿದ್ದರೂ ಬೆಳ್ಳಿಯಾದೀತು. ವಿದ್ವಜ್ಜನರ ಭೇಟಿ ಹಾಗೂ ಮಾರ್ಗದರ್ಶನಗಳು ದೊರೆಯುವುದು. ವಿವಾಹಾಕಾಂಕ್ಷಿಗಳಿಗೆ ವನಿತಾರತ್ನ ದೊರೆಯುವರು. ವ್ಯಯಸ್ಥಿತ ಶನಿದೇವನಿಂದ ವಿನಾಕಾರಣ ಖರ್ಚುಗಳು. ಡ್ರೈವಿಂಗ್‌ನಲ್ಲಿ ಆತುರ ಬೇಡ.
– ಶ್ರೀ ದಕ್ಷಿಣಾಮೂರ್ತಿ ದರ್ಶನ, ಶುಭಸಂಖ್ಯೆ–7.


ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಸಪ್ತಾಹದ ಪ್ರಾರಂಭಕ್ಕೆ ಶುಭ ಚಂದ್ರನಿಂದ ಮನಸ್ಸಿಗೆ ಹರುಷ, ಉಲ್ಲಾಸಗಳು ಅನುಭವಕ್ಕೆ ಬರುವುದು. ನಿಮ್ಮ ಕಾರ್ಯ ಕುಶಲತೆಗೆ ಸರ್ಕಾರದ ಮಾನ್ಯತೆ ದೊರೆಯುವ ಸಾಧ್ಯತೆ ಇದೆ. ನಿಮಗಾಗದವರು ಮಿತ್ರತ್ವ ಬಯಸಿ ಬಂದರೆ ನಿರಾಕರಿಸದಿರಿ. ಗೃಹಲಕ್ಷ್ಮಿಯೊಂದಿಗೆ ಅನ್ಯೋನ್ಯತೆ ವೃದ್ಧಿ ಆಗಲಿದೆ. ಕಚೇರಿಯಲ್ಲಿ ಸಹೋದ್ಯೋಗಿಗಳ ಸಹಕಾರದಿಂದ ನೆಮ್ಮದಿ ದೊರಕಲಿದೆ. ಪ್ರೀತಿ ಪಾತ್ರರ ನಿಷ್ಠೆಯನ್ನು ಅನುಮಾನಿಸಬೇಡಿ.
– ಶ್ರೀ ಶ್ರೀನಿವಾಸನಿಗೆ ತುಳಸಿಮಾಲೆ ಸಮರ್ಪಣೆ, ಶುಭಸಂಖ್ಯೆ–9.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಆಪ್ತೇಷ್ಟರಲ್ಲಿ ಅತಿಯಾದ ಮೋಹ ಶೋಕಕ್ಕೆ ಕಾರಣವಾಗಬಹುದು. 'ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ' ಎಂಬಂತಾಗುವುದು. ನೆರೆಹೊರೆಯಲ್ಲಿ ಸೌಹಾರ್ದತೆಯಿಂದ ಇರಲು ಪ್ರಯತ್ನಿಸಿ. ಅಶುಭ ರಾಹುವಿನಿಂದ ಆನ್‌ಲೈನ್ ಹಾಗ ಅಜ್ಞಾತ ವ್ಯಕ್ತಿಗಳಿಂದ ನಷ್ಟವನ್ನು ಅನುಭವಿಸುವಿರಿ. ಸತಿ–ಸುತರೊಂದಿಗೆ ಅನುಚಿತವಾಗಿ ವರ್ತಿಸದಿರಿ. ವಾರಾಂತ್ಯಕ್ಕೆ ಹಿರಿಯರ ಸಲಹೆಯಿಂದ ಅಭಿವೃದ್ಧಿ ಹೊಂದುವಿರಿ.
– ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ, ಶುಭಸಂಖ್ಯೆ–8.


ಮಕ್ಕಳ ಚಿತ್ರಕಥೆ

"ನಿನ್ನ ಇರುವಿಕೆಯ ಬಗ್ಗೆ ನನಗೆ ಸುಳಿವು ನೀಡು...!"

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199




ಒಬ್ಬ ಅರ್ಚಕರು ದೇವಸ್ಥಾನದಲ್ಲಿ ತಡರಾತ್ರಿಯವರೆವಿಗೂ ಕೆಲಸ ಮಾಡುತ್ತಿದ್ದರು. ಮರು ದಿನ ಮಹಾ ಪೂಜೆ ಇದ್ದುದರಿಂದ ಅದರ ತಯಾರಿಯಲ್ಲಿಯೇ ಮಗ್ನರಾಗಿದ್ದರು. ಬಹಳ ತಡವಾಗಿತ್ತು. ಎಂದಿನಂತೆಯೇ ತಮ್ಮ ಮಗಳಿಗೆ ದೇವಸ್ಥಾನದ ಲ್ಯಾಂಡ್‌ಲೈನ್‌ನಿಂದ ಕರೆ ಮಾಡಿದರು.




ರಿಂಗ್ ಆಗುತ್ತಲೇ ಇತ್ತು. ಆದರೆ ಮಗಳು ಕರೆಯನ್ನು ಸ್ವೀಕರಿಸಲೇ ಇಲ್ಲ. ಅರ್ಚಕರು ಉಳಿದ ಎಲ್ಲಾ ಕೆಲಸ ಮುಗಿಸಿ ನಂತರ ಕರೆ ಮಾಡಿದರಾಯಿತು ಎಂದುಕೊಂಡು ತನ್ನೆಲ್ಲಾ ಕೆಲಸವನ್ನು ಮುಗಿಸಿ ದೇವಸ್ಥಾನಕ್ಕೆ ಬೀಗ ಹಾಕುವ ಮುನ್ನ ಮಗಳಿಗೆ ಮತ್ತೊಮ್ಮೆ ಕರೆ ಮಾಡಿದರು.



ಈ ಬಾರಿ ಮಗಳು ತಕ್ಷಣವೇ ಕರೆಯನ್ನು ಸ್ವೀಕರಿಸಿದಳು. ಅರ್ಚಕರು, "ಮಗಳೇ...ಗಾಬರಿಯಾಗಿಬಿಟ್ಟಿದ್ದೆ...ಮೊದಲ ಸಲ ಕರೆ ಮಾಡಿದಾಗ ಏಕೆ ಕರೆ ಸ್ವೀಕರಿಸಲಿಲ್ಲ...?" ಎಂದು ಕೇಳಿದರು. ಇದಕ್ಕೆ ಮಗಳು ಆಶ್ಚರ್ಯಳಾಗಿ "ನನಗ್ಯಾವ ಕರೆಯೂ ಬಂದಿರಲಿಲ್ಲಾ...ಅಪ್ಪಾ. ಇದೇ ಮೊದಲ ಬಾರಿ ರಿಂಗ್ ಆಗಿದ್ದು...!" ಎಂದಳು. ಅದಕ್ಕೆ ಅರ್ಚಕರು ಯೋಚಿಸಿ ಟೆಲಿಫೋನ್‌ನಲ್ಲಿ ಏನಾದರೂ ತೊಂದರೆಯಾಗಿರುಹುದು ಎಂದುಕೊಂಡು ಆ ಮಾತನ್ನು ಅಲ್ಲಿಯೇ ಅರ್ಧಕ್ಕೇ ಬಿಟ್ಟರು.



ಮರುದಿನ ಆ ದೇವಸ್ಥಾನದ ಲ್ಯಾಂಡ್‌ಲೈನ್‌ಗೆ ಒಂದು ಕರೆ ಬರುತ್ತದೆ. ಆ ಕಡೆಯಿಂದ ವ್ಯಕ್ತಿಯೋರ್ವ ಕೇಳುತ್ತಾನೆ ""ಕಳೆದ ರಾತ್ರಿ 10 ಗಂಟೆಗೆ ನೀವ್ಯಾಕೆ ನನಗೆ ಕಾಲ್ ಮಾಡಿದ್ರಿ..? ಎಂದು. ಈಗ ಅರ್ಚಕರಿಗೆ ಎಲ್ಲವೂ ಅರ್ಥವಾಗಿತ್ತು.



ಅರ್ಚಕರು "ಇಲ್ಲಪ್ಪಾ..... ನಾನು ನನ್ನ ಮಗಳಿಗೆ ಕರೆಮಾಡುವಾಗ ತಪ್ಪಿ, ಸಮಯವಲ್ಲದ ಸಮಯದಲ್ಲಿ ನಿಮಗೆ ಕರೆ ಬಂದು ತೊಂದರೆಯಾಯಿತು ಕ್ಷಮಿಸಿ...!" ಎಂದರು.

ನೀತಿ

ನೀವು ಪ್ರೀತಿಸುವ ಭಗವಂತ, ನಿಮಗಿಂತ ಹೆಚ್ಚಾಗಿ ನಿಮ್ಮನ್ನು ಪ್ರೀತಿಸುತ್ತಾನೆ. ಹಾಗೆ ಸದಾಕಾಲ ನಿಮ್ಮ ಪ್ರಾರ್ಥನೆಯನ್ನು ಕೇಳುತ್ತಿರುತ್ತಾನೆ. ಅದ್ಯಾವುದೋ ಶಕ್ತಿ ಖಂಡಿತ ಇದೆ. ಅದೂ ಇಡೀ ಜಗತ್ತನ್ನು ಮುನ್ನಡೆಸುತ್ತಿದೆ.



ಅದಕ್ಕೆ ಆ ವ್ಯಕ್ತಿಯು ಹೇಳಿದ್ದನು, "ಇಲ್ಲಾ ಅರ್ಚಕರೇ.....ಸರಿಯಾದ ಸಮಯಕ್ಕೇ ಸರಿಯಾದ ಕರೆಯೇ ಬಂದಿದೆ..... ನಿಮಗೆ ಗೊತ್ತೇ..? ನಿನ್ನೆ ರಾತ್ರಿ 10 ಗಂಟೆಗೆ ನಾನು ಆತ್ಮಹತ್ಯೆ ಮಾಡಿಕೊಳ್ಳುವವನಿದ್ದೆ. ಅದೇ ಸಮಯಕ್ಕೆ ನಾನು ಭಗವಂತನಿಗೆ "ನಿನಗೇನಾದರು ನಾನು ಸಾಯಬಾರದು ಎಂದೆನಿಸಿದರೆ ...ನಿನ್ನ ಇರುವಿಕೆಯ ಬಗ್ಗೆ ನನಗೆ ಸುಳಿವು ನೀಡು...!" ಎಂದು ಬೇಡಿಕೊಂಡಿದ್ದೆ. ತಕ್ಷಣವೇ ನನ್ನ ಮೊಬೈಲ್ ರಿಂಗ್ ಆಯಿತು ಹಾಗೂ ಆ ಕಾಲರ್ ಐಡಿಯಲ್ಲಿ ದೇವಸ್ಥಾನ ಎಂದು ಬರೆದಿತ್ತು ನಾನು ಅಕ್ಷರಶಃ ಗಾಬರಿಯಾಗಿ ಹೆದರಿಬಿಟ್ಟಿದ್ದೆ ಜೊತೆಗೆ ಕರೆಯನ್ನು ಸ್ವೀಕರಿಸುವ ಧೈರ್ಯವೂ ನನ್ನಲ್ಲಿ ಇರಲಿಲ್ಲ...!" ಎಂದ.

ಕೊಡಗಲ್ಲಿ ಮಳೆಯೊಂದಿಗೆ ನೆರೆ ಹಾವಳಿ



- ಕುಸಿದು ಬಿದ್ದ ರಸ್ತೆಗಳು, ಸಂಗಮ ಮುಳುಗಡೆ
- ಧರೆಗುರುಳಿದ ಮರಗಳು, ಕಗ್ಗತ್ತಲಿನಲ್ಲಿ ಗ್ರಾಮಗಳು
- ಸೋಮವಾರಪೇಟೆಯಲ್ಲಿ ಹಲವು ಮನೆಗಳಿಗೆ ಹಾನಿ
- ಜಿಲ್ಲೆಯಾದ್ಯಂತ 'ರೆಡ್ ಅಲರ್ಟ್' ಘೋಷಣೆ

ಮಡಿಕೇರಿ,ಆ.6– ಕೊಡಗು ಜಿಲ್ಲೆಯಾದ್ಯಂತ ಮಳೆ ಆರ್ಭಟಿಸುತ್ತಿದ್ದು, ಅನಾಹುತಗಳು ಮುಂದುವರೆದಿದ್ದು, ಜನ ಜೀವನ ಅಸ್ತವ್ಯಸ್ತವಾಗಿದೆ. ಧಾರಾಕಾರ ಮಳೆಯಿಂದ ಕಾವೇರಿ ನದಿಯಲ್ಲಿ ಪ್ರವಾಹ ಉಕ್ಕೇರಿದ್ದು, ಕೆಲವು ಕಡೆಗಳಲ್ಲಿ ರಸ್ತೆ ಸಂಪರ್ಕ ಬಂದ್ ಆಗಿದೆ. ಭಾರೀ ಗಾಳಿ ಸಹಿತ ಮಳೆ ಸುರಿಯುತ್ತಿದ್ದು, ಮರಗಳು ಬುಡಮೇಲಾಗಿದೆ. ವಿದ್ಯುತ್ ಸಂಪರ್ಕ ಸ್ಥಗಿತಗೊಂಡು ಹಲವು ಗ್ರಾಮಗಳು ಕಗ್ಗತ್ತಲಲ್ಲಿ ಮುಳುಗಿದೆ. ದುರಸ್ತಿ ಕಾರ್ಯಕ್ಕೆ ಗಾಳಿ ಮಳೆ ಅಡ್ಡಿಯಾಗಿದೆ.

ಭೂ ಕುಸಿತ, ಪ್ರವಾಹದಿಂದ ತತ್ತರಿಸಿರುವ ಚೆಂಬು, ಸಂಪಾಜೆ, ಮದೆ ಗ್ರಾಮ ವ್ಯಾಪ್ತಿಯಲ್ಲಿ ಧಾರಾಕಾರ ಮಳೆ ಸುರಿಯುತ್ತಿದೆ. ದಬ್ಬಡ್ಕ, ಊರುಬೈಲು ಗ್ರಾಮಗಳಲ್ಲಿ ರಸ್ತೆ ಸಂಪರ್ಕ ಕೂಡ ಕಡಿದುಕೊಂಡಿದ್ದು, ಗ್ರಾಮಗಳಲ್ಲಿ ಟೆಲಿಫೋನ್ ನೆಟ್ವರ್ಕ್ ಕೂಡ ಇಲ್ಲದೆ ಸಂಕಷ್ಟ ಎದುರಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ 'ರೆಡ್ ಅಲರ್ಟ್' ಘೋಷಣೆ ಮಾಡಲಾಗಿದೆ.

ಕಾವೇರಿ ಪ್ರವಾಹ: ಭಾಗಮಂಡಲ ವ್ಯಾಪ್ತಿಯಲ್ಲಿ ನಿರಂತರವಾಗಿ ಭಾರಿ ಮಳೆ ಸುರಿಯುತ್ತಿರುವ ಪರಿಣಾಮ ಸತತ ಎರಡನೇ ದಿನವೂ ಸಂಗಮ ಮುಳುಗಡೆಯಾಗಿದೆ. ಭಾಗಮಂಡಲ–ಅಯ್ಯಂಗೇರಿ ರಸ್ತೆಯ ಮೇಲೆ



ಪ್ರವಾಹ ನೀರು ಹರಿಯುತ್ತಿದ್ದು, ರಸ್ತೆ ಸಂಚಾರ ಬಂದ್ ಆಗಿದೆ. ಮೂರ್ನಾಡು–ನಾಪೋಕ್ಲು ರಸ್ತೆ, ನಾಪೋಕ್ಲು–ಬೊಳಿಬಾಣೆ ರಸ್ತೆಗಳಿಗೆ ಕಾವೇರಿ ನದಿ ಪ್ರವಾಹದ ನೀರು ನುಗ್ಗಿದ್ದು, ವಾಹನ ಸಂಚಾರ ಸ್ಥಗಿತಗೊಂಡಿದೆ. ನಾಪೋಕ್ಲು–ಚೆರಿಯಪರಂಬು–ಕಲ್ಲುಮೊಟ್ಟೆ ರಸ್ತೆ ಸಂಪರ್ಕವೂ ಬಂದ್ ಆದ ಸ್ಥಿತಿಯಲ್ಲಿದೆ.

ಕುಸಿದು ಬಿದ್ದ ರಸ್ತೆ: ಹೊದವಾಡ–ಕೊಟ್ಟಮುಡಿ ಮೂಲಕ ನಾಪೋಕ್ಲುವಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಭಾರೀ ಮಳೆಯಿಂದಾಗಿ ಕುಸಿದು ಬಿದ್ದಿದೆ. ರಸ್ತೆಯ ಅರ್ಧ ಭಾಗ ಕೊಚ್ಚಿ ಹೋಗಿದ್ದು, ಲೋಕೋಪಯೋಗಿ ಇಲಾಖೆ ಮೂಲಕ ತಾತ್ಕಾಲಿಕ ದುರಸ್ತಿ ಕಾರ್ಯ ನಡೆಸಲಾಗುತ್ತಿದೆ. ಈ ರಸ್ತೆಯಲ್ಲಿ ಲಘು ವಾಹನಗಳ ಓಡಾಟಕ್ಕೆ ಮಾತ್ರವೇ ಅವಕಾಶ ನೀಡಲಾಗುತ್ತಿದ್ದು, ಸ್ಥಳದಲ್ಲಿ ಎಂ. ಸ್ಯಾಂಡ್ ಮೂಟೆಗಳನ್ನು ಅಳವಡಿಸಿ ರಸ್ತೆಗೆ ಮತ್ತಷ್ಟು ಹಾನಿಯಾಗದಂತೆ ತಡೆಯುವ ಪ್ರಯತ್ನ ಮಾಡಲಾಗುತ್ತಿದೆ.

ಈ ರಸ್ತೆಯಲ್ಲಿ ಸಂಚರಿಸುವ ಭಾರೀ ವಾಹನಗಳಿಗೆ ಸಂಚಾರಕ್ಕೆ ತೊಂದರೆಯಾಗಿದ್ದು, ಪರ್ಯಾಯ ಮಾರ್ಗವಾಗಿ ಹೊದವಾಡ–ಬೊಳಿಬಾಣೆ ಮೂಲಕ ನಾಪೋಕ್ಲು ಹಾಗೂ ಮೂರ್ನಾಡು ಕಡೆಗಳಿಗೆ ಸಂಚರಿಸಬಹುದಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. ರಸ್ತೆ ಕುಸಿದ ಸ್ಥಳಕ್ಕೆ ಶಾಸಕ ಕೆ.ಜಿ.ಬೋಪಯ್ಯ, ತಹಸೀಲ್ದಾರ್ ಪಿ.ಎಸ್.ಮಹೇಶ್, ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮನೆಹಾನಿ: ಸೋಮವಾರಪೇಟೆ ವ್ಯಾಪ್ತಿಯಲ್ಲಿಯೂ ಭಾರೀ ಮಳೆಯಾಗುತ್ತಿದ್ದು,

ಭಾರೀ ಮಳೆಯಿಂದ ಹಲವು ರಸ್ತೆಗಳು ಕುಸಿತ



ಹಲವು ಮನೆಗಳಿಗೆ ಹಾನಿಯಾದ ಬಗ್ಗೆ ವರದಿಯಾಗಿದೆ. ಹಾನಗಲ್ ಚಂದಮಕ್ಕಿ ಗ್ರಾಮ ನಿವಾಸಿ ಲಕ್ಷ್ಮಣ್ ಹಾಗೂ ಮಾಲಂಬಿ ಕೂಡು ರಸ್ತೆಯ ಲಕ್ಷ್ಮಮ್ಮ ಮುತ್ತಣ್ಣ ಎಂಬವರ ಮನೆ ಕುಸಿದು ಬಿದ್ದಿದೆ. ಮನೆ ಮಂದಿ ಅಪಾಯದಿಂದ ಪಾರಾಗಿದ್ದು, ಅಪಾರ ನಷ್ಟ ಸಂಭವಿಸಿದೆ.

ಕುಟುಂಬಗಳ ಸ್ಥಳಾಂತರ: ವಿರಾಜಪೇಟೆ ತಾಲೂಕಿನ ಕೆದಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೋರ ಗ್ರಾಮದಲ್ಲಿ 2019ರಲ್ಲಿ ಮಲೆಪಾರೆ ಬೆಟ್ಟ ಕುಸಿದು 10 ಮಂದಿ ಸಾವನ್ನಪ್ಪಿದ್ದರು. ಈ ಪ್ರದೇಶದಲ್ಲಿ ಭೂಮಿ ಬಿರುಕುಗಳಿದ್ದು, ಭಾರೀ ಮಳೆ ಮುಂದುವರೆದಿರುವ ಕಾರಣ ಮುಂಜಾಗ್ರತಾ ಕ್ರಮವಾಗಿ ಗ್ರಾಮದಲ್ಲಿ ನೆಲೆಸಿದ್ದ 15 ಕುಟುಂಬದ 41 ಸದಸ್ಯರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ಸಮೀಪದ ತೋಮರ ಸರಕಾರಿ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದ್ದು, 41 ಮಂದಿಗೆ ಅಲ್ಲಿ ಆಶ್ರಯ ನೀಡಲಾಗಿದೆ.

ಮಳೆ ನೀರು ನುಗ್ಗಿ ಕಾಫಿ ತೋಟಕ್ಕೆ ಅಪಾರ ಹಾನಿ

ಗುಡ್ಡೆಹೊಸೂರು, ಆ.6– ಇಲ್ಲಿಗೆ ಸಮೀಪದ ರಂಗಸಮುದ್ರ ಗ್ರಾಮದ ನಿವಾಸಿ ಮೊಣ್ಣಪ್ಪ ಎಂಬುವವರ ಕಾಫಿ ತೋಟಕ್ಕೆ ಮಳೆ ನೀರು ನುಗ್ಗಿ ಅಪಾರ ಪ್ರಮಾಣದ ಹಾನಿಯುಂಟಾಗಿದೆ. ಕಳೆದ ಎರಡು ದಿನಗಳಿಂದ ಸುರಿದ ಮಳೆಯಿಂದಾಗಿ ಮೊಣ್ಣಪ್ಪ ಅವರ ತಗ್ಗು ಪ್ರದೇಶದ ಸುಮಾರು ಅರ್ಧ ಎಕರೆ ಪ್ರದೇಶದಲ್ಲಿರುವ ಕಾಫಿ, ಕರಿಮೆಣಸು ಸಂಪೂರ್ಣ ನೀರಿನಲ್ಲಿ ಮುಳುಗಿದೆ. ಅಲ್ಲದೆ ಈ ಭಾಗದ ಕಾವೇರಿ ನದಿ ತಟದಲ್ಲಿ ಹಲವು ಭಾಗದಲ್ಲಿ ಭತ್ತದ ಗದ್ದೆಗಳು ಜಲಾವೃತಗೊಂಡಿದೆ. ಮುಖ್ಯವಾಗಿ ರಸಲ್‌ಪುರ, ಬಾಳುಗೋಡು, ಗುಡ್ಡೆಹೊಸೂರು ಮತ್ತು ಮಾದಪಟ್ಟಣ ವಿಭಾಗದಲ್ಲಿ ಗದ್ದೆಗಳು ಜಲಾವೃತಗೊಂಡಿವೆ.

ದುಬಾರೆಯಿಂದ ವೀರನಹೊಸಹಳ್ಳಿಗೆ ಬಂದ ಗಜಪಡೆ ಸದಸ್ಯರಾದ ವಿಕ್ರಮ, ಧನಂಜಯ



ಕುಶಾಲನಗರ,ಆ.6–ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ದುಬಾರೆ ಸಾಕಾನೆ ಶಿಬಿರದ ಆನೆಗಳಿಗೆ ಶನಿವಾರ ಬೀಳ್ಕೊಡಲಾಯಿತು.

ಅ.5 ರಂದು ನಡೆಯುವ ವಿಜಯದಶಮಿ ಅಂಗವಾಗಿ ಜಂಬೂ ಸವಾರಿಗೆ ಇನ್ನೂ 2 ತಿಂಗಳ ಬಾಕಿ ಉಳಿದಿದ್ದು, ಈಗಾಗಲೇ ಗಜಪಯಣ ಆರಂಭಗೊಂಡಿದೆ. ದುಬಾರೆಯಿಂದ ಮೊದಲ ಹಂತದಲ್ಲಿ ವಿಕ್ರಮ ಮತ್ತು ಧನಂಜಯ ಆನೆಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಅರಣ್ಯಾಧಿಕಾರಿಗಳು ಬೀಳ್ಕೊಟ್ಟರು.

ಸಾಕಾನೆ ಶಿಬಿರದ ಬಸವೇಶ್ವರ ದೇವಾಲಯ ಆವರಣದಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳ ನೇತೃತ್ವದಲ್ಲಿ ಆನೆಗಳಿಗೆ ಪೂಜೆ ಸಲ್ಲಿಸಿ, ಕಬ್ಬು, ಬಾಳೆ ಹಣ್ಣು, ಬೆಲ್ಲ ತಿನ್ನಿಸಿ ಗಜಪಯಣಕ್ಕೆ ಚಾಲನೆ ನೀಡಲಾಯಿತು.

ಮೈಸೂರಿಗೆ ತೆರಳಿ ದಸರಾದಲ್ಲಿ ಪಾಲ್ಗೊಂಡು ಹಿಂತಿರುಗುವ ತನಕ ಯಾವುದೇ ಅಪಾಯ ಸಂಭವಿಸದಿರಲಿ ಎಂದು ಮಾವುತರು, ಅಧಿಕಾರಿಗಳು ಪ್ರಾರ್ಥನೆ ಸಲ್ಲಿಸಿದರು. ಆನೆಗಳ ತಂಡದ ಜೊತೆ ಮಾವುತ, ಕಾವಾಡಿಗಳ ಕುಟುಂಬ ಕೂಡ ಪ್ರಯಾಣ ಬೆಳೆಸಿದ್ದು, ರಾತ್ರಿ ವೀರನಹೊಸಹಳ್ಳಿ ತಲುಪಿದ್ದಾರೆ. ಇಲ್ಲಿಂದ ಮೈಸೂರಿನತ್ತ ಗಜ ಪಯಣ ಹೊರಡಲಿವೆ.

ಎರಡನೇ ಹಂತದಲ್ಲಿ ಗೋಪಿ, ಶ್ರೀರಾಮ, ವಿಜಯ, ಬದಲೀ ವ್ಯವಸ್ಥೆಗೆ ಹೆಚ್ಚುವರಿಯಾಗಿ ಸುಗ್ರೀವ ತೆರಳಲಿವೆ. ಈ ಸಂದರ್ಭದಲ್ಲಿ ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಂ, ದುಬಾರೆ ಉಪ ವಲಯ ಅರಣ್ಯಾಧಿಕಾರಿ ರಂಜನ್ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ರ್‍ಯಾಂಕ್: ಕೊಡಗಿನ ಮುಂಡಂಡ ರಾಜೇಶ್ ಪೊನ್ನಪ್ಪ ಐಎಫ್‌ಎಸ್‌ಗೆ ಆಯ್ಕೆ



ಮಡಿಕೇರಿ,ಆ.6– ಕೇಂದ್ರ ಲೋಕ ಸೇವಾ ಆಯೋಗ(ಯುಪಿಎಸ್‌ಸಿ)ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 222ನೇ ರ್‍ಯಾಂಕ್ ಪಡೆಯುವ ಮೂಲಕ ಅತ್ಯುನ್ನತ ಸಾಧನೆ ಮಾಡಿದ್ದ ಕೊಡಗಿನ ಮುಂಡಂಡ ರಾಜೇಶ್ ಪೊನ್ನಪ್ಪ ಇದೀಗ ಇಂಡಿಯನ್ ಫಾರಿನ್ ಸರ್ವೀಸ್ (ಐಎಫ್‌ಎಸ್) ಹುದ್ದೆಗೆ ಆಯ್ಕೆಗೊಂಡಿದ್ದಾರೆ.

ಮೂಲತಃ ನೆಲಜಿ ಗ್ರಾಮದವರಾದ ಮುಂಡಂಡ ಜಯಾ ಪೂವಯ್ಯ ಹಾಗೂ ಸುಧಾ ಪೂವಯ್ಯ ದಂಪತಿ ಪುತ್ರ ರಾಜೇಶ್ ಪೊನ್ನಪ್ಪ, ಕಳೆದ ಮೇ ತಿಂಗಳಿನಲ್ಲಿ ಪ್ರಕಟವಾದ ಯುಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶದಲ್ಲಿ ರಾಷ್ಟ್ರಮಟ್ಟದಲ್ಲಿ 222ನೇ ರ್‍ಯಾಂಕ್ ಪಡೆದುಕೊಂಡಿದ್ದರು.

ಇಂಡಿಯನ್ ಫಾರಿನ್ ಸರ್ವೀಸ್ (ಐಎಫ್‌ಎಸ್) ತಮ್ಮ ಪ್ರಥಮ ಆಯ್ಕೆ ಎಂಬ ಅಭಿಲಾಷೆ ವ್ಯಕ್ತಪಡಿಸಿದ್ದ ಅವರು ದ್ವಿತೀಯ ಆಯ್ಕೆಯಾಗಿ ಐಪಿಎಸ್ ಅನ್ನು ಕೋರಿದ್ದರು. ಆದರೆ ಇದೀಗ ತಮ್ಮ ಅಪೇಕ್ಷೆಯಂತೆ ಇಂಡಿಯನ್ ಫಾರಿನ್ ಸರ್ವೀಸ್ ಸ್ಥಾನ ಅಲಂಕರಿಸಿದ್ದಾರೆ.

ಸ್ವಾತಂತ್ರ್ಯ ಅಮೃತ ಮಹೋತ್ಸವ: ಕಾಂಗ್ರೆಸ್ ಪಾದಯಾತ್ರೆ


ಶ್ರೀರಂಗಪಟ್ಟಣ, ಆ.6– ಸ್ವಾತಂತ್ರ್ಯ ಅಮೃತ ಮಹೋತ್ಸವ ಅಂಗವಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಸ್ಮರಣಾರ್ಥ ಮಾಜಿ ಶಾಸಕ ರಮೇಶ ಬಂಡಿಸಿದ್ದೇಗೌಡ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತಾಲೂಕಿನ ಕೃಷ್ಣರಾಜ ಸಾಗರ ಜಲಾಶಯದಿಂದ ಪಟ್ಟಣದ ಶ್ರೀರಂಗನಾಥಸ್ವಾಮಿ ದೇಗುಲದವರೆಗೆ ಪಾದಯಾತ್ರೆ ನಡೆಸಿದರು.

ಕಾಂಗ್ರೆಸ್ ಹೈಕಮಾಂಡ್ ಆದೇಶದಂತೆ 75ನೇ ವರ್ಷದ ಸ್ವಾತಂತ್ರ್ಯ ಮಹೋತ್ಸವವನ್ನು ಜಿಲ್ಲೆಯಲ್ಲಿ 75 ಕಿ.ಮೀ. ಪಾದಯಾತ್ರೆಯೊಂದಿಗೆ ವಿಭಿನ್ನವಾಗಿ ಆಚರಿಸುವ ನಿಟ್ಟಿನಲ್ಲಿ ಬೆಳಗ್ಗೆ 9 ಗಂಟೆಗೆ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ನಗರ ಮತ್ತು ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರ ಸಹಯೋಗದಲ್ಲಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿತ್ತು. ಕೆಆರ್‌ಎಸ್ ಜಲಾಶಯ ಬಳಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸುವ ಮೂಲಕ ಮಾಜಿ ಸಚಿವರಾದ ಚಲುವರಾಯಸ್ವಾಮಿ, ಎಂ.ಎಸ್.ಆತ್ಮಾನಂದ ಪಾದಯಾತ್ರೆಗೆ ಚಾಲನೆ ನೀಡಿದರು. ಕೆಆರ್‌ಎಸ್‌ನಿಂದ ಹೊರಟ ಪಾದಯಾತ್ರೆಗೆ ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ದಾರಿಯುದ್ದಕ್ಕೂ ಸೇರ್ಪಡೆಯಾದರು.

ಕೆಆರ್‌ಎಸ್‌ನ ಅರಳಿಕಟ್ಟೆ ಬಳಿ ಪಟಾಕಿ ಸಿಡಿಸಿ, ಕಾರ್ಯಕರ್ತರು ಯಾತ್ರೆ ಮುಂದುವರೆಸಿದರು. ಪಾದಯಾತ್ರೆಯು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಹುಲಿಕೆರೆ, ಪೇಪರ್ ಮಿಲ್ ಸರ್ಕಲ್, ಬೆಳಗೊಳ, ಹೊಸ ಆನಂದೂರು ಸರ್ಕಲ್, ಪಂಪ್ ಹೌಸ್ ಸರ್ಕಲ್, ಪಿ.ಹೊಸಹಳ್ಳಿ, ಪಾಲಹಳ್ಳಿ ಸೇರಿದಂತೆ ಪಶ್ಚಿಮವಾಹಿನಿ ಮಾರ್ಗವಾಗಿ ಸಾಯಂಕಾಲ 4ರ ವೇಳೆಗೆ ಶ್ರೀರಂಗಪಟ್ಟಣ ಪ್ರವೇಶಿಸಿತು. ಪಟ್ಟಣದ ಪ್ರವೇಶ ದ್ವಾರದಲ್ಲಿ ಮಹಿಳೆಯರು ಪೂರ್ಣಕುಂಭ ಸ್ವಾಗತ ಕೋರಿದರು. ಬಳಿಕ ಪಟ್ಟಣದ ಮುಖ್ಯರಸ್ತೆಗಳ ಮೂಲಕ ಸಂಚರಿಸಿದ ಪಾದಯಾತ್ರಿಗಳು ಶ್ರೀರಂಗನಾಥಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಪಾದಯಾತ್ರೆ ಸಮಾಪ್ತಿಗೊಳಿಸಿದರು.

ಪಾದಯಾತ್ರೆ ಸಾಗಿ ಬಂದ ಗ್ರಾಮಗಳಲ್ಲಿ ಸ್ಥಳೀಯ ಕಾರ್ಯಕರ್ತರು, ಪಟಾಕಿ ಸಿಡಿಸಿ, ಹೂಮಳೆಗೈದರಲ್ಲದೆ, ಹಾಲು, ಜ್ಯೂಸ್ ನೀಡಿ, ಪಾದಯಾತ್ರಿಗಳನ್ನು ಬೀಳ್ಕೊಡುತ್ತಿದ್ದುದು ಸಾಮಾನ್ಯವಾಗಿತ್ತು. ಎಲ್ಲೆಡೆ ದೇಶ ಹಾಗೂ ಪಕ್ಷದ ಘೋಷಣೆ ಮೊಳಗಿತು. ಕೆಆರ್‌ಎಸ್‌ನಿಂದ ಶ್ರೀರಂಗಪಟ್ಟಣದವರೆಗೂ ರಸ್ತೆಯುದ್ದಕ್ಕೂ ಕಾಂಗ್ರೆಸ್ ಬಾವುಟ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಹೋರಾಟಗಾರರ ಭಾವಚಿತ್ರಗಳು ರಾರಾಜಿಸಿದವು. ಕೆಲ ವೃತ್ತಗಳಲ್ಲಿ ಪಾದಯಾತ್ರೆಯಲ್ಲಿ ಬಂದ ಜನರಿಗೆ ಅಭಿಮಾನಿಗಳು, ಕಾಂಗ್ರೆಸ್ ಕಾರ್ಯಕರ್ತರು ಜೆಸಿಬಿ ಮೂಲಕ ಪುಷ್ಪವೃಷ್ಟಿ ಮಾಡಿದರು. ಸೇಬಿನ ಹಾರ ಹಾಕಿ ಪಕ್ಷದ ನಾಯಕರನ್ನು ಅಭಿನಂದಿಸಿದರು.

ಪಾದಯಾತ್ರೆಯಲ್ಲಿ ಮಾಜಿ ಸಚಿವ ನರೇಂದ್ರಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ಮಾಜಿ ಶಾಸಕಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ,



ಜಿಲ್ಲಾ ಮಾಧ್ಯಮ ಸಂಚಾಲಕ ಎಂ.ಪುಟ್ಟೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಪ್ರಕಾಶ್, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಮಿತ್ರ ರಮೇಶ್, ಜಿಪಂ ಮಾಜಿ ಅಧ್ಯಕ್ಷ ಎಸ್.ಲಿಂಗಣ್ಣ, ಜಿಲ್ಲಾ ಮುಖಂಡರಾದ ಸಿ.ಎಂ.ದ್ಯಾವಪ್ಪ, ಡಾ.ರವೀಂದ್ರ, ಬೇಲೂರು ಸೋಮಶೇಖರ್, ಹೊಸಹಳ್ಳಿ ಗ್ರಾಪಂ ಅಧ್ಯಕ್ಷೆ ಜಯಶೀಲ, ಉಪಾಧ್ಯಕ್ಷ ಕೆ.ಎಸ್. ವಿಶ್ವನಾಥ್, ಸದಸ್ಯರಾದ ಉಮಾ, ತರುಣ್, ಗೀತಾ, ಶ್ರೀಕಂಠ, ಕೃಷ್ಣಾನಂದ, ಶಿವಮ್ಮ, ಮುಖಂಡರಾದ ಕೆ.ಎಸ್.ವಿವೇಕ್, ತಿರುಮಲ್ಲೇಶ್, ಬೆಳಗೊಳ ಇಂದ್ರಕುಮಾರ್, ವಕೀಲ ಸತೀಶ್, ನಗುವಿನಹಳ್ಳಿ ಕಾಂಗ್ರೆಸ್ ಮುಖಂಡರಾದ ನಂದಕುಮಾರ್, ರಮೇಶ್, ಭಾಸ್ಕರ್, ಕುಮಾರ್ ರವೀಶ್, ಬೈರಪ್ಪ ಯುವ ಗ್ರಾಮಾಂತರ ಯುವ ಕಾಂಗ್ರೆಸ್ ಅಧ್ಯಕ್ಷ ಸಂಜಯ್, ಕೂಡಲುಕುಪ್ಪೆ ರವಿಶಂಕರ್ ಸೇರಿದಂತೆ ಜಿಲ್ಲೆಯ ಕಾಂಗ್ರೆಸ್ ಮುಖಂಡರು, ಮುಂಚೂಣಿ ಘಟಕಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಅಭಿಮಾನಿಗಳು ಭಾಗವಹಿಸಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಸವಾರನಿಗೆ ಗಾಯ

ನಾಗಮಂಗಲ, ಆ.6– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಹೊಣಕೆರೆ ಹೋಬಳಿ ಕೊಣನೂರು ಬಳಿ ನಡೆದಿದೆ. ಗ್ರಾಮದ ನಿವಾಸಿ ಹಾಗೂ ನಿವೃತ್ತ ಚೆಸ್ಕಾಂ ನೌಕರ ರಾಜಣ್ಣ ಗಾಯಗೊಂಡವರು. ಇವರು ಮನೆಯಿಂದ ಕೆಲಸ ನಿಮಿತ್ತ ಬೈಕ್‌ನಲ್ಲಿ ಪಟ್ಟಣಕ್ಕೆ ಹೋಗುತ್ತಿದ್ದಾಗ ಮೈಸೂರು ಕಡೆಯಿಂದ ವೇಗವಾಗಿ ಬಂದ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ ಎಡಗಾಲು ಮುರಿದಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ. ಇವರನ್ನು ಸ್ಥಳೀಯರು ಬೆಳ್ಳೂರು ಕ್ರಾಸ್‌ನಲ್ಲಿರುವ ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಈ ಸಂಬಂಧ ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಾಗಿದೆ.

ದ್ವೇಷ, ಅಸೂಯೆ ಬಿಟ್ಟು, ಪ್ರೀತಿ–ವಿಶ್ವಾಸದಿಂದ ಜೀವನ ನಡೆಸಿ

ಸನಾತನ ಧರ್ಮರತ್ನಾಕರ ಶ್ರೀಮಾದೇಶ್ ಗುರೂಜಿ ಸಲಹೆ

ಕೆ.ಆರ್.ಪೇಟೆ, ಆ.6– ಮಾನವ ಧರ್ಮಕ್ಕಿಂತ ಮಿಗಿಲಾದ ಧರ್ಮವು ವಿಶ್ವದಲ್ಲಿಯೇ ಯಾವುದೂ ಇಲ್ಲ, ಆದ್ದರಿಂದ ಮಾನವರಾದ ನಾವು ದ್ವೇಷ, ಅಸೂಯೆ ಮರೆತು ಪರಸ್ಪರ ಪ್ರೀತಿ–ವಿಶ್ವಾಸದಿಂದ ಜೀವನವನ್ನು ನಡೆಸಬೇಕು. ಬಡವರಿಗೆ ಕೈಲಾದ ಸಹಾಯವನ್ನು ಮಾಡುವ ಮೂಲಕ ಸಮಾಜಮುಖಿಯಾಗಿ ಮುನ್ನಡೆಯಬೇಕು ಎಂದು ಸನಾತನ ಧರ್ಮರತ್ನಾಕರ ಶ್ರೀಮಾದೇಶ್ ಗುರೂಜಿ ಹೇಳಿದರು.

ತಾಲೂಕಿನ ಬೆಡದಹಳ್ಳಿಯ ಪಂಚಭೂತೇಶ್ವರ ಶ್ರೀಕ್ಷೇತ್ರದಲ್ಲಿ ನೂತನವಾಗಿ ನಿರ್ಮಿಸಿರುವ ದೇವಾಲಯದಲ್ಲಿ ಪ್ರತಿಷ್ಠಾಪಿಸಿರುವ ಶ್ರೀಪಾರ್ವತಿ ಅಮ್ಮನವರ ಶಿಲಾಮೂರ್ತಿಯ ಪ್ರಾಣ ಪ್ರತಿಷ್ಠಾಪನೆ, ದೇವಾಲಯದ ಕಳಸಾರೋಹಣ, ಶ್ರೀಚಂಡಿಕಾ ಹೋಮ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ



ಆಶೀರ್ವಚನ ನೀಡಿ ಮಾತನಾಡಿದರು.

ದಯೆಯಿಲ್ಲದ ಧರ್ಮ ಯಾವುದೂ ಇಲ್ಲ, ಸಕಲ ಪ್ರಾಣಿ ಪಕ್ಷಿಗಳು ಹಾಗೂ ಸಣ್ಣ ಪುಟ್ಟ ವಿಚಾರಗಳಿಗಾಗಿ ಕಿತ್ತಾಡಿಕೊಂಡು ಬಡಿದಾಟ ಮಾಡಿಕೊಂಡು ಪೊಲೀಸ್ ಠಾಣೆ ಹಾಗೂ ನ್ಯಾಯಾಲಯದ ಮೆಟ್ಟಿಲನ್ನು ಹತ್ತಿ ತಮ್ಮ ಅಮೂಲ್ಯವಾದ ಸಮಯ ಹಾಗೂ ಮಾನವೀಯ ಸಂಬಂಧಗಳು ಹಾಗೂ ಬಂಧುತ್ವವನ್ನು ಕಳೆದುಕೊಳ್ಳುತ್ತಿರುವ ಜನರಿಗೆ ಅರಿವಿನ ಜ್ಯೋತಿಯನ್ನು ಬೆಳಗಿಸುವ ಮೂಲಕ ಪರಸ್ಪರ ಪ್ರೀತಿ–ವಿಶ್ವಾಸದಿಂದ ಜೀವನ ನಡೆಸುವಂತೆ ಪ್ರೇರೇಪಿಸುವ ಕೆಲಸ ಮಠಮಾನ್ಯಗಳು ಮಾಡಬೇಕು ಎಂದರು.

ಕಾಪನಹಳ್ಳಿ ಗವಿಮಠದ ಶ್ರೀಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿಗಳು ಹಾಗೂ ಕೆ.ಆರ್.ನಗರ ತಾಲೂಕಿನ ಕಸುಕ ಗುರುಪೀಠದ ಶ್ರೀಅರುಣ್ ಸಿದ್ದೇಶ್ವರ ಸ್ವಾಮೀಜಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಬಿ.ಪ್ರಕಾಶ್, ಜಿಪಂ ಮಾಜಿ ಸದಸ್ಯೆ ಹೇಮಾ ಪ್ರಕಾಶ್, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಯೋಜನಾಧಿಕಾರಿ ಮಮತಾ ಶೆಟ್ಟಿ, ಭಾರತಿಪುರ ಕ್ರಾಸ್ ಗ್ರಾಪಂ ಉಪಾಧ್ಯಕ್ಷ ಸುನೀಲ್, ರೈತ ಮುಖಂಡ ಮರುವನಹಳ್ಳಿ ಶಂಕರ್, ರಾಜಸ್ತಾನ ಸಮಾಜದ ಮುಖಂಡ ರಮೇಶ್ ಚೌಧರಿ, ಪುರಸಭಾ ಸದಸ್ಯ ಕೆ.ಆರ್.ನೀಲಕಂಠ, ಜಿಲ್ಲಾ ಬಿಜೆಪಿ ನೇಕಾರ ಪ್ರಕೋಷ್ಠ ಜಿಲ್ಲಾಧ್ಯಕ್ಷ ಬಿಗ್‌ಬಾಸ್ ಮೋಹನ್, ಶ್ರೀಕ್ಷೇತ್ರದ ಟ್ರಸ್ಟ್ ಕಾರ್ಯದರ್ಶಿ ಬಿ.ಸಿ.ಕಾಂತರಾಜು, ಶಿಕ್ಷಕ ಡಾ.ಕೆ.ಎಸ್.ಚಂದ್ರು ಕಾಡುಮೆಣಸ ಇದ್ದರು.

ಪತ್ರಕರ್ತರು ಜವಾಬ್ದಾರಿ ಅರಿತು ಕೆಲಸ ಮಾಡಬೇಕು: ಸಿಎಸ್‌ಪಿ

ಪಾಂಡವಪುರ, ಆ.6– ಸಮಾಜದ ಅಭಿವೃದ್ಧಿಯ ಜವಾಬ್ದಾರಿಯು ಪತ್ರಕರ್ತರ ಮೇಲೂ ಇದ್ದು, ಪತ್ರಕರ್ತರು ಇದನ್ನು ಅರಿತು ಕೆಲಸ ಮಾಡಬೇಕು ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ನಡೆದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ ಪತ್ರಕರ್ತರ ಸಂಘದ ಭವನ ನಿರ್ಮಾಣಕ್ಕೆ ಶೀಘ್ರವೇ ನಿವೇಶನ ಮಂಜೂರು ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದ ಅವರು, ನನ್ನ ರಾಜಕೀಯ ಏಳಿಗೆಯಲ್ಲಿ ಜಿಲ್ಲೆ ಹಾಗೂ ತಾಲೂಕಿನ ಹಲವಾರು ಪತ್ರಕರ್ತರು ಸಾಕಷ್ಟು ಬಾರಿ ನನಗೆ ಉತ್ತಮ ಸಲಹೆ, ಸಹಕಾರ ನೀಡುತ್ತಿದ್ದರು. ಅಂತಹ ಪತ್ರಕರ್ತರನ್ನು ನಾನೆಂದಿಗೂ ಮರೆಯುವುದಿಲ್ಲ ಎಂದರು.



ರಾಜ್ಯ ಪತ್ರಕರ್ತರ ಸಂಘದ ಕಾರ್ಯದರ್ಶಿ ಮತ್ತಿಕೆರೆ ಜಯರಾಮ್ ಮಾತನಾಡಿ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘವು 90 ವರ್ಷಗಳನ್ನು ಪೂರೈಸಿ ಶತಮಾನದತ್ತ ಮುನ್ನುಗ್ಗುತ್ತಿದೆ. ಸಂಘವು ಪಾರದರ್ಶಕವಾಗಿ ಕೆಲಸ ಮಾಡುವ ಮೂಲಕ ಸಮಾಜದ ಏಳಿಗೆಗೆ ಪೂರಕವಾಗಿ ಶ್ರಮಿಸುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಚಿನಕುರಳಿ ಸಿ.ಎ.ಲೋಕೇಶ್, ಪತ್ರಿಕಾ ವಿತರಕರಾದ ಅಲ್ಪಳ್ಳಿ ಮಹೇಶ್, ದರ್ಶನ್ ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಶಿವಾನಂದಮೂರ್ತಿ, ತಹಸೀಲ್ದಾರ್ ನಯನ, ಕಿಯೋನಿಕ್ಸ್ ನಿರ್ದೇಶಕ ಮಂಜುನಾಥ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹರಳಹಳ್ಳಿ ಕುಮಾರಸ್ವಾಮಿ, ರಾಜ್ಯ ಪತ್ರಕರ್ತರ ಸಂಘದ ಕಾರ್ಯದರ್ಶಿ ಕೆಂಗೋಡು ಸೋಮಶೇಖರ್, ಜಿಲ್ಲಾಧ್ಯಕ್ಷ ಕೆ.ಸಿ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ನವೀನ್, ಉಪಾಧ್ಯಕ್ಷರಾದ ಬಿ.ಪಿ.ಪ್ರಕಾಶ್, ಗಣಂಗೂರು ನಂಜೇಗೌಡ, ಖಜಾಂಚಿ ನಂಜುಂಡಸ್ವಾಮಿ, ರಾಜ್ಯ ಪರಿಷತ್ ಸದಸ್ಯ ಮಂಜುನಾಥ್, ಕಾರ್ಯದರ್ಶಿ ಬಿ.ಎಸ್.ಜಯರಾಮು, ಮಾಜಿ ಕಾರ್ಯದರ್ಶಿ ಸಿ.ಎ.ಲೋಕೇಶ್, ಜಿಲ್ಲಾ ನಿರ್ದೇಶಕರಾದ ಚನ್ನಮಾದೇಗೌಡ, ಶಿವನಂಜಯ್ಯ, ರವೀಶ್ ಗೌಡ, ನಾಗೇಶ್, ನಾಗೇಗೌಡ ಹಲವರಿದ್ದರು.

ಮಳೆ, ಸುವರ್ಣಾವತಿ ನದಿ ನೀರಿನ ಹೆಚ್ಚಳ ಹಿನ್ನೆಲೆ

ವಿವಿಧ ಪ್ರದೇಶಗಳಿಗೆ ಸಿಇಓ ಭೇಟಿ, ಪರಿಶೀಲನೆ

ಚಾಮರಾಜನಗರ, ಆ.6–ಸತತ ಮಳೆ ಹಾಗೂ ಸುವರ್ಣಾವತಿ ನದಿ ನೀರಿನ ಹೆಚ್ಚಳದಿಂದ ಭರ್ತಿಯಾದ ಕೆರೆಗಳು ಹಾಗೂ ಜಲಾವೃತವಾಗಿರುವ ವಿವಿಧ ಪ್ರದೇಶಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ ಇಂದು ಭೇಟಿ ನೀಡಿ, ಪರಿಶೀಲಿಸಿದರು.

ಚಾಮರಾಜನಗರ ತಾಲೂಕಿನ ಹೊಂಗನೂರಿನ ಹಿರಿಕೆರೆಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿ ವೀಕ್ಷಿಸಿದ ಸಿಇಓ, ಗ್ರಾಮಸ್ಥರ ಅಹವಾಲು ಆಲಿಸಿದರು. ಇರಸವಾಡಿ ಕೆರೆಗೂ ಭೇಟಿ ನೀಡಿ, ಕೋಡಿ ಬಿದ್ದಿರುವುದನ್ನು ವೀಕ್ಷಿಸಿದರು. ಸ್ಥಳೀಯರಿಂದ ವಿವರ ಪಡೆದರು.

ಯಳಂದೂರು ತಾಲೂಕಿನ ಯರಿಯೂರಿಗೆ ಭೇಟಿ ನೀಡಿ, ಸುವರ್ಣಾವತಿ ನದಿಯಿಂದ ನಾಲೆ ಮೂಲಕ ನೀರು ನುಗ್ಗಿರುವ ಬಡಾವಣೆಗಳನ್ನು ಪರಿಶೀಲಿಸಿದರಲ್ಲದೆ, ಗ್ರಾಪಂನಿಂದ ಬಡಾವಣೆಯಲ್ಲಿ ನೀರು ತೆರವುಗೊಳಿಸುವ ಕಾಮಗಾರಿ ವೀಕ್ಷಿಸಿದರು. ಜನರಿಗೆ ಯಾವುದೇ ತೊಂದರೆಯಾಗದಂತೆ ತ್ವರಿತ ಹಾಗೂ ಸಮರ್ಪಕ ಸಂಚಾರಕ್ಕೆ ಅನುವಾಗುವಂತೆ ಕಾಮಗಾರಿ



ನಿರ್ವಹಿಸುವಂತೆ ಸಿಇಓ ಸೂಚಿಸಿದರು.

ಸ್ಥಳದಲ್ಲಿಯೇ ಇದ್ದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇಇ ಜಗದೀಶ್ ಹಾಗೂ ಪಿಡಿಓಗೆ ಗ್ರಾಮಕ್ಕೆ ಸರಬರಾಜು ಮಾಡುತ್ತಿರುವ ಕುಡಿಯುವ ನೀರನ್ನು ಪರೀಕ್ಷಿಸಲು ನಿರ್ದೇಶಿಸಿದರು.

ಪ್ರಸ್ತುತ ಮಳೆ ಹಾಗೂ ಪ್ರವಾಹ ಸಂದರ್ಭದಲ್ಲಿ ಕೊಳವೆಬಾವಿ ಸೇರಿದಂತೆ ಇತರೆ ಕುಡಿಯುವ ನೀರು ಸರಬರಾಜಿನಲ್ಲಿ ಯಾವುದೇ ಕಲುಷಿತ ಅಂಶಗಳು ಸೇರ್ಪಡೆಯಾಗದಂತೆ ಎಚ್ಚರಿಕೆ ವಹಿಸಬೇಕಿದೆ. ಹೀಗಾಗಿ ಎಲ್ಲಾ ಗ್ರಾಮಗಳಲ್ಲಿಯೂ ಕುಡಿಯುವ ನೀರು ಪರೀಕ್ಷೆ ಕಾರ್ಯ ಆಗಬೇಕು ಎಂದರಲ್ಲದೆ, ಆರೋಗ್ಯ ಇಲಾಖೆ ಅಧಿಕಾರಿಗಳು ಗ್ರಾಮಾಂತರ ಭಾಗಗಳಲ್ಲಿ ಜನರ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಕೆ.ಎಂ.ಗಾಯತ್ರಿ ಸಲಹೆ ನೀಡಿದರು. ಈ ಸಂದರ್ಭದಲ್ಲಿ ತಾಪಂ ಇಓ ಪೂರ್ಣಿಮಾ, ಇತರೆ ಅಧಿಕಾರಿಗಳಿದ್ದರು.

ಆಲೂರಿನಲ್ಲಿ ಸುವರ್ಣಾವತಿ ನದಿಗೆ ಬಾಗಿನ

ಆಲೂರು, ಆ.6–ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದಲ್ಲಿ ತಾಲೂಕಿನ



ಜೀವ ನದಿ ಸುವರ್ಣಾವತಿ ಹಾಗೂ ಚಿಕ್ಕಹೊಳೆ ನದಿಗೆ ಗ್ರಾಮ ಪಂಚಾಯಿತಿ ವತಿಯಿಂದ ಬಾಗಿನ ಅರ್ಪಿಸಲಾಯಿತು.

ಗ್ರಾಪಂ ಅಧ್ಯಕ್ಷ ಎ.ಸಿ.ಮಹದೇವಸ್ವಾಮಿ ನದಿಗೆ ಬಾಗಿನ ಅರ್ಪಿಸಿ ಮಾತನಾಡಿ, ಈ ಭಾಗದ ಜೀವನದಿಗಳು ಈ ಬಾರಿ ಆಗಸ್ಟ್‌ನಲ್ಲೇ ತುಂಬಿರುವುದರಿಂದ ಗ್ರಾಮಸ್ಥರು ಹಾಗೂ ರೈತರ ಮೊಗದಲ್ಲಿ ಹರ್ಷ ತಂದಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಎಂ.ಶಿವಾನಂದ, ಶೋಭಾ ಪಾಲರಾಜು, ನಳಿನ ನಂಜುಂಡಸ್ವಾಮಿ, ನಂದಿನಿ ರವಿಕುಮಾರ್, ಆಶಾಲತಾ ರೇವಣ್ಣ, ಹಸನ್‌ವುಲ್ಲಾ ಷರಿಫ್, ಪಿಡಿಓ ಸೀಮಾ, ಕಾರ್ಯದರ್ಶಿ ಮಮತಾ, ಸಿಬ್ಬಂದಿ ಗಿರಿಜ, ಶಶಿಕಲಾ, ರಾಜು, ಮಲ್ಲೇಶ್ ಸೇರಿದಂತೆ ಗ್ರಾಮಸ್ಥರಿದ್ದರು.

ಗಜಪಡೆ ಸದಸ್ಯರಿಗೆ ಪೂಜೆ ಸಲ್ಲಿಸಿ ಬೀಳ್ಕೊಡುಗೆ

ಗುಂಡ್ಲುಪೇಟೆ, ಆ.6–ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳುವ ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನದ ಆನೆಗಳ ಗಜಪಯಣಕ್ಕೆ ಇಂದು ಚಾಲನೆ ದೊರೆಯಿತು.

ಬಂಡೀಪುರ ರಾಷ್ಟ್ರೀಯ ಉದ್ಯಾನದ ಮದ್ದೂರು ವಲಯದ ರಾಮಾಪುರ ಆನೆ ಶಿಬಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ದಸರಾ ಜಂಬೂ ಸವಾರಿಯಲ್ಲಿ ಪಾಲ್ಗೊಳ್ಳಲು ತೆರಳುತ್ತಿರುವ ಬಂಡೀಪುರ ರಾಷ್ಟ್ರೀಯ ಉದ್ಯಾನದ ಚೈತ್ರ ಮತ್ತು ಲಕ್ಷ್ಮಿ ಆನೆಗಳ ಪಯಣಕ್ಕೆ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆನೆಗಳಿಗೆ ಸಂಪ್ರದಾಯದಂತೆ ಕಬ್ಬು, ಬೆಲ್ಲ, ಬಾಳೆ ಹಣ್ಣು ನೀಡಿ ಬೀಳ್ಕೊಡುಗೆ ನೀಡಿದರು. ಹಿಮವದ್ ಗೋಪಾಲಸ್ವಾಮಿ ದೇವಾಲಯದ



ಪ್ರಧಾನ ಅರ್ಚಕ ಗೋಪಾಲಕೃಷ್ಣಭಟ್ಟರು ಆನೆಗಳಿಗೆ ವಿಶೇಷ ಪೂಜೆ ಸಲ್ಲಿಸಿದರು.

ಸಿ.ಎಸ್. ನಿರಂಜನ್‌ಕುಮಾರ್ ಮಾತನಾಡಿ, ವಿಶ್ವಪ್ರಸಿದ್ಧ ಮೈಸೂರು ದಸರೆಯಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನದ ಸಾಕಾನೆಗಳು ಭಾಗವಹಿಸುತ್ತಿರುವುದು ಹೆಮ್ಮೆಯ ವಿಷಯ ಎಂದರು. ನಾಗರಹೊಳೆ ವೀರನಹೊಸಹಳ್ಳಿಯಲ್ಲಿ ಗಜಪಯಣಕ್ಕೆ ಅಧಿಕೃತ ಚಾಲನೆ ದೊರೆಯುತ್ತದೆ. ಅದೇ ರೀತಿ ಬಂಡೀಪುರದಲ್ಲೂ ಗಜಪಯಣಕ್ಕೆ ಚಾಲನೆ ನೀಡುವ ಸಂಪ್ರದಾಯ ಎರಡನೇ ವರ್ಷವೂ ಅರ್ಥಪೂರ್ಣವಾಗಿ ನಡೆದಿದೆ ಎಂದರು.

ಹುಲಿ ಯೋಜನೆ ನಿರ್ದೇಶಕ ರಮೇಶ್ ಕುಮಾರ್ ಮಾತನಾಡಿ, ದಸರೆಯಲ್ಲಿ ಈ ಹಿಂದೆ ಬಂಡೀಪುರದಿಂದ ಜಯಪ್ರಕಾಶ ಆನೆ ಭಾಗವಹಿಸುತ್ತಿತ್ತು. ಈಗ ಚೈತ್ರ ಮತ್ತು ಲಕ್ಷ್ಮಿ ಆನೆಗಳು ತೆರಳುತ್ತಿದ್ದು, ಕೆಲ ದಿನಗಳ ನಂತರ ಪಾರ್ಥಸಾರಥಿ ಆನೆ ದಸರೆಗೆ ತೆರಳಲಿದೆ ಎಂದು ಮಾಹಿತಿ ನೀಡಿದರು. ಚೈತ್ರ ಎರಡನೇ ಬಾರಿಗೆ ತೆರಳುತ್ತಿದ್ದರೆ. ಲಕ್ಷ್ಮಿ ಮತ್ತು ಪಾರ್ಥಸಾರಥಿ ಮೊದಲ ಬಾರಿಗೆ ಹೋಗುತ್ತಿವೆ. ಬಂಡೀಪುರದ ಆನೆಗಳು ದಸರೆಯಲ್ಲಿ ಪಾಲ್ಗೊಳ್ಳುವುದು ಸಂತಸದ ವಿಚಾರ ಎಂದರು.

ತಹಸೀಲ್ದಾರ್ ಸಿ.ಜಿ.ರವಿಶಂಕರ್, ಬೇರಂಬಾಡಿ ಗ್ರಾಪಂ ಅಧ್ಯಕ್ಷ ಹೆಚ್.ಎಸ್.ಸಂಜುಕುಮಾರಿ, ಬಂಡೀಪುರ, ಗುಂಡ್ಲುಪೇಟೆ, ಹೆಡಿಯಾಲ ಉಪವಿಭಾಗದ ಎಸಿಎಫ್‌ಗಳಾದ ನವೀನ್, ರವೀಂದ್ರ, ಕೆ.ಪರಮೇಶ್, ವಲಯ ಅರಣ್ಯಾಧಿಕಾರಿ ಎನ್.ಪಿ.ನವೀನ್‌ಕುಮಾರ್, ಎಪಿಎಂಸಿ ಅಧ್ಯಕ್ಷ ಕೆ.ಎಸ್.ಶಿವಪ್ರಸಾದ್ (ಕುಮರಹಳ್ಳಿರವಿ), ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಮಳವಳ್ಳಿ ಮಹೇಶ್, ನಿರ್ದೇಶಕ ಚನ್ನಮಲ್ಲೀಪುರ ಬಸವಣ್ಣ, ಗ್ರಾಪಂ ಸದಸ್ಯರಿದ್ದರು.

ಕೆ.ಗುಡಿ ಆಶ್ರಮ ಶಾಲೆಯಲ್ಲಿ ಸಂಸದ ವಿ.ಶ್ರೀನಿವಾಸಪ್ರಸಾದ್ ಹುಟ್ಟುಹಬ್ಬ ಆಚರಣೆ

ಸೋಲಿಗ ಮಹಿಳೆಯರಿಗೆ ಸೀರೆ ವಿತರಣೆ

ಚಾಮರಾಜನಗರ ಆ.6–ಸಂಸದ ವಿ.ಶ್ರೀನಿವಾಸ್‌ಪ್ರಸಾದ್ ಅವರ 76ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿ ಬಳಗದಿಂದ ಆಚರಿಸಲಾಯಿತು.

ಸೀರೆ ವಿತರಣೆ: ತಾಲೂಕಿನ ಕ್ಯಾತೇದೇವರಗುಡಿ(ಕೆ.ಗುಡಿ)ಯ ಆಶ್ರಮಶಾಲೆಯಲ್ಲಿ ಕುಂಟಗುಡಿ ಪೋಡಿನ ನಿವಾಸಿಗಳ ಜೊತೆ ಕೇಕ್ ಕತ್ತರಿಸುವ ಮೂಲಕ ಆಚರಿಸಿದ್ದಲ್ಲದೆ, ಸೋಲಿಗ ಮಹಿಳೆಯರಿಗೆ ಸೀರೆ, ಸಿಹಿ ವಿತರಿಸಲಾಯಿತು.

ಈ ಸಂದರ್ಭ ರಾಜ್ಯ ವನ್ಯಜೀವಿ ಮಂಡಳಿ



ಚಾಮರಾಜನಗರ ತಾಲೂಕಿನ ಕೆ.ಗುಡಿ ಆಶ್ರಮಶಾಲೆಯಲ್ಲಿ ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ 76ನೇ ಹುಟ್ಟುಹಬ್ಬದ ಅಂಗವಾಗಿ ಸೋಲಿಗ ಮಹಿಳೆಯರಿಗೆ ಸೀರೆ ವಿತರಿಸಲಾಯಿತು.

ಸದಸ್ಯ ಮಲ್ಲೇಶಪ್ಪ, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಸಿ.ಎಂ.ನರಸಿಂಹಮೂರ್ತಿ, ವಲಯ ಅರಣ್ಯಾಧಿಕಾರಿ ವಿನೋದ್‌ಗೌಡ, ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗದ ಅಧ್ಯಕ್ಷ ರಾಮಸಮುದ್ರ ಬಸವರಾಜು, ಮುಖಂಡರಾದ ಆರ್.ಎಂ.ಅಶೋಕ್, ಮಂಜು, ರಾಮಸಮುದ್ರ ಮಹೇಶ್, ಆಶ್ರಮಶಾಲೆಯ ಮುಖ್ಯಶಿಕ್ಷಕ ಶಂಕರ್, ಸಹಶಿಕ್ಷಕರು, ಸೋಲಿಗ ನಿವಾಸಿಗಳಿದ್ದರು.

ಉಪಾಹಾರ ವಿತರಣೆ: ನಗರದ ಶ್ರೀ ಬಾಲಾಶ್ರಮದಲ್ಲೂ ಮಕ್ಕಳಿಂದ ಕೇಕ್ ಕತ್ತರಿಸುವ ಮೂಲಕ ಅಭಿಮಾನಿಗಳು ಶ್ರೀನಿವಾಸಪ್ರಸಾದ್ ಅವರ ಹುಟ್ಟುಹಬ್ಬ ಆಚರಿಸಿದರು. ಇದೇ ವೇಳೆ ಮಕ್ಕಳಿಗೆ ಬೆಳಗಿನ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು. ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಮುಖಂಡರಾದ ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿ.ನಾಗಶ್ರೀ ಪ್ರತಾಪ್, ಅಮ್ಮನಪುರ ಮಲ್ಲೇಶ್, ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಸುಂದರ್, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ಬಾಲಸುಬ್ರಮಣ್ಯ, ರಾಜಶೇಖರ್, ಚಿನ್ನಸ್ವಾಮಿ, ಆನಂದ, ಬಂಗಾರು, ಪ್ರಸನ್ನ, ಮೋಹನ್, ಕುಮಾರ್, ಶಿವಣ್ಣ ಇತರರಿದ್ದರು.

ಅಂಬಾರಿ ಆನೆ ಅಭಿಮನ್ಯು ತಂಡ ಇಂದು ಮೈಸೂರು ಪ್ರವೇಶ



ಮೈಸೂರು, ಆ.6(ಎಂಟಿವೈ, ಎಂಕೆ)–ಮೈಸೂರು ದಸರಾ ಮಹೋತ್ಸವದಲ್ಲಿ ಅಂಬಾರಿ ಆನೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲೇ ಈ ವರ್ಷವೂ ವಿಶ್ವವಿಖ್ಯಾತ ಜಂಬೂಸವಾರಿ ನೆರವೇರಲಿದೆ. 57 ವರ್ಷದ ಅಭಿಮನ್ಯು ಜೊತೆಗೆ ಭೀಮ(22), ಗೋಪಾಲಸ್ವಾಮಿ(39), ಅರ್ಜುನ(63), ವಿಕ್ರಮ (59), ಧನಂಜಯ(44), ಕಾವೇರಿ(45), ಗೋಪಿ(41), ವಿಜಯ(63), ಚೈತ್ರ(49), ಲಕ್ಷ್ಮೀ(21) ಸೇರಿದಂತೆ 14 ಆನೆಗಳು ಭಾಗಿಯಾಗಲಿವೆ. ಇದರಲ್ಲಿ ಬಂಡೀಪುರದ ರಾಮಾಪುರ ಶಿಬಿರದ ಪಾರ್ಥಸಾರಥಿ(18), ಮಡಿಕೇರಿ ವಿಭಾಗದ ದುಬಾರೆ ಶಿಬಿರದ ಶ್ರೀರಾಮ(40) ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮತ್ತಿಗೋಡು ಆನೆ ಶಿಬಿರದ ಮಹೇಂದ್ರ (39) ಇದೇ ಮೊದಲ ಬಾರಿಗೆ ದಸರಾದಲ್ಲಿ ಭಾಗವಹಿಸುತ್ತಿವೆ. ಇದರಲ್ಲಿ ಪಾರ್ಥಸಾರಥಿ ಅತೀ ಚಿಕ್ಕ ವಯಸ್ಸಿನವನು. ಮೊದಲ ತಂಡದಲ್ಲಿ ಅಂಬಾರಿ ಆನೆ ಅಭಿಮನ್ಯು, ಭೀಮ, ಮಹೇಂದ್ರ, ಅರ್ಜುನ, ವಿಕ್ರಮ, ಧನಂಜಯ, ಕಾವೇರಿ, ಚೈತ್ರ, ಲಕ್ಷ್ಮೀ ಸೇರಿ 9 ಆನೆಗಳನ್ನು ಕರೆತರಲಾಗುತ್ತಿದೆ. ಸಂಜೆಯೊಳಗೆ ಮೈಸೂರಿನ ಅಶೋಕಪುರಂನ ಅರಣ್ಯ ಭವನಕ್ಕೆ ಆಗಮಿಸಲಿವೆ.

ಗಜಪಯಣಕ್ಕೆ ಮೆರುಗು: ಗಜಪಯಣಕ್ಕೆ ಈ ಬಾರಿ ಜಾನಪದ ಮೆರುಗು ನೀಡಲು ಉದ್ದೇಶಿಸಲಾಗಿದೆ. ಸುತ್ತಮುತ್ತಲ ಗ್ರಾಮಸ್ಥರು ಹಾಗೂ ಶಾಲಾ–ಕಾಲೇಜು ವಿದ್ಯಾರ್ಥಿಗಳ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ಸುಮಾರು 5 ಸಾವಿರ ಮಂದಿ ಗಜಪಯಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಕೊರೊನಾ ಹಿನ್ನೆಲೆಯಲ್ಲಿ ಕಳೆದೆರಡು ವರ್ಷ ದಸರಾ ಮಹೋತ್ಸವ ಸರಳವಾಗಿ ನೆರವೇರಿತ್ತು. ಹಾಗಾಗಿಯೇ ಗಜಪಯಣ ಕಾರ್ಯಕ್ರಮದಲ್ಲೂ ಆಡಂಬರವಿರಲಿಲ್ಲ. ಈ ಬಾರಿಯ ಗಜಪಯಣಕ್ಕೆ ಸಾಂಸ್ಕೃತಿಕ ಮೆರುಗು ನೀಡುವ ಮೂಲಕ ಅದ್ಧೂರಿ ಆಚರಣೆಗೆ ಕ್ರಮ ಕೈಗೊಳ್ಳಲಾಗಿದೆ. ಕಂಸಾಳೆ, ಡೊಳ್ಳು ಕುಣಿತ, ವೀರಗಾಸೆ ಕುಣಿತ, ಪೂಜಾ ಕುಣಿತ, ಬುಡಕಟ್ಟು ಸಾಂಪ್ರದಾಯಿಕ ನೃತ್ಯ, ಟಿಬೆಟಿಯನ್ನರ ನೃತ್ಯ, ಗೊರವರ ಕುಣಿತ, ಜೇನು ಕುರುಬರ ಕುಣಿತ ಸೇರಿದಂತೆ ವಿವಿಧ ಕಲಾ ತಂಡಗಳು ತಮ್ಮ ಕಲಾ ಪ್ರಕಾರವನ್ನು ಪ್ರದರ್ಶಿಸಲಿವೆ. ಈಗಾಗಲೇ ದಾರಿಯುದ್ದಕ್ಕೂ ಸ್ವಾಗತ ಕಮಾನು, ಬ್ಯಾನರ್, ಬಂಟಿಂಗ್ಸ್ ಅಳವಡಿಸಲಾಗಿದೆ.

ಭಾರೀ ಮಳೆ: ಗಜಪಯಣ ಕಾರ್ಯಕ್ರಮ ನಡೆಯುವ ವೀರನಹೊಸಳ್ಳಿ ಗೇಟ್ ಬಳಿ ಕಳೆದ 3–4 ದಿನಗಳಿಂದ ಭಾರೀ ಮಳೆ ಸುರಿಯುತ್ತಿದೆ. ಹಾಗಾಗಿ ಗಜಪಯಣ ಕಾರ್ಯಕ್ರಮಕ್ಕೆ ಅಡ್ಡಿ ಆಗಬಹುದು ಎಂಬ ಆತಂಕ ಅಧಿಕಾರಿಗಳಲ್ಲಿ ಮನೆ ಮಾಡಿದೆ. ದುಬಾರೆ ಹಾಗೂ ಮತ್ತಿಗೂಡು ಆನೆ ಕ್ಯಾಂಪ್‌ನಿಂದ ಇಂದು ಮಧ್ಯಾಹ್ನವೇ ಅಂಬಾರಿ ಆನೆ ಅಭಿಮನ್ಯು ಸೇರಿದಂತೆ ಇನ್ನಿತರ ಆನೆಗಳು ವೀರನಹೊಸಳ್ಳಿ ಗೇಟ್ ಬಳಿ ಬಂದು ಬೀಡು ಬಿಟ್ಟಿವೆ.

ಒಂದನೇ ಪುಟದಿಂದ

ಇಂದು ಗಜಪಯಣ

ದಸರಾ ಆಚರಣೆಯಲ್ಲಿ ಅರಮನೆ ಆವರಣದಲ್ಲಿ ನಡೆಯುವ ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಗಳ ಸುಮಾರು 5 ಕೋಟಿ ರೂ. ಖರ್ಚನ್ನು ಅರಮನೆ ಮಂಡಳಿಯೇ ಭರಿಸಬೇಕು. ಹೊರಗಡೆ ನಡೆಯುವ ಕಾರ್ಯಕ್ರಮಗಳಿಗೆ ಮುಡಾದಿಂದ 10 ಕೋಟಿ ರೂ. ನೀಡಬೇಕು ಎಂದು ತಿರ್ಮಾನಿಸಿದ್ದು, ಉಳಿದ ಖರ್ಚಿನ ಕುರಿತು ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು ಎಂದು ತಿಳಿಸಿದರು.

16 ಉಪ ಸಮಿತಿ: ದಸರಾ ಆಚರಣೆ ಹಿನ್ನೆಲೆಯಲ್ಲಿ 16 ಉಪ ಸಮಿತಿಗಳ ರಚನೆ ಮಾಡಿದ್ದು, ಇವುಗಳಲ್ಲಿ ಐಎಎಸ್ ಮತ್ತು ಕೆಎಎಸ್ ಅಧಿಕಾರಿಗಳು ಇರಲಿದ್ದಾರೆ. ಕಮಿಟಿಯಲ್ಲಿ ಯಾರಿದ್ದಾರೆ ಎಂಬುದನ್ನು ಸದ್ಯದಲ್ಲಿಯೇ ತಿಳಿಸಲಾಗುವುದು. ಅಲ್ಲದೆ ಸ್ಥಳೀಯ ಶಾಸಕರು, ಸಂಸದರು, ನಿಗಮ ಮಂಡಳಿ ಸದಸ್ಯರುಗಳನ್ನು ಉಪ ಸಮಿತಿಗಳಲ್ಲಿ ಸೇರ್ಪಡೆಗೊಳಿಸಬೇಕು ಎಂಬ ಸಲಹೆಗಳು ಕೇಳಿ ಬಂದಿದ್ದು, ಮತ್ತೆ ಸಭೆ ನಡೆಸಿ ನಿರ್ಧರಿಸಲಾಗುವುದು ಎಂದು ತಿಳಿಸಿದರು.

ಸಾಂಸ್ಕೃತಿಕ ಹಾಗೂ ಅದ್ದೂರಿ ದಸರಾ ಆಚರಣೆ: ಈ ವರ್ಷದ ದಸರಾ ಆಚರಣೆಯನ್ನು ಸಾಂಸ್ಕೃತಿಕ ಹಾಗೂ ಅದ್ದೂರಿ ಆಚರಣೆಗೆ ನಿರ್ಧರಿಸಲಾಗಿದೆ. ಯುವ ದಸರಾ, ರೈತ ದಸರಾ ಇನ್ನಿತರೆ ಕಾರ್ಯಕ್ರಮಗಳನ್ನು ಅದ್ದೂರಿಯಾಗಿ ಆಚರಣೆ ಮಾಡಲು ತಿರ್ಮಾನಿಸಲಾಗಿದೆ. 15 ದಿನಗಳಿಗೂ ಮುಂಚಿತವಾಗಿಯೇ ವಸ್ತುಪ್ರದರ್ಶನ ಉದ್ಘಾಟಿಸಲಾಗುವುದು. 75ನೇ ಸ್ವಾತಂತ್ರ್ಯ ಮಹೋತ್ಸವ ಹಿನ್ನೆಲೆ ಪ್ರವಾಸೋಧ್ಯಮವನ್ನು ಗಮನದಲ್ಲಿಟ್ಟುಕೊಂಡು ದಸರಾ ಮಹೋತ್ಸವಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಮೂಲಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಅನುಸರಿಸಬೇಕಾದ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ದಸರಾ ಉದ್ಘಾಟಕರ ಆಯ್ಕೆ ಸಿಎಂ ನಿರ್ಧಾರಕ್ಕೆ: ಪ್ರತಿ ವರ್ಷ ದಸರಾ ಉದ್ಘಾಟಕರ ಕುರಿತು ಸಲಹೆಗಳು ಕೇಳಿ ಬರುತ್ತಿದ್ದವು. ಆದರೆ ಈ ವರ್ಷ ಇಲ್ಲಿಯವರೆಗೆ ಒಂದೇ ಒಂದು ಸಲಹೆಯೂ ಬಂದಿಲ್ಲ. ಅಲ್ಲದೆ ಉದ್ಘಾಟಕರ ಆಯ್ಕೆ ವಿಚಾರವನ್ನು ಮುಖ್ಯಮಂತ್ರಿಗಳಿಗೆ ಬಿಡಲಾಗಿದೆ. ಯಾರಾದರೂ ಸಲಹೆ ನೀಡಿದರೆ ಅದನ್ನು ಸಿಎಂ ಗಮನಕ್ಕೆ ತರುವ ಪ್ರಯತ್ನ ಮಾಡಲಾಗುವುದು. ಹಾಗೆಯೇ ದಸರಾ ಮುಗಿದ ಕೂಡಲೇ ಮೊದಲಿನಂತೆ ಲೆಕ್ಕ ನೀಡಲಾಗುವುದು. ಯಾವುದೇ ಗೊಂದಲ ಉಂಟಾಗದಂತೆ ನಿರ್ವಹಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ಸದ್ಯದಲ್ಲಿ ಮೇಯರ್ ಕುರಿತು ನಿರ್ಧಾರ...: ಆ.9ಕ್ಕೆ ಮೈಸೂರು ಮೇಯರ್ ಸ್ಥಾನದ ಮೀಸಲಾತಿ ಪ್ರಕಟ ಆಗಲಿದೆ. ಈ ಬಾರಿ ಮೈಸೂರು ಮೇಯರ್ ಯಾರಾಗಬೇಕು ಎಂಬುದು ಮುಂದೆ ತೀರ್ಮಾನ ಆಗುತ್ತದೆ ಎಂದು ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು. ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸದ್ಯ ಬಿಜೆಪಿ–ಜೆಡಿಎಸ್ ಮೈತ್ರಿ ಇರುವ ಪಾಲಿಕೆಯಲ್ಲಿ ಈ ಬಾರಿ ಜೆಡಿಎಸ್‌ನಿಂದ ಮೇಯರ್ ಆಯ್ಕೆ ಆಗಬೇಕಿದೆ. ಈ ಕುರಿತು ಸದ್ಯದಲ್ಲಿಯೇ ಮಾಹಿತಿ ನೀಡಲಾಗುವುದು. ದಸರಾ ವೇಳೆ ಹೊಸ ಮೇಯರ್ ಮತ್ತು ಉಪ ಮೇಯರ್ ಇರಲಿದ್ದಾರೆ ಎಂದರು.

ಭಾರತದ ನೂತನ ಉಪ ರಾಷ್ಟ್ರಪತಿ

ಮತಗಳನ್ನು ಪಡೆದರೆ, ಮಾರ್ಗರೇಟ್ ಆಳ್ವ 182 ಮತಗಳನ್ನು ಪಡೆದರು. ಧನಕರ್ 346 ಅಧಿಕ ಮತಗಳೊಂದಿಗೆ ಜಯ ಸಾಧಿಸಿದ್ದಾರೆ. 15 ಮತಗಳು ಅಸಿಂಧುವಾದವು.

ವ್ಯಾಪಕ ಬೆಂಬಲ: ಜಗದೀಪ್ ಧನಕರ್ ಅವರಿಗೆ ಹಲವಾರು ಎನ್‌ಡಿಎ ಹೊರತಾದ ಪಕ್ಷಗಳು ಬೆಂಗಲಿಸಿದ್ದವು. ನವೀನ್ ಪಟ್ನಾಯಕ್ ಅವರ ಬೀಜು ಜನತಾದಳ, ಜನನ್ಮೋಹನ್ ರೆಡ್ಡಿಯವರ ವೈಎಸ್‌ಆರ್ ಕಾಂಗ್ರೆಸ್, ಮಾಯಾವತಿಯ ಭೋಜನ ಸಮಾಜ ಪಕ್ಷ ಚಂದ್ರಪ್ರಭಾನಾಯ್ಡು ಅವರ ತೆಲುಗುದೇಶಂ ಪಕ್ಷ, ಜಾರ್ಕಂಡ್ ಮುಕ್ತಿ ಮೋರ್ಚಾ ಅಕಾಲಿ ದಳ ಮತ್ತು ಶಿವಸೇನೆಯ ಏಕ್‌ನಾಥ್ ಶಿಂಧೆ ಬಣ ಬೆಂಬಲಿಸಿದ್ದವು. ಕಾಂಗ್ರೆಸ್ ನೇತೃತ್ವದ ಯುಪಿಎ ಅಭ್ಯರ್ಥಿ ಮಾರ್ಗರೇಟ್ ಆಳ್ವ ಅವರನ್ನು ತೆಲಂಗಾಣ ರಾಷ್ಟ್ರ ಸಮಿತಿ, ಆಮ್‌ಆದ್ಮಿ ಪಕ್ಷ ಹಾಗೂ ಶಿವಸೇನೆಯ ಉದ್ಧವ್‌ಠಾಕ್ರೆ ಬಣದ 9 ಸಂಸದರು ಬೆಂಬಲಿಸಿದ್ದರು. ಜಗದೀಪ್ ಧನಕರ್ ಜಾಟ್ ಸಮುದಾಯಕ್ಕೆ ಸೇರಿದವರು. ಇವರು 1951ರಲ್ಲಿ ರಾಜಸ್ಥಾನದ ಇತಾನ ಎಂಬ ಪುಟ್ಟ ಗ್ರಾಮದಲ್ಲಿ ರೈತ ಕುಟುಂಬವೊಂದರಲ್ಲಿ ಜನಿಸಿದರು.

ವೃತ್ತಿಯಲ್ಲಿ ವಕೀಲರಾಗಿದ್ದ ಜಗದೀಪ್ ಧನಕರ್ 1989ರಲ್ಲಿ ರಾಜಕೀಯ ಪ್ರವೇಶಿಸಿದ್ದರು. ತಮ್ಮ ಶಾಲಾ ಶಿಕ್ಷಣವನ್ನು ಚಿತ್ತೋರಗಡದ ಸೈನಿಕ ಶಾಲೆಯಲ್ಲಿ ಮುಗಿಸಿದರು. ಭೌತಶಾಸ್ತ್ರದಲ್ಲಿ ಪದವಿ ಪಡೆದಿದ್ದರು. ರಾಜಸ್ತಾನದ ಪ್ರಮುಖ ವಕೀಲರಲ್ಲಿ ಒಬ್ಬರಾಗಿದ್ದರು. ರಾಜಸ್ತಾನ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಎರಡರಲ್ಲೂ ನ್ಯಾಯವಾದಿಯಾಗಿ ವೃತ್ತಿ ಸಾಧನೆ ಮಾಡಿದ್ದರು. ಅತ್ಯಂತ ಕಿರಿಯ ವಯಸ್ಸಿನಲ್ಲಿ ರಾಜಸ್ತಾನ ಹೈಕೋರ್ಟ್ ವಕೀಲರ ಸಂಘದ ಅಧ್ಯಕ್ಷರಾಗಿದ್ದರು. ರಾಜಾಸ್ತಾನದ ಜುಂಜೂನು ಕ್ಷೇತ್ರದಿಂದ ಲೋಕಸಭೆಗೆ 1989ರಲ್ಲಿ ಆಯ್ಕೆಯಾಗಿ ಅಂದಿನ ಪ್ರಧಾನಿ ಚಂದ್ರಶೇಖರ್ ಸರ್ಕಾರದಲ್ಲಿ ಸಂಸದೀಯ ವ್ಯವಹಾರಗಳ ಖಾತೆ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. 1993–98ರ ನಡುವೆ ರಾಜಾಸ್ತಾನದ ಅಜ್ಮೀರ್ ಜಿಲ್ಲೆಯ ಕಿಶಾನ್ ಗರ್ಗ್ ಕ್ಷೇತ್ರದ ಶಾಸಕರಾಗಿದ್ದರು. ಆರಂಭದಲ್ಲಿ ಜನತಾ ದಳ ಬಳಿಕ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದ ಇವರು, 2008ರಲ್ಲಿ ಬಿಜೆಪಿ ಸೇರಿದ್ದರು.

2019 ಜುಲೈನಲ್ಲಿ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ನೇಮಕಗೊಂಡಿದ್ದ ಧನಕರ್, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಜೊತೆಗೆ ನಿರಂತರ ಭಿನ್ನಾಭಿಪ್ರಾಯದ ಮೂಲಕವೇ ಶುದ್ಧಿಯಾಗಿದ್ದರು. ಇವರನ್ನು ಉಪ ರಾಷ್ಟ್ರಪತಿ ಹುದ್ದೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಕೃಷಿ ಹಿನ್ನೆಲೆಯನ್ನು ಉಲ್ಲೇಖಿಸಿ ಆಯ್ಕೆ ಮಾಡಲಾಗಿತ್ತು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಇವರನ್ನು ಅಭ್ಯರ್ಥಿಯಾಗಿ ಘೋಷಿಸುವ ವೇಳೆ ಕಿಸಾನ್ ಪುತ್ರ ಎಂದೇ ಕರೆದಿದ್ದರು. ಮೂರು ದಶಕಗಳಿಗೂ ಹೆಚ್ಚು ಕಾಲ ಧನಕರ್, ಸಾರ್ವಜನಿಕ ಜೀವನದಲ್ಲಿದ್ದಾರೆ. ಉಪ ರಾಷ್ಟ್ರಪತಿಗಳ ಅಧಿಕೃತ ನಿವಾಸ ನವದೆಹಲಿಯ ಮೌಲಾನಾ ಆಜಾದ್ ರಸ್ತೆಯಲ್ಲಿದೆ. ಇದನ್ನು ಉಪ ರಾಷ್ಟ್ರಪತಿ ಭವನವೆಂದೇ ಕರೆಯಲಾಗುತ್ತದೆ.

ಡಾ.ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ಮೈಸೂರಿನ ಮಿಷನ್ ಆಸ್ಪತ್ರೆಗೆ ನಟ ಪ್ರಕಾಶ್‌ರಾಜ್‌ರಿಂದ ಆಂಬುಲೆನ್ಸ್ ಕೊಡುಗೆ

● ಶೀಘ್ರವೇ ಆಸ್ಪತ್ರೆಯಲ್ಲಿ ರಕ್ತನಿಧಿ ಪ್ರಾರಂಭಕ್ಕೆ ನೆರವಿನ ಭರವಸೆ ● ಒಬ್ಬ ನಟನ ಮೇರುಗುಣಕ್ಕೆ ಮಾರುಹೋಗಿ ನೆರವಿನ ಸ್ಮರಣೀಯ ಸಾರ್ಥಕತೆ



ಮೈಸೂರು,ಆ.6(ಎಂಟಿವೈ)– ಪವರ್ ಸ್ಟಾರ್ ಡಾ.ಪುನೀತ್‌ರಾಜ್‌ಕುಮಾರ್ ಸ್ಮರಣಾರ್ಥ ನಟ ಪ್ರಕಾಶ್ ರಾಜ್ ಮೈಸೂರಿನ ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ (ಮಿಷನ್) ಆಸ್ಪತ್ರೆಗೆ 'ಅಪ್ಪು ಎಕ್ಸ್‌ಪ್ರೆಸ್ ಆಂಬುಲೆನ್ಸ್' ಕೊಡುಗೆಯಾಗಿ ನೀಡಿದ್ದಾರೆ.

ಮೈಸೂರಿನ ಮಂಡಿಮೊಹಲ್ಲಾದಲ್ಲಿರುವ ಆಸ್ಪತ್ರೆ ಆವರಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಸಿಸ್ಟರ್ ಸುಜಾತ ಅವರಿಗೆ ಆಂಬುಲೆನ್ಸ್ ಹಸ್ತಾಂತರಿಸಿ, ರೋಗಿಗಳ ಸೇವೆಗೆ ಬಳಸಿಕೊಳ್ಳುವಂತೆ ಸಲಹೆ ನೀಡಿದರು.

ಬಳಿಕ ಆಸ್ಪತ್ರೆಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಟ ಪ್ರಕಾಶ್ ರಾಜ್ ಮಾತನಾಡಿ, ಅಪ್ಪು ಅಗಲಿಕೆಯಿಂದ ರಾಜ್ಯವೇ ನೋವಿನಲ್ಲಿ ಮುಳುಗಿತು. ಇದಕ್ಕೆ ಪುನೀತ್ ಅವರಲ್ಲಿದ್ದ ಒಳ್ಳೆಯ ಗುಣಗಳೇ ಕಾರಣವಾಗಿತ್ತು. ಈ ಒಳ್ಳೆಯ ಆಶಯಗಳನ್ನು ಉಳಿಸಬೇಕು. ಆ ಮೂಲಕ ಪುನೀತ್ ಅವರ ಹೆಸರನ್ನು ಅಜರಾಮರವಾಗಿಸಬೇಕೆಂಬ ಉದ್ದೇಶದಿಂದ ಈ ಸೇವಾ ಕಾರ್ಯ ಹಮ್ಮಿಕೊಳ್ಳಲಾಗಿದೆ. ಮೊದಲ ಹೆಜ್ಜೆಯಾಗಿ ಮೈಸೂರಿನ ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ ಆಸ್ಪತ್ರೆಗೆ ಆಂಬುಲೆನ್ಸ್ ಕೊಡುಗೆಯಾಗಿ ನೀಡಿದ್ದೇವೆ. ರಾಜ್ಯ ಎಲ್ಲಾ ಜಿಲ್ಲೆಗಳಿಗೂ ಈ ರೀತಿಯ ತುರ್ತು ಸೇವಾ ವಾಹನವನ್ನು ನೀಡಲಾಗುವುದು. ಹಾಗೆಯೇ ಮುಂದಿನ ಮೂರು ತಿಂಗಳಲ್ಲಿ ಮಿಷನ್ ಆಸ್ಪತ್ರೆಯಲ್ಲಿ ಬ್ಲಡ್ ಬ್ಯಾಂಕ್ ತೆರೆಯಲು ಸಹಕರಿಸುವುದಾಗಿ ತಿಳಿಸಿದರು.


ಪುನೀತ್ ಅವರಿಗೆ ತುರ್ತು ಚಿಕಿತ್ಸೆ ದೊರೆತಿದ್ದರೆ ಬದುಕುಳಿಯುವ ಸಾಧ್ಯತೆ ಇತ್ತು ಎಂಬುದು ನನ್ನ ನಂಬಿಕೆಯಾಗಿದೆ. ಈ ರೀತಿ ಬೇರೆಯವರಿಗೆ ಆಗಬಾರದು ಎಂದು ಭಾವಿಸಿ, ತುರ್ತು ವಾಹನ ಸೇವೆಯನ್ನು ಕಲ್ಪಿಸಲಾಗುತ್ತಿದೆ ಎಂದರು.

ನನ್ನ ಚಿಕ್ಕಮ್ಮ ಇದೇ ಮಿಷನ್ ಆಸ್ಪತ್ರೆಯಲ್ಲಿ ನರ್ಸ್ ಆಗಿ ಸೇವೆ ಸಲ್ಲಿಸಿದ್ದಾರೆ. ನಮ್ಮ ಕುಟುಂಬ ಚಿಂತಾಜನಕ ಸ್ಥಿತಿಯಲ್ಲಿದ್ದಾಗ ನನ್ನ ತಾಯಿ ಒಂದು ಅನಾಥಾಶ್ರಮದಲ್ಲಿ ಆಶ್ರಯ ಪಡೆಯಬೇಕಾಯಿತು. ಆ ಹಂತದಲ್ಲಿ ಉಳ್ಳವರು ಆಶ್ರಮಕ್ಕೆ ದಾನ ನೀಡಿದ್ದರಿಂದಲೇ ನಮ್ಮ ಕುಟುಂಬ ಉಳಿಯಿತು. ಈಗ ನಮ್ಮಲ್ಲಿರುವುದನ್ನು ಕೆಲವೊಂದು ಒಳ್ಳೆಯ ಕಾರ್ಯಕ್ಕೆ ಬಳಸುವುದರಿಂದ ಸಂತ್ರಸ್ತರಿಗೆ ಸಹಾಯವಾಗುತ್ತದೆ. ನಾನೊಬ್ಬನೇ ಎಲ್ಲವನ್ನೂ ಮಾಡಲು ಆಗುವುದಿಲ್ಲ. ಇದಕ್ಕೆ ನನ್ನಂತಹ ಸಹೃದಯರು ಕೈ ಜೋಡಿಸುತ್ತಾರೆ. ಒಂದು ವೇಳೆ ಸಹಾಯ ದೊರೆಯದಿದ್ದರೂ ಚಿಂತೆ ಇಲ್ಲ ನಾನೇ ದುಡಿದು ಈ ಸೇವಾ ಕಾರ್ಯವನ್ನು ಪೂರ್ಣಗೊಳಿಸುತ್ತೇನೆ ಎಂದರು.

ಆಸ್ಪತ್ರೆಯವರು ರಕ್ತನಿಧಿ ಕೇಂದ್ರವೊಂದರ ಸ್ಥಾಪನೆಗೆ ಸಹಕಾರ ನೀಡುವಂತೆ ಮನವಿ ಮಾಡಿದ್ದಾರೆ. ಈ ಬಗ್ಗೆ ನಾನು ಮಾತನಾಡುವಾಗ ಪೂಜಾರಿ ಫಿಶ್ ಲ್ಯಾಂಡ್‌ನ ಸುಧಾಕರ್ ಕೇಳಿಸಿಕೊಂಡು ಐದು ಲಕ್ಷ ರೂ. ನೀಡುವುದಾಗಿ ತಿಳಿಸಿದ್ದಾರೆ. ಈ ರೀತಿ ಸಮಾನ ಮನಸ್ಕರೊಂದಿಗೆ ಸೇರಿ ಮಿಷನ್ ಆಸ್ಪತ್ರೆಯ ಈ ಕೋರಿಕೆಯನ್ನು ಈಡೇರಿಸುತ್ತೇವೆ.

ನಿರ್ದೇಶಕ ಸಂತೋಷ್ ಆನಂದ ಮಾತನಾಡಿ, ಅಪ್ಪು ಅವರ ಜೊತೆಗೆ 8 ವರ್ಷಗಳ ಒಡನಾಟವಿತ್ತು. ಅವರೊಂದಿಗೆ 2 ಸಿನೆಮಾಗಳನ್ನು ಮಾಡಿದ್ದರೂ ಅವರು ಮಾಡಿದ್ದಂತಹ ಒಳ್ಳೆಯ ಕೆಲಸಗಳು ನಮಗೆ ಗೊತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಗೌಪ್ಯತೆ ಕಾಪಾಡಿಕೊಂಡಿದ್ದರು. ಅಪ್ಪು ನಮ್ಮೆಲ್ಲರ ಮನಸ್ಸಿನಲ್ಲಿ ದೇವರ ಸ್ಥಾನದಲ್ಲಿದ್ದಾರೆ. ಅಪ್ಪು ನಮಗೆ 50 ಸಾವಿರ ರೂ. ಕೊಟ್ಟು ಹೃದಯ ಚಿಕಿತ್ಸೆಗೆ ನೆರವಾದರು ಅಂತ ಒಂದು ಹೋಟೆಲ್‌ನಲ್ಲಿ ಸಪ್ಲೈಯರ್ ಒಬ್ಬ ಅಳುತ್ತ ಹೇಳುತ್ತಾನೆ. ಇಂತಹ ಎಷ್ಟೋ ಪ್ರಕರಣಗಳು ನಮ್ಮ ನಡುವೆ ಇವೆ. ಈ ಮಣ್ಣಿನಲ್ಲಿ ಹುಟ್ಟಿದ ನಟನಿಗೆ ಇದೇ ಮಣ್ಣಿನಲ್ಲಿ ಹುಟ್ಟಿದ ಮತ್ತೊಬ್ಬ ನಟ ನೆನಪಿಸಿಕೊಂಡು ಸೇವೆ ಒದಗಿಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ನಿರ್ದೇಶಕ ವಿನ್ಸೆಂಟ್ ಪಾಲಣ್ಣ, ರಾಮ್ ರೂಪನ್, ರೆವರೆಂಡ್ ಸುಜಾತಮ್ಮ ಹಾಗೂ ಇತರರು ಇದ್ದರು.

ಒಡನಾಡಿಯಲ್ಲಿ ಸಂಸದ ಶ್ರೀನಿವಾಸ ಪ್ರಸಾದ್ ಅವರ 75ನೇ ಹುಟ್ಟುಹಬ್ಬ ಆಚರಣೆ



ಮೈಸೂರು, ಆ.6(ಎಸ್‌ಪಿಎನ್)– ಮಾಜಿ ಕಂದಾಯ ಸಚಿವರೂ ಆದ ಸಂಸದ ವಿ.ಶ್ರೀನಿವಾಸ ಪ್ರಸಾದ್ 75ನೇ ವರ್ಷದ ಹುಟ್ಟುಹಬ್ಬವನ್ನು ಮೈಸೂರಿನ ಒಡನಾಡಿ ಸಂಸ್ಥೆಯಲ್ಲಿ ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನದ ವತಿಯಿಂದ ಶನಿವಾರ ಆಚರಿಸಲಾಯಿತು.

ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರ ಧರ್ಮಪತ್ನಿ ಶ್ರೀಮತಿ ಡಿ.ಭಾಗ್ಯಲಕ್ಷ್ಮಿ ನೇತೃತ್ವದಲ್ಲಿ ಕೇಕ್ ಕತ್ತರಿಸಿ, ಒಡನಾಡಿ ಸಂಸ್ಥೆಯ ಮಕ್ಕಳಿಗೆ ಸಿಹಿ ವಿತರಿಸಿ ಸಂಸದರ 75ನೇ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಲಾಯಿತು.

ಈ ವೇಳೆ ಮೈಸೂರು ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಭಂತೇಜಿ, ಮುಡಾ ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ಸಮಾನತೆ–ಸ್ವಾಭಿಮಾನ–ಸ್ವಾವಲಂಬನೆ ಪ್ರತಿಷ್ಠಾನದ ಗೌರವಾಧ್ಯಕ್ಷ ಹಾಗೂ ನಿವೃತ್ತ ಪ್ರಾಧ್ಯಾಪಕ ಪ್ರೊ ನೀಲಗಿರಿ ತಳವಾರ್, ಅಧ್ಯಕ್ಷ ಪ್ರೊ.ಸಿ.ಬಸವರಾಜು, ಉಪಾಧ್ಯಕ್ಷ ಪಿ.ನಂದಕುಮಾರ್, ಖಜಾಂಚಿ ಭರತ್ ರಾಮಸ್ವಾಮಿ, ಕಾರ್ಯದರ್ಶಿ ಡಾ. ಮುಳ್ಳೂರು ನಂಜುಂಡಸ್ವಾಮಿ, ಹೆಚ್.ಜಿ ರಮೇಶ್, ಒಡನಾಡಿ ಸಂಸ್ಥೆಯ ನಿರ್ದೇಶಕ ಸ್ಟ್ಯಾನ್ಲಿ–ಪರಶು, ಸಿ.ಜಿ ಶಿವಕುಮಾರ್, ಶಾಂತರಾಮ್ ಶೆಟ್ಟಿ,ಡಿ.ವೆಂಕಟರಾಜು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಸುತ್ತೂರು ಮಠದಲ್ಲಿ ಶ್ರಾವಣ ಮಾಸದ ವಿಶೇಷ ಉಪನ್ಯಾಸ

ಮೈಸೂರು, ಆ.6(ಎಸ್‌ಪಿಎನ್)– ಪ್ರತಿಯೊಬ್ಬರ ಅಂತರಂಗದಲ್ಲಿರುವ ಚೈತನ್ಯ ಮತ್ತು ಜ್ಞಾನ ಸ್ವರೂಪಗಳು ಚೇತನ ಜಂಗಮವಿದ್ದಂತೆ ಎಂದು ಪ್ರಾಧ್ಯಾಪಕ ಹೆಚ್.ಬಿ. ದೇವಣ್ಣ ತಿಳಿಸಿದರು.

ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ಸುತ್ತೂರು ಮಠದಲ್ಲಿ ಶ್ರಾವಣ ಮಾಸದ ಅಂಗವಾಗಿ 8ನೇ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಜಂಗಮ ಎಂದರೆ ಅನಂತವಾದುದು. ಶರಣರ ವಚನದಲ್ಲಿ ಜಂಗಮ ಎಂದರೆ ಶಿವಾನುಭವಿ, ಸಾಕಾರಗೊಂಡ ಶಿವಕಳೆ, ಶಿವಯೋಗಿ, ಶೂನ್ಯದಿಂದ ಹೊರ ಹೊಮ್ಮಿದ ಪರಶಿವ ಎಂಬರ್ಥವಿದೆ. ಜಂಗಮ ನಿಂದಿಸಿದಲ್ಲಿ ಕುಂದುವವನಲ್ಲ. ವಂದಿಸಿದಲ್ಲಿ ಆನಂದಮಯನಲ್ಲ. ಬಂದಲ್ಲಿ ನೀಡದಿದ್ದರೆ ಕ್ರೋಧನಲ್ಲ. ದೇಹ, ಪ್ರಾಣ ಮತ್ತು ಮನಸ್ಸಿನ ಧರ್ಮಗಳನ್ನು ಮೀರಿದವನು ಎಂಬರ್ಥ ಎಂದು ತಿಳಿಸಿದರು.

ಈ ವೇಳೆ ನಿವೃತ್ತ ಮುಖ್ಯೋಪಾಧ್ಯಾಯ ಎಸ್.ಎಂ.ನಾಗರಾಜ ಸ್ವಾಮಿ ಸೇವಾರ್ಥ ನೆರವೇರಿಸಿದರು. ನೆರೆದಿದ್ದ ಭಕ್ತರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಭಕ್ತಾದಿಗಳು ಮತ್ತು ಆಧ್ಯಾತ್ಮಿಕ ಜಿಜ್ಞಾಸುಗಳು ಪಾಲ್ಗೊಂಡಿದ್ದರು.

ಮೂಳೆ ಸಾಂದ್ರತೆ ತಪಾಸಣಾ ಶಿಬಿರ

ಮೈಸೂರು, ಆ. 6– ಮೈಸೂರಿನ ದಟ್ಟಗಳ್ಳಿಯಲ್ಲಿರುವ ನಯನಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಆ. 8 ರಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಮೂಳೆ ಸಾಂದ್ರತೆ ಮತ್ತು ಕೀಲು ನೋವಿಗೆ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9513310100, 9513310254 ಸಂಪರ್ಕಿಸಬಹುದು.

ಯಜುರ್ ಉಪಾಕರ್ಮ

ಮೈಸೂರು, ಆ. 6– ಮೈಸೂರಿನ ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ ಕೆ.ಆರ್. ವನಂ ವತಿಯಿಂದ ಆ. 11 ರಂದು ಬೆಳಗ್ಗೆ 7.30 ರಿಂದ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಯಜುರ್ ಉಪಾಕರ್ಮ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ. 9448872458, 6363643981 ಸಂಪರ್ಕಿಸಬಹುದು.

ಶಾಸಕರ ಸೂಚನೆಗೆ ಸೊಪ್ಪು ಹಾಕದ ಅರಣ್ಯಾಧಿಕಾರಿಗಳು

ಅರಣ್ಯ ಇಲಾಖೆಗೆ ಸೇರಿದ ಭೂಮಿ ರಕ್ಷಣೆ





ಎನ್.ಮಹೇಶ್

ನಾಗಮಂಗಲ, ಆ.6–ಅರಣ್ಯಾಧಿಕಾರಿಗಳ ದಂಡೇ ಇಂದು ತಾಲೂಕಿನ ಹಾಲತಿ ಗ್ರಾಮದ ಸರ್ವೆ ನಂ.135ಕ್ಕೆ ಲಗ್ಗೆ ಇಟ್ಟು, ತಮ್ಮ ಇಲಾಖೆಗೆ ಸೇರಿದ ಭೂಮಿಗೆ ಟ್ರಂಚ್ ತೋಡಿ ರಕ್ಷಿಸಿಕೊಂಡಿದೆ.

> ❝ ತಾಲೂಕಿನ ಹಾಲತಿ ಗ್ರಾಮದಲ್ಲಿ ವಿವಾದಿತ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದ ರೈತರ ಮನವೊಲಿಸಲಾಗಿದೆ. ಸರ್ವೆ ನಂ.135ರಲ್ಲಿ ಒಟ್ಟು 438 ಎಕರೆ ಭೂಮಿ ಇದ್ದು, ಅದರಲ್ಲಿ 374 ಎಕರೆ ಡೀಮ್ಡ್ ಫಾರೆಸ್ಟ್‌ಗೆ ಸೇರಿದೆ. ಉಳಿದ 64 ಎಕರೆ ಗೋಮಾಳವಾಗಿದ್ದು, ಜಂಟಿ ಸರ್ವೆ ನಡೆಸಿ ಅದನ್ನು ಗುರುತಿಸಲಾಗುವುದು. ಅಲ್ಲಿಯವರೆಗೂ ಯಾವುದೇ ರೈತರು ವಿವಾದಿತ ಪ್ರದೇಶಕ್ಕೆ ಹೋಗಬಾರದು ಎಂದು ಮನವೊಲಿಸಲಾಗಿದ್ದು, ಅದಕ್ಕೆ ರೈತರೂ ಕೂಡ ಒಪ್ಪಿದ್ದಾರೆ.
>
> - ನಂದೀಶ್, ನಾಗಮಂಗಲ ತಹಸೀಲ್ದಾರ್

ಸ್ವತಃ ಸಿಎಫ್‌ಓ ಡಾ. ಮಾಲತಿಪ್ರಿಯ ಅವರೇ ಸ್ಥಳಕ್ಕೆ ಆಗಮಿಸಿದ್ದರು. ಇವರ ನೇತೃತ್ವದಲ್ಲಿ ಮಂಡ್ಯ ಡಿಸಿಎಫ್ ರುಥ್ರನ್, ಎಸಿಎಫ್‌ಗಳಾದ ಶಂಕರೇಗೌಡ, ಶಶಿಧರ್ ಸೇರಿದಂತೆ ಅರಣ್ಯ ಇಲಾಖೆಯ 40ಕ್ಕೂ ಹೆಚ್ಚು ಸಿಬ್ಬಂದಿ ವಿವಾದಿತ ಜಾಗದಲ್ಲಿ ಜಮಾಯಿಸಿದರು. ನಾಗಮಂಗಲ ತಹಸೀಲ್ದಾರ್ ನಂದೀಶ್, ಸರ್ಕಲ್ ಇನ್ಸ್‌ಪೆಕ್ಟರ್ ಸುಧಾಕರ್ ಹಾಗೂ ರಕ್ಷಣೆಗಾಗಿ ಮೂರು ವ್ಯಾನ್‌ಗಳಲ್ಲಿ ಮೀಸಲು ಪಡೆ ಪೊಲೀಸರು ಆಗಮಿಸಿದ್ದರು.

ಅರಣ್ಯಾಧಿಕಾರಿಗಳ ತಂಡ ತಮ್ಮ ಜಾಗಕ್ಕೆ ಟ್ರಂಚ್ ತೋಡಲು ಆರಂಭಿಸಿದಾಗ ಮಹಿಳೆಯರನ್ನೊಳಗೊಂಡಂತೆ ಕೆಲವು ಗ್ರಾಮಸ್ಥರು ಜೆಸಿಬಿಗೆ ಅಡ್ಡಲಾಗಿ ಮಲಗಿ ಪ್ರತಿಭಟಿಸಿದರು. ತಹಸೀಲ್ದಾರ್ ನಂದೀಶ್ ಅವರು ಮನವೊಲಿಸಲು ಪ್ರಯತ್ನಿಸಿ ವಿಫಲರಾದಾಗ ಪೊಲೀಸರ ಮೂಲಕ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದರು. ಈ ವೇಳೆ ಜಂಟಿ ಸರ್ವೆ ಮಾಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದಾಗ, ಅದಕ್ಕೆ ತಹಸೀಲ್ದಾರ್ ಒಪ್ಪಿಗೆ ಸೂಚಿಸಿದ ನಂತರ ಪ್ರತಿಭಟನೆ ಹಿಂತೆಗೆದುಕೊಳ್ಳಲಾಯಿತು.

ಇದಕ್ಕೂ ಮುನ್ನ ಮಂಡ್ಯ ಅರಣ್ಯಾಧಿಕಾರಿಗಳ ಕಚೇರಿಗೆ ಸಿಎಫ್‌ಓ ಡಾ. ಮಾಲತಿಪ್ರಿಯ ಆಗಮಿಸಿದಾಗ ಅವರನ್ನು ಕರ್ನಾಟಕ ರಾಜ್ಯ ಉಪ ವಲಯ ಅರಣ್ಯಾಧಿಕಾರಿಗಳ ಸಂಘ ಹಾಗೂ ಕರ್ನಾಟಕ ರಾಜ್ಯ ಅರಣ್ಯ ರಕ್ಷಕರು ಮತ್ತು ವೀಕ್ಷಕರ ಸಂಘದ ಪದಾಧಿಕಾರಿಗಳು ಭೇಟಿ ಮಾಡಿದರು. ಹಾಲತಿ ಗ್ರಾಮದ ಸರ್ವೆ ನಂ.135 ರಲ್ಲಿನ ಭೂಮಿಯು ಡೀಮ್ಡ್ ಫಾರೆಸ್ಟ್ ಆಗಿದ್ದು, ಇದನ್ನು ಬೇರೆ ಯಾವುದೇ ಇಲಾಖೆಗೂ ವರ್ಗಾವಣೆ ಮಾಡಿಲ್ಲ. ಅದು ಅರಣ್ಯ ಪ್ರದೇಶವಾಗಿಯೇ ಉಳಿದಿದೆ. ಸುಪ್ರೀಂಕೋರ್ಟ್ ಆದೇಶದಂತೆ ಅರಣ್ಯ ರಕ್ಷಣೆ ನಮ್ಮ ಜವಾಬ್ದಾರಿಯಾಗಿದ್ದು, ಇದನ್ನು ಜನಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕು. ಜನಪ್ರತಿನಿಧಿಯಾಗಿರುವವರು ಅಧಿಕಾರಿಗಳಿಗೆ ಧಮ್ಕಿ ಹಾಕುವುದು, ಜನರನ್ನು ದಿಕ್ಕು ತಪ್ಪಿಸಿ ಪ್ರಚೋದಿಸುವುದು, ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಗುಂಡು ಹೊಡೆಯುವ ಹಾಗೂ ಬೆಂಕಿ ಹಚ್ಚುವ ಬೆದರಿಕೆ ಹಾಕುವುದಲ್ಲದೇ, ಬೆಂಕಿ ಹಚ್ಚುವಂತೆ ಜನರನ್ನು ಪ್ರಚೋದನೆ ಮಾಡಿದರೆ, ನಾವು ಕೆಲಸ ಮಾಡುವುದು ಹೇಗೆ? ಎಂದು ಪ್ರಶ್ನಿಸಿದರು.

ಇದೇ ವೇಳೆ ಸ್ಥಳದಲ್ಲಿದ್ದ ಎಸಿಎಫ್ ಶಂಕರೇಗೌಡರನ್ನು ಪದಾಧಿಕಾರಿಗಳು ತೀವ್ರ ತರಾಟೆಗೆ ತೆಗೆದುಕೊಂಡರು. ಅರಣ್ಯಾಧಿಕಾರಿಗಳಿಗೆ ಹಾಗೂ ಸಿಬ್ಬಂದಿಗೆ ಬೆದರಿಕೆ ಹಾಕುತ್ತಿರುವ ಶಾಸಕರನ್ನು ಅಣ್ಣಾ ಎಂದು ಅವರು ಸಂಭೋದಿಸಿದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಮಾಲತಿ ಪ್ರಿಯ ಅವರು ಎಲ್ಲರನ್ನೂ ಸಮಾಧಾನ ಪಡಿಸಿದರು. ನಂತರ ಸ್ಥಳಕ್ಕೆ ತೆರಳಿ ಒತ್ತುವರಿಯಾಗಿರುವ ಅರಣ್ಯ ಭೂಮಿಯನ್ನು ವಶಪಡಿಸಿಕೊಂಡು ಟ್ರಂಚ್ ತೋಡುವ ಕಾಮಗಾರಿ ಆರಂಭಿಸಲಾಯಿತು.

ಅರಣ್ಯಾಧಿಕಾರಿಗಳ ಮೇಲೆ ಹರಿಹಾಯ್ದ

ಶಾಸಕ ಸುರೇಶ್‌ಗೌಡ ಸೇರಿ 10 ಜನರ ಮೇಲೆ ಕೇಸ್

● ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

● ಇಲಾಖಾ ಮೇಲಧಿಕಾರಿಗಳ ಸೂಚನೆಯಂತೆ ಆರ್‌ಎಫ್‌ಓ ಸತೀಶ್‌ರಿಂದ ದೂರು



ನಾಗಮಂಗಲ, ಆ.6–ತಾಲೂಕಿನ ಹಾಲತಿ ಗ್ರಾಮದ ಸರ್ವೆ ನಂ.135ರಲ್ಲಿ ಅರಣ್ಯ ಪ್ರದೇಶಕ್ಕೆ ಸೇರಿದ ಜಾಗದ ಬಂದೋಬಸ್ತ್‌ಗಾಗಿ ಟ್ರಂಚ್ ತೋಡುತ್ತಿದ್ದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಮೇಲೆ ಹರಿಹಾಯ್ದ ಶಾಸಕ ಸುರೇಶ್‌ಗೌಡ ಸೇರಿ 10 ಮಂದಿ ವಿರುದ್ಧ ನಾಗಮಂಗಲ ಗ್ರಾಮಾಂತರ ಠಾಣೆಯಲ್ಲಿ ಭಾರತೀಯ ದಂಡ ಸಂಹಿತೆ 143, 504, 506, 353, 149ರಡಿ ಎಫ್‌ಐಆರ್ ದಾಖಲಾಗಿದೆ.

ನಾಗಮಂಗಲ ವಲಯ ಅರಣ್ಯಾಧಿಕಾರಿ (ಆರ್‌ಎಫ್‌ಓ) ಬಿ.ಸತೀಶ ಅವರು ಶುಕ್ರವಾರ ತಮ್ಮ ಹಿರಿಯ ಅಧಿಕಾರಿಗಳ ಜೊತೆ ಚರ್ಚೆ ನಡೆಸಿದ ನಂತರ ರಾತ್ರಿ 11.30ರಲ್ಲಿ ಠಾಣೆಗೆ ಆಗಮಿಸಿ, ಲಿಖಿತ ದೂರು ಸಲ್ಲಿಸಿದ್ದಾರೆ.

ನಾಗಮಂಗಲ ತಹಸೀಲ್ದಾರ್ ನಂದೀಶ್ ಅವರು ಜು.28ರಂದು ನೀಡಿದ ಮೌಖಿಕ ನಿರ್ದೇಶನದ ಮೇರೆಗೆ ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಅರಣ್ಯ ಪ್ರದೇಶವನ್ನು ರಕ್ಷಣೆ ಮಾಡುವ ಸಂಬಂಧ ಪಶು ನಿರೋಧಕ ಕಂದಕ (ಟ್ರಂಚ್) ತೆಗೆಸುವ ಸಲುವಾಗಿ ಆ.4ರಂದು ಅರಣ್ಯಾಧಿಕಾರಿಗಳು, ಸಿಬ್ಬಂದಿ, ಪೊಲೀಸ್ ತುಕಡಿಯೊಂದಿಗೆ ಹಾಲತಿ ಗ್ರಾಮದ ಸರ್ವೆ ನಂ.135ರಲ್ಲಿ ಕೆಲಸ ನಿರ್ವಹಿಸುತ್ತಿದ್ದ ವೇಳೆ ನಾಗಮಂಗಲ ಶಾಸಕ ಸುರೇಶ್‌ಗೌಡ ಅವರು ಸ್ಥಳಕ್ಕೆ ಬಂದು ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಎಸಿಎಫ್ ಶಂಕರೇಗೌಡ ಅವರಿಗೆ ಕರೆ ಮಾಡಿ, ಗೌರವಯುತವಾಗಿ ಹೇಳುತ್ತಿದ್ದೀನಿ, ಮರ್ಯಾದೆಯಿಂದ ಜಂಟಿ ಸರ್ವೆ ಆಗುವ ತನಕ ಇಲ್ಲಿಗೆ ಬಂದರೆ ಸರಿ ಇರುವುದಿಲ್ಲ. ಒಂದು ವೇಳೆ ನಿಮ್ಮ ಸಿಬ್ಬಂದಿ ಯಾರಾದರೂ ಬಂದರೆ ಜೀಪ್ ಸಮೇತ ಸುಟ್ಟು ಹಾಕಿ ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ ಎಂದು ಧಮ್ಕಿ ಹಾಕಿದ್ದಾರೆ. ಅಲ್ಲದೇ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಲು ಕುಮ್ಮಕ್ಕು ನೀಡುವುದರ ಜೊತೆಗೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವಿರುದ್ಧ ಗ್ರಾಮಸ್ಥರಿಗೆ ಪ್ರಚೋದನೆ ನೀಡುತ್ತಿದ್ದಾರೆ. ಸರ್ಕಾರ ಅರಣ್ಯ ಸಂಪತ್ತನ್ನು ರಕ್ಷಿಸಲು ನಮಗೆ ರಕ್ಷಣೆ ನೀಡಬೇಕು ಹಾಗೂ ಸರ್ಕಾರಿ ಕೆಲಸ ನಿರ್ವಹಿಸಲು ಅನುವು ಮಾಡಿ ಕೊಡಬೇಕು, ಶಾಸಕ ಸುರೇಶ್‌ಗೌಡ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರು ಸಲ್ಲಿಸಿರುವ ಆರ್‌ಎಫ್‌ಓ ಸತೀಶ ಅವರು ಅರಣ್ಯಾಧಿಕಾರಿಗಳ ವಿರುದ್ಧ ಶಾಸಕರು ಧಮ್ಕಿ ಹಾಕಿದ ವಿಡಿಯೋ ಚಿತ್ರೀಕರಣವಿರುವ ಸಿ.ಡಿ. ಮತ್ತು ಹಾಲತಿ ಗ್ರಾಮದ ಸರ್ವೆ ನಂ. 135ರಲ್ಲಿ ಇರುವ 374 ಎಕರೆ 32 ಗುಂಟೆ ಪ್ರದೇಶ ಡೀಮ್ಡ್ ಫಾರೆಸ್ಟ್ ಎಂದು ಘೋಷಿಸಿರುವ ದಾಖಲೆಯನ್ನು ಲಗತ್ತಿಸಿದ್ದಾರೆ.

ಈ ಸಂಬಂಧ ನಾಗಮಂಗಲ ಗ್ರಾಮಾಂತರ ಠಾಣಾ ಪೊಲೀಸರು ಶಾಸಕ ಸುರೇಶ್ ಗೌಡ ಹಾಗೂ ಅವರ ಬೆಂಬಲಿಗರಾದ ಹಾಲತಿ ಗ್ರಾಮದ ಪ್ರವೀಣ್, ರಾಜು, ಹರೀಶ್, ವೆಂಕಟಪ್ಪ, ತೀರ್ಥಪ್ರಸಾದ್, ರುದ್ರೇಶ್, ಲಕ್ಷ್ಮಣ, ಹೆಚ್.ಸಿ.ಗಿರೀಶ್ ಮತ್ತು ಪಾಪಣ್ಣ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಹಾಲತಿ ಗ್ರಾಮದ ಸರ್ವೆ ನು.135ರಲ್ಲಿ 374 ಎಕರೆ 32 ಗುಂಟೆ ಪ್ರದೇಶ ಅರಣ್ಯ ಇಲಾಖೆಗೆ ಸೇರಿದೆ ಎಂಬುದನ್ನು ಆರ್‌ಎಫ್‌ಓ ಸತೀಶ ಪೊಲೀಸರಿಗೆ ನೀಡಿದ ದೂರಿನಲ್ಲಿ ವಿವರಿಸಿದ್ದಾರೆ. 2016ರ ಮೇ 3ರಂದು ನಡೆದ ಜಿಲ್ಲಾ ಮಟ್ಟದ ಸಂಚಲನಾ ಸಮಿತಿಯಲ್ಲಿ ಈ ಪ್ರದೇಶವು ಹಾಲಿ ಅರಣ್ಯ ಇಲಾಖೆ ಅನುಭವದಲ್ಲಿರುವ ಬಗ್ಗೆ ನಮೂದಾಗಿದೆ. ಮಂಡ್ಯ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರು, ಮಂಡ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪಾಂಡವಪುರ ತಹಸೀಲ್ದಾರರು, ಪಾಂಡವಪುರ ಉಪ ವಿಭಾಗದ ವಲಯ ಅರಣ್ಯಾಧಿಕಾರಿಗಳು ಹಾಲತಿ ಗ್ರಾಮದಲ್ಲಿರುವ ಈ ಪ್ರದೇಶವು ಅರಣ್ಯ ಇಲಾಖೆ ಅನುಭವದಲ್ಲಿದೆ ಎಂಬ ಪಟ್ಟಿಗೆ ಸಹಿ ಮಾಡಿ ಸರ್ಕಾರದಿಂದ ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಲಾಗಿದೆ. ಈ ಸಂಬಂಧ 2022ರ ಮೇ 5ರಂದು ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗಿರುವ ಅರಣ್ಯ ಪ್ರದೇಶಗಳನ್ನು ಸಂರಕ್ಷಿಸಿ ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಡೀಮ್ಡ್ ಫಾರೆಸ್ಟ್ ಎಂದು ಅಧಿಸೂಚನೆ ಹೊರಡಿಸಲಾಗಿದೆ. ಅಲ್ಲದೇ ಈ ಪ್ರದೇಶದಲ್ಲಿ ಅರಣ್ಯ ಇಲಾಖೆ ಯೋಜನೆಯಡಿ 1985ರಲ್ಲಿ 50 ಹೆಕ್ಟೇರ್ ಮತ್ತು 2009ರಲ್ಲಿ 50 ಹೆಕ್ಟೇರ್ ಅರಣ್ಯ ನೆಡು ತೋಪನ್ನು ಇಲಾಖಾ ವತಿಯಿಂದ ನೆಟ್ಟು ಕಾಲ ಕಾಲಕ್ಕೆ ನಿರ್ವಹಣೆ ಮತ್ತು ರಕ್ಷಣೆ ಮಾಡಿಕೊಂಡು ಬರಲಾಗುತ್ತಿದೆ. ಈ ಸಂಬಂಧ ಅರಣ್ಯ ನಕ್ಷೆ ಮತ್ತು ಟ್ರಂಚ್ ತೋಡುವ ಕಾಮಗಾರಿ ನಡೆಸುವ ಮಾಹಿತಿಯನ್ನೂ ಕೂಡ ಲಗತ್ತಿಸಲಾಗಿದೆ. ಹಾಲತಿ ಗ್ರಾಮದ ಸರ್ವೆ ನಂ.135ರಲ್ಲಿರುವ ಈ ಪ್ರದೇಶವು ಅರಣ್ಯ ಇಲಾಖೆ ಹೊರತುಪಡಿಸಿ ಬೇರೆ ಯಾರೂ ಹಕ್ಕು ಹಾಗೂ ಸ್ವಾಧೀನ ಹೊಂದಿರುವುದಿಲ್ಲ ಎಂಬುದಕ್ಕೆ ದಾಖಲೆಗಳನ್ನು ನೀಡಿದ್ದಾರೆ.

ಮೈಸೂರಲ್ಲಿ ಹಲಸಿನ ಮೇಳ

ಹಲಸು ಸವಿಯುವವರಿಗೆ ಇದೊಂದೇ ದಿನ ಅವಕಾಶ



ನಾಳೆ (ಭಾನುವಾರ) ಮಧ್ಯಾಹ್ನ 12 ಗಂಟೆಗೆ ಹಲಸಿನ ಅಡುಗೆ ಸ್ಪರ್ಧೆ ಏರ್ಪಡಿಸಿದ್ದು, ಮನೆಯಲ್ಲೇ ಹಲಸಿನ ಹಣ್ಣು, ಕಾಯಿ ಮತ್ತು ಬೀಜದಿಂದ ತಯಾರಿಸಿದ ಯಾವುದೇ ಖಾದ್ಯವನ್ನು ಸ್ಪರ್ಧೆಗೆ ತರಬಹುದು. ಆಯ್ಕೆಯಾದ ಉತ್ತಮ ಅಡುಗೆಗೆ ಆಕರ್ಷಕ ಬಹುಮಾನ ನೀಡಲಾಗುವುದು. ಮಧ್ಯಾಹ್ನ 2 ಗಂಟೆಗೆ ಹಲಸಿನ ಹಣ್ಣು ತಿನ್ನುವ ಸ್ಪರ್ಧೆ ಏರ್ಪಡಿಸಿದ್ದು, ನಿಗದಿತ ಸಮಯದೊಳಗೆ ಹೆಚ್ಚು ಹಲಸಿನ ತೊಳೆ ತಿಂದವರು ವಿಜೇತರಾಗುತ್ತಾರೆ. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ಶಾಂತರಾಜು (9448774871) ಸಂಪರ್ಕಿಸಿ.



ಮೈಸೂರು, ಆ.6(ಆರ್‌ಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಇಂದಿನಿಂದ ಎರಡು ದಿನಗಳ 'ಹಲಸಿನ ಮೇಳ' ಆರಂಭವಾಗಿದೆ. ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗವು, ರೋಟರಿ ಮೈಸೂರು ವೆಸ್ಟ್ ಸಹಯೋಗದಲ್ಲಿ ಏರ್ಪಡಿಸಿರುವ ಈ ಮೇಳವನ್ನು ರೈತರಿಗೆ ವಿವಿಧ ತಳಿಗಳ ಹಲಸಿನ ಸಸಿಗಳನ್ನು ವಿತರಿಸುವ ಮೂಲಕ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಸ್.ವಿದ್ಯಾಶಂಕರ ಉದ್ಘಾಟಿಸಿದರು.

ಕೆಂಪು ಹಲಸಿನ ತಳಿಯ ಹಣ್ಣನ್ನು ಕೊಯ್ದು ತೊಳೆ ಬಿಡಿಸಿ ಹಂಚುವ ಮೂಲಕ ರಂಗಕರ್ಮಿ ಮತ್ತು ಚಿತ್ರನಟ ಮಂಡ್ಯ ರಮೇಶ್ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಿದರು. ರೋಟರಿ ಮೈಸೂರು ವೆಸ್ಟ್ ಅಧ್ಯಕ್ಷೆ ಉಲ್ಲಾಸ್ ಪಂಡಿತ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರುದ್ರೇಶ್, ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರ್ ವೆಸ್ಟ್ ಅಧ್ಯಕ್ಷೆ ರಶ್ಮೀಗೌಡ, ಬೆಳವಲ ಫೌಂಡೇಷನ್‌ನ ಸಂಯೋಜಕಿ ಮಂಜುಳಾ ರಾಮಕೃಷ್ಣ, ದೇವನಹಳ್ಳಿ ಕೃಷಿ ಪಂಡಿತ ಪುರಸ್ಕೃತ ಶಿವನಾಪುರದ ರಮೇಶ್, ಚನ್ನಪಟ್ಟಣದ ಪ್ರಗತಿ ಪರ ರೈತ ಗರಕೆಹಳ್ಳಿ ಕೃಷ್ಣೇಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸಹಜ ಸಮೃದ್ಧ ನಿರ್ದೇಶಕ ಜಿ. ಕೃಷ್ಣಪ್ರಸಾದ್, ಕಮ್ಯುನಿಟಿ ಸರ್ವೀಸ್ ನಿರ್ದೇಶಕಿ ಡಾ. ಸೋನಿಯಾ ಮಂದಪ್ಪ, ರೋಟರಿ ಮೈಸೂರ್ ವೆಸ್ಟ್ ಕಾರ್ಯದರ್ಶಿ ಬಿ.ಎಸ್.ಶ್ರೀನಾಥ್ ಹಾಗೂ ಇತರರು ಹಲಸಿನ ಹಣ್ಣು ಮತ್ತು ಅದರ ಉತ್ಪನ್ನಗಳ ಬಗ್ಗೆ ಜನರಿಗೆ ವಿವರಿಸುತ್ತಿದ್ದರು. ಹಲಸಿನ ಮೇಳದಲ್ಲಿ ವಿವಿಧ ಬಗೆಯ ಹಲಸಿನ ಹಣ್ಣುಗಳನ್ನು ಪ್ರದರ್ಶಿಸಲಾಗಿದ್ದು, ಆ ಪೈಕಿ ಕೆಂಪು ಹಲಸಿನ ಹಣ್ಣಿನ ತೊಳೆಗೆ ವಿಶೇಷ ಆಕರ್ಷಣೆ. ಹಲಸಿನ ಐಸ್ ಕ್ರೀಂ, ಚಿಪ್ಸ್, ಚಾಕೋಲೇಟ್, ಹಪ್ಪಳ, ಹಲ್ವ, ಕಬಾಬ್, ಹೋಳಿಗೆ, ವಡೆ, ದೋಸೆ, ಪಲ್ಯ, ಪಾಯಸ, ಪಲಾವ್ ಮುಂತಾದ ಹಲಸಿನ ಹಣ್ಣಿನಿಂದ ತಯಾರಿಸಿದ ತಿಂಡಿ ತಿನಿಸುಗಳು ಬಾಯಲ್ಲಿ ನೀರೂರಿಸುವಂತಿವೆ.

ಹಲಸಿನ ಬೀಜದ ಪೇಯ 'ಜಾಫಿ', ಹಲಸಿನ ರಾಯಭಾರಿ ಶ್ರೀಪಡ್ರೆ 'ಅಲಕ್ಷಿತ ಕಲ್ಪವೃಕ್ಷ ಹಲಸು' ಪುಸ್ತಕ ಹಾಗೂ ಹಲಸು ಹಚ್ಚುವ ಯಂತ್ರಗಳು ಮೇಳದಲ್ಲಿ ಗಮನ ಸೆಳೆಯುತ್ತಿವೆ. ಸಿಂಗಾಪೂರ ಹಲಸು, ಲಾಲ್‌ಬಾಗ್ ಮಧುರ, ನಾಗಚಂದ್ರ, ರಾಮಚಂದ್ರ, ಭೈರಸಂದ್ರ, ಅಂಟುರಹಿತ ಹಲಸು, ಜೇನು ಹಲಸು, ಸಿದ್ದು ಹಲಸು, ರುದ್ರಾಕ್ಷಿ ಬಕ್ಕೆ, ಸರ್ವ ಋತು ಹಲಸು ಸೇರಿದಂತೆ 30 ತಳಿಯ ಹಲಸಿನ ಗಿಡಗಳನ್ನು ಮಾರಾಟ ಮಾಡಲಾಗುತ್ತಿದೆ.

ತುಮಕೂರು ಜಿಲ್ಲೆ ಚೇಳೂರಿನ ಕೆಂಪು, ಬಿಳಿ ಮತ್ತು ಹಳದಿ ಬಣ್ಣದ ಹಲಸು, ಕೊಳ್ಳೇಗಾಲದ ಸರ್ವಋತು ಹಲಸು, ಮೈಸೂರಿನ ಬೆಳವಲ ತೋಟದ ರುದ್ರಾಕ್ಷಿ ಹಲಸು ಸೇರಿದಂತೆ ವಿವಿಧ ತಳಿಯ ಹಲಸಿನ ಹಣ್ಣಿನ ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತಿದೆ. ರಾಜ್ಯದ ವಿವಿಧ ಭಾಗಗಳಿಂದ ಬಂದಿರುವ ರೈತರು, ಮಹಿಳಾ ಗುಂಪುಗಳು ತಯಾರಿಸಿರುವ ಮೌಲ್ಯವರ್ಧಿತ ಪದಾರ್ಥಗಳಾದ ನುಗ್ಗೆ ಸೊಪ್ಪಿನ ಕಾಯಿ, ಬಿದಿರು ಕಳಲೆ, ದಂಟಿನ ಸೊಪ್ಪು, ಜವಾರಿ ಬೀಜ, ಸಿರಿಧಾನ್ಯ, ಕಾಳುಗಳು, ನೇರಳೆ, ವಾಟರ್ ಆಪಲ್, ಸೀಬೆ, ಪೀನಟ್ ಬಟರ್, ಕೆಂಪು ಸೀತಾಫಲ ಹಣ್ಣಿನ ಸಸಿಗಳು, ಸಿದ್ದಣ್ಣನವರ ಹೆಚ್‌ಎಂಟಿ, ರಾಜಮುಡಿ, ಬರ್ಮಾ ಬ್ಲಾಕ್, ಚಿನ್ನಪೊನ್ನಿ, ಗಂಧ ಸಾಲೆಯಂತಹ ದೇಸೀ ಭತ್ತ, ರಾಗಿ, ತರಕಾರಿಗಳನ್ನೂ ಮೇಳದಲ್ಲಿ ಪ್ರದರ್ಶಿಸಲಾಗಿದೆ.

ಹಲಸಿನ ಮೇಳಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದ್ದು, ಹಲಸು ಸವಿದು, ಉತ್ಪನ್ನಗಳನ್ನೂ ಮನೆಗೆ ಒಯ್ಯುತ್ತಿದ್ದಾರೆ. ಅದೇ ರೀತಿ ವಿವಿಧ ತಳಿಯ ಹಲಸಿನ ಗಿಡಗಳೂ ಮೇಳದಲ್ಲಿ ಭರ್ಜರಿಯಾಗಿ ಮಾರಾಟವಾಗುತ್ತಿರುವುದು ಮೊದಲ ದಿನವಾದ ಶನಿವಾರ ಕಂಡು ಬಂದಿತು.

ಸಮುದಾಯದ ಶ್ರೇಯೋಭಿವೃದ್ಧಿಗೆ ವಿವಿಧ ಬೇಡಿಕೆಗಳನ್ನು ಸರ್ಕಾರದ ಮುಂದಿಡಲು

ಇಂದು ಆದಿದ್ರಾವಿಡ ಸಮಾಜದ ಸಮಾವೇಶ

ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರಿಂದ ಸಮಾವೇಶ ಉದ್ಘಾಟನೆ



ಮೈಸೂರು,ಆ.6(ಪಿಎಂ)– ಆದಿದ್ರಾವಿಡ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಸರ್ಕಾರವನ್ನು ಆಗ್ರಹಿಸುವ ಸಲುವಾಗಿ ಅಖಿಲ ಕರ್ನಾಟಕ ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ ಪೌರಕಾರ್ಮಿಕರ ಜನಾಂಗದ ಅಭಿವೃದ್ಧಿ ಟ್ರಸ್ಟ್ ಮತ್ತು ಕರ್ನಾಟಕ ರಾಜ್ಯ ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ ಪೌರಕಾರ್ಮಿಕರ ಯುವಕರ ಅಭಿವೃದ್ಧಿ ಮಹಾಸಂಘದ ಜಂಟಿ ಆಶ್ರಯದಲ್ಲಿ ಆ.7ರಂದು ಆದಿದ್ರಾವಿಡ ಸಮಾಜದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ರಾಜ್ಯಾಧ್ಯಕ್ಷ ಬಿ.ಎಸ್.ಸುಬ್ರಮಣ್ಯ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತದ ಮೂಲನಿವಾಸಿಗಳಾದ ಆದಿದ್ರಾವಿಡ ಸಮುದಾಯ ಇಂದು ಸರ್ಕಾರದ ಸವಲತ್ತುಗಳಿಗಾಗಿ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳ ನಡುವೆ ಪೈಪೋಟಿ ನಡೆಸಲಾಗದೇ ಹಿಂದುಳಿಯುವಂತಾಗಿದೆ. ಹೀಗಾಗಿ ನಮ್ಮ ಸಮುದಾಯ ಮುಖ್ಯವಾಹಿನಿಗೆ ಬರಲು ಸರ್ಕಾರ ವಿಶೇಷ ಆದ್ಯತೆ ನೀಡಬೇಕಿದೆ. ಈ ನಿಟ್ಟಿನಲ್ಲಿ 10 ಅಂಶಗಳ ಬೇಡಿಕೆ ಮುಂದಿಟ್ಟುಕೊಂಡು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದರು.

ಮೈಸೂರಿನ ಮುಕ್ತ ಗಂಗೋತ್ರಿಯ ಮುಕ್ತ ವಿವಿಯ ಘಟಿಕೋತ್ಸವ ಭವನದಲ್ಲಿ ಭಾನುವಾರ ಬೆಳಗ್ಗೆ 11.30ಕ್ಕೆ ಸಮಾವೇಶ ನಡೆಯಲಿದ್ದು, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಸಮಾವೇಶ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ವಸತಿ ಸಚಿವ ವಿ.ಸೋಮಣ್ಣ ರಾಜ್ಯ ಸ್ಥಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಉಪಸ್ಥಿತರಿರಲಿದ್ದಾರೆ ಎಂದರು.

ಸಂಸದರಾದ ವಿ.ಶ್ರೀನಿವಾಸಪ್ರಸಾದ್, ಪ್ರತಾಪ್ ಸಿಂಹ, ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ರಾಜ್ಯಸಭಾ ಮಾಜಿ ಸದಸ್ಯ ಕೆ.ಬಿ.ಕೃಷ್ಣಮೂರ್ತಿ, ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ, ಶಾಸಕರಾದ ಎಸ್.ಎ.ರಾಮದಾಸ್, ಬಾಲಚಂದ್ರ ಜಾರಕಿಹೊಳಿ, ಎನ್.ಮಹೇಶ್, ಎಲ್.ನಾಗೇಂದ್ರ, ಮಾಜಿ ಸಚಿವ ಹೆಚ್.ಆಂಜನೇಯ, ಪರಿಷತ್ ಸದಸ್ಯರಾದ ಎ.ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಾಜಿ ಸಂಸದ ಆರ್.ಧ್ರುವನಾರಾಯಣ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ತಮಿಳುನಾಡಿನ ಈರೋಡ್ ಜಿಲ್ಲೆಯ ಭವಾನಿಸಾಗರ ಕ್ಷೇತ್ರದ ಶಾಸಕ ಬನ್ನಾರಿ, ಮಾಜಿ ಮೇಯರ್ ಪುರುಷೋತ್ತಮ್, ಪಾಲಿಕೆ ಸದಸ್ಯರಾದ ಶಾಂತಮ್ಮ ವಡಿವೇಲು, ಭಾಗ್ಯ ಮಾದೇಶ್, ಹುಣಸೂರು ನಗರಸಭಾ ಸದಸ್ಯೆ ರಾಣಿ ಪೆರುಮಾಳ್, ನಂಜನಗೂಡು ನಗರಸಭಾ ಸದಸ್ಯರಾದ ಗಾಯಿತ್ರಿ ಮುರುಗೇಶ್, ಪಿ.ದೇವ, ಕೆಆರ್ ನಗರ ಪುರಸಭಾ ಸದಸ್ಯ ಶಂಕರ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಮಾವೇಶಕ್ಕೂ ಮುನ್ನ ಬೆಳಗ್ಗೆ 10.30ಕ್ಕೆ ಪುರಭವನ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಪುಷ್ಪ ನಮನ ಸಲ್ಲಿಸಲಿದ್ದಾರೆ. ಬಳಿಕ ಅಲ್ಲಿಂದ ಬೈಕ್ ರ್ಯಾಲಿ ಮೂಲಕ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಬಾಬು ಜಗಜೀವನರಾಮ್ ವೃತ್ತಕ್ಕೆ (ರೈಲ್ವೆ ನಿಲ್ದಾಣ ವೃತ್ತ) ತೆರಳಿ, ಅಲ್ಲಿರುವ ಜಗಜೀವನರಾಮ್ ಅವರ ಪ್ರತಿಮೆಗೂ ಪುಷ್ಪ ನಮನ ಸಲ್ಲಿಸಲಾಗುವುದು. ನಂತರ ಜೆಎಲ್‌ಬಿ ರಸ್ತೆ, ಹುಣಸೂರು ರಸ್ತೆ ಮೂಲಕ ರ್ಯಾಲಿಯು ಮುಕ್ತ ವಿವಿ ಘಟಿಕೋತ್ಸವ ಭವನದ ಬಳಿಗೆ ತೆರಳಿ ಅಂತ್ಯಗೊಳ್ಳಲಿದೆ ಎಂದರು.

ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ, ಕೊಡಗು ಮತ್ತು ರಾಮನಗರ ಜಿಲ್ಲೆಗಳಿಂದ 5 ಸಾವಿರ ಮಂದಿ ಸಮಾಜದ ಬಾಂಧವರು ಸಮಾವೇಶದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಈ 6 ಜಿಲ್ಲೆಗಳಲ್ಲಿ ನಮ್ಮ ಸಮುದಾಯದ ಬಹುಪಾಲು ಕುಟುಂಬಗಳು ಪೌರಕಾರ್ಮಿಕ ವೃತ್ತಿಯನ್ನೇ ಅವಲಂಬಿಸಿವೆ ಎಂದು ತಿಳಿಸಿದರು. ಟ್ರಸ್ಟ್ ಕಾರ್ಯಾಧ್ಯಕ್ಷ ವಿ.ರಾಜು, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಸುರೇಶ್ ಕುಮಾರ್, ಉಪಾಧ್ಯಕ್ಷರಾದ ಜಿ.ಮಹದೇವ, ಶಂಕರ್ ಬಾಬು, ನಗರಾಧ್ಯಕ್ಷ ಶಿವ, ನಗರ ಕಾರ್ಯಾಧ್ಯಕ್ಷ ಸಿ.ಆರ್.ವಿಜಯ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪ್ರಮುಖ ಬೇಡಿಕೆಗಳು

ಸದಾಶಿವ ಆಯೋಗದ ವರದಿ ಅಂಗೀಕರಿಸಿ ಒಳಮೀಸಲಾತಿ ಜಾರಿ ಮೂಲಕ ಆದಿದ್ರಾವಿಡ ಪೌರಕಾರ್ಮಿಕರ ಅವಲಂಬಿತರಿಗೆ ತಮಿಳುನಾಡು ಮಾದರಿ ಒಳಮೀಸಲಾತಿ ನೀಡಬೇಕು. ಆದಿದ್ರಾವಿಡ ಸಮಾಜಕ್ಕೆ ನಾಮನಿರ್ದೇಶಿತ ವಿಧಾನಪರಿಷತ್ ಸ್ಥಾನ ಕಲ್ಪಿಸಬೇಕು. ಜಿಲ್ಲಾ ಕೇಂದ್ರಗಳಲ್ಲಿ ಆದಿದ್ರಾವಿಡ ಜನಾಂಗಕ್ಕೆ ಸಮುದಾಯ ಭವನ ನಿರ್ಮಿಸಲು ಸಿಎ ನಿವೇಶನ ಒದಗಿಸಬೇಕು. ರಾಜ್ಯದ ಮಹಾನಗರ ಪಾಲಿಕೆ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರ ಪಾವತಿ ಪೌರಕಾರ್ಮಿಕರು, ಒಳಚರಂಡಿ ಸಹಾಯಕರು, ತ್ಯಾಜ್ಯ ವಾಹನ ಚಾಲಕರು, ಲೋಡರ್ಸ್ ಮತ್ತು ಕ್ಲೀನರ್ಸ್‌ಗಳನ್ನು ಖಾಯಂ ಮಾಡಬೇಕು. ಐಪಿಡಿ ಸಾಲಪ್ಪನವರ ವರದಿ ಜಾರಿಗೊಳಿಸಿ ಜನಸಂಖ್ಯೆಗೆ ಅನುಗುಣವಾಗಿ 500 ಜನರಿಗೆ ಒಬ್ಬರಂತೆ ಪೌರಕಾರ್ಮಿಕರನ್ನು ನಿಯೋಜಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಸರ್ಕಾರದ ಮುಂದಿಡಲು ಸಮಾವೇಶ ಹಮ್ಮಿಕೊಳ್ಳಲಾಗಿದೆ.



ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಡಿಸಿಎಂ ಡಾ.ಜಿ.ಪರಮೇಶ್ವರ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಮಾಜಿ ಸಂಸದ ಆರ್.ಧ್ರುವನಾರಾಯಣ, ಕೆಪಿಸಿಸಿ ಕಾರ್ಯದರ್ಶಿ ಕಾವೇರಿಯಪ್ಪ, ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ಇನ್ನಿತರರು ಅಭಿನಂದಿಸಿ, ಶುಭಾಶಯ ಕೋರಿದರು.

ಅತ್ಯಾಧುನಿಕ ಲ್ಯಾಪರೊಸ್ಕೋಪಿಕ್ ಯೂರೋಲಾಜಿಕಲ್ ಶಸ್ತ್ರಚಿಕಿತ್ಸೆ ವಿಧಾನ ಬಳಸಿ

ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ತಜ್ಞ ವೈದ್ಯರ ತಂಡದಿಂದ ಯಶಸ್ವಿ ಶಸ್ತ್ರಚಿಕಿತ್ಸೆ



ಆಸ್ಪತ್ರೆ ಕ್ಲಿನಿಕಲ್ ನಿರ್ದೇಶಕ ಡಾ. ಎಂ.ಎನ್.ರವಿ

ಮೈಸೂರು,ಆ.6(ಪಿಎಂ)– ಅತ್ಯಾಧುನಿಕ ಲ್ಯಾಪರೊಸ್ಕೋಪಿಕ್ ಯೂರೋಲಾಜಿಕಲ್ ಶಸ್ತ್ರಚಿಕಿತ್ಸಾ ತಂತ್ರಜ್ಞಾನವನ್ನು ಅತ್ಯಂತ ಕೌಶಲ್ಯಾಧಾರಿತವಾಗಿ ಬಳಸಿಕೊಂಡು ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ತಜ್ಞವೈದ್ಯರ ತಂಡ ಇಬ್ಬರು ಕಿಡ್ನಿ ಸಮಸ್ಯೆಯ ರೋಗಿಗಳನ್ನು ರಕ್ಷಿಸಿದೆ ಎಂದು ಆಸ್ಪತ್ರೆಯ ಕ್ಲಿನಿಕಲ್ ನಿರ್ದೇಶಕ ಡಾ.ಎಂ.ಎನ್.ರವಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲ್ಯಾಪರೊಸ್ಕೋಪಿಕ್ ಯೂರೋಲಾಜಿಕಲ್ ಶಸ್ತ್ರಚಿಕಿತ್ಸೆ ವಿಧಾನವನ್ನು ನಮ್ಮ ವೈದ್ಯರ ತಂಡ ಅತ್ಯಂತ ಸೂಕ್ಷ್ಮ ಮತ್ತು ಜಾಣ್ಮೆಯಿಂದ ಬಳಸಿಕೊಂಡು ಇಬ್ಬರನ್ನು ರಕ್ಷಿಸಿದೆ. ಮೈಸೂರು ಭಾಗದಲ್ಲಿ ಈ ರೀತಿಯ ಶಸ್ತ್ರಚಿಕಿತ್ಸೆ ನಮ್ಮಲ್ಲಿ ಪ್ರಥಮ ಎಂದು ಹೇಳಬಹುದು ಎಂದರು.

ಮಂಡ್ಯ ಜಿಲ್ಲೆಯ ದಂಪತಿಯ ಮೂರು ತಿಂಗಳ ಗಂಡು ಮಗುವಿನ ಎರಡೂ ಕಿಡ್ನಿಗಳಲ್ಲಿ ಬ್ಲಾಕೇಜ್ ಇರುವುದು ಕಂಡು ಬಂದಿತು. ನಮ್ಮ ಆಸ್ಪತ್ರೆಯ ಕನ್ಸಲ್ಟೆಂಟ್ ಯೂರಾಲಜಿಸ್ಟ್ ಡಾ.ಎಸ್.ನಾಗೇಶ್ ನೇತೃತ್ವದ ವೈದ್ಯರ ತಂಡ ಬಲಭಾಗದ ಮೂತ್ರಪಿಂಡಕ್ಕೆ ಲ್ಯಾಪರೋಸ್ಕೋಪಿಕ್ ಪೈಲೋಪ್ಲಾಸ್ಟಿ ಅನ್ನು ಮೂರು ಗಂಟೆಗಳ ಕಾಲ ಸತತ ಪರಿಶ್ರಮದಿಂದ ಯಶಸ್ವಿಯಾಗಿ ನಡೆಸಿತು. 3ರಿಂದ 4 ತಿಂಗಳ ನಂತರ ಎಡಭಾಗದ ಮೂತ್ರಪಿಂಡಕ್ಕೆ ಶಸ್ತ್ರಚಿಕಿತ್ಸೆ ನಡೆಸಲಾಗುತ್ತದೆ. ಮೈಸೂರು ಭಾಗದಲ್ಲಿ ಲ್ಯಾಪರೋಸ್ಕೋಪಿಕ್ ಪೈಲೋಪ್ಲಾಸ್ಟಿ ಪ್ರಕ್ರಿಯೆಗೆ ಒಳಗಾದ ಅತ್ಯಂತ ಕಿರಿಯ ಮಗು ಇದಾಗಿದೆ ಎಂದರು.

ಮತ್ತೊಂದು ಪ್ರಕರಣದಲ್ಲಿ ಮೈಸೂರಿನ 50 ವರ್ಷದ ಪುರುಷರೊಬ್ಬರು ತಮ್ಮ ಹೊಟ್ಟೆಯ ಬಲ ಭಾಗದಲ್ಲಿ ನೋವಿನಿಂದ ಬಳಲುತ್ತಿದ್ದ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ದಾಖಲಾದರು. ಅವರ ಬಲ ಮೂತ್ರಪಿಂಡದಲ್ಲಿ ದೊಡ್ಡ ಕ್ಯಾನ್ಸರ್ ಗೆಡ್ಡೆಯು ಬೆಳೆದಿರುವುದು ಪತ್ತೆಯಾಯಿತು. ಜೊತೆಗೆ ಅದು ಹೊಟ್ಟೆಯೊಳಗಿನ ದೊಡ್ಡ ರಕ್ತನಾಳಕ್ಕೆ ಹರಡುತ್ತಿರುವುದು ಕಂಡು ಬಂದಿತು. ಹಾಗಾಗಿ ಇವರಿಗೆ ಐವಿಸಿ (ಇನ್ ಫೀರಿಯರ್ ವೆನಾ ಕಾವಾ) ಥ್ರೊಂಬೆಕ್ಟಮಿಯೊಂದಿಗೆ ಲ್ಯಾಪರೋಸ್ಕೋಪಿಕ್ ರೈಟ್ ರಾಡಿಕಲ್ ನೆಫ್ರೆಕ್ಟಮಿ ವಿಧಾನವು ಅತ್ಯಂತ ಸೂಕ್ತ ಎಂದು ನಮ್ಮ ವೈದ್ಯರ ತಂಡ ನಿರ್ಧರಿಸಿತು. ಅಂತೆಯೇ 5 ಗಂಟೆಗಳ ಪರಿಶ್ರಮದಿಂದ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ, ಮೂರು ದಿನಗಳಲ್ಲಿ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು ಎಂದು ವಿವರಿಸಿದರು.

ನಮ್ಮ ಆಸ್ಪತ್ರೆಯಲ್ಲಿ ಹಿರಿಯ ಶಸ್ತ್ರಚಿಕಿತ್ಸಕರು ಮತ್ತು ಅರವಳಿಕೆ ತಜ್ಞರ ಅನುಭವಿ ತಂಡವು ಅತ್ಯುತ್ತಮವಾಗಿ ಸಂಕೀರ್ಣವಾದ ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯನ್ನು ನಿರ್ವಹಿಸುವಲ್ಲಿ ಪರಿಣಿತಿ ಹೊಂದಿದೆ. ಈ ಇಬ್ಬರು ರೋಗಿಗಳ ಶಸ್ತ್ರಚಿಕಿತ್ಸೆಯನ್ನು ಸರ್ಕಾರದ ಆಯುಷ್ಮಾನ್ ಭಾರತ್ ಯೋಜನೆಯಡಿ ಉಚಿತವಾಗಿ ನಡೆಸಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಆಸ್ಪತ್ರೆ ಕನ್ಸಲ್ಟೆಂಟ್ ಯೂರಾಲಜಿಸ್ಟ್ ಡಾ. ಎಸ್.ನಾಗೇಶ್ ಮಾತನಾಡಿ, ಇಂತಹ ಸಂಕೀರ್ಣ ಸಮಸ್ಯೆಗಳಿಗೆ ಪ್ರಮುಖ ನಗರಗಳಲ್ಲಿ ರೋಬೋಟಿಕ್ ಸಹಾಯದಿಂದ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಪ್ರಸ್ತುತ ರೋಬೋಟಿಕ್ ಸೌಲಭ್ಯ ಮೈಸೂರಿನಲ್ಲಿ ಲಭ್ಯವಿಲ್ಲದ ಕಾರಣ, ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸೆ ಅತ್ಯುತ್ತಮ ಪರ್ಯಾಯವಾಗಿದೆ. ದೇಹವನ್ನು ಉದ್ದವಾಗಿ ಕತ್ತರಿಸುವಿಕೆಯನ್ನು ಈ ವಿಧಾನದಿಂದ ತಪ್ಪಿಸಬಹುದು ಎಂದು ತಿಳಿಸಿದರು. ಆಸ್ಪತ್ರೆ ವೈದ್ಯ ಡಾ.ಪ್ರಸನ್ನ, ಮಾರ್ಕೆಟಿಂಗ್‌ನ ಪ್ರಧಾನ ವ್ಯವಸ್ಥಾಪಕ ಕೆ.ವಿ.ಕಾಮತ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಾಳೆ ಸಂಸ್ಕೃತ ಸಪ್ತಾಹಕ್ಕೆ ಚಾಲನೆ

ಆ.9ರಿಂದ 15ರವರೆಗೆ ಸಂಸ್ಕೃತ ವಿಷಯಗಳ ಕುರಿತು ಕನ್ನಡದಲ್ಲಿ ಪ್ರವಚನ



ಮೈಸೂರು,ಆ.6(ಪಿಎಂ)–ಸಂಸ್ಕೃತ ಭಾರತೀ ಸೇವಾ ಸಂಸ್ಥೆಯ ಮೈಸೂರು ವಿಭಾಗದ ವತಿಯಿಂದ ಆ.8ರಂದು ಸಂಸ್ಕೃತ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು ಎಂದು ಸಂಸ್ಥೆಯ ಕರ್ನಾಟಕ ದಕ್ಷಿಣ ಪ್ರಾಂತದ ಅಧ್ಯಕ್ಷ ಟಿ.ಎನ್.ಪ್ರಭಾಕರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸ್ಕೃತ ಭಾಷೆಯ ಅಧ್ಯಯನ ಮತ್ತು ಪ್ರಚಾರಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಕೃತ ಭಾರತೀ, ಭಾರತದಲ್ಲಿ ಮಾತ್ರವಲ್ಲದೆ, 20 ವಿವಿಧ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಮೈಸೂರಿನ ಸರಸ್ವತಿಪುರಂನ ವಿಜಯ ವಿಠ್ಠಲ ವಿದ್ಯಾಶಾಲೆಯ ಆವರಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಸಂಸ್ಕೃತ ಸಪ್ತಾಹದ ಉದ್ಘಾಟನಾ ಸಮಾರಂಭ ಹಾಗೂ ಕನ್ನಡ ಮತ್ತು ಸಂಸ್ಕೃತ ಗ್ರಂಥಗಳ ಪ್ರದರ್ಶನ ಮತ್ತು ಮಾರಾಟ ಸಹ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತ ಕುಮಾರ್ ಸಪ್ತಾಹ ಉದ್ಘಾಟಿಸಲಿದ್ದು, ಸಂಸ್ಕೃತ ಭಾರತೀ ಮೈಸೂರು ಘಟಕದ ಅಧ್ಯಕ್ಷ ಧೀರೇಂದ್ರ ಕುಮಾರ್ ಮೆಹತಾ ಅಧ್ಯಕ್ಷತೆ ವಹಿಸಲಿದ್ದಾರೆ. ವಿಜಯವಿಠ್ಠಲ ವಿದ್ಯಾಸಂಸ್ಥೆ ಕಾರ್ಯದರ್ಶಿ ಆರ್.ವಾಸುದೇವಭಟ್, ವಿಜಯವಿಠ್ಠಲ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ವಿಜಯ ವಿಠ್ಠಲ ವಿದ್ಯಾಶಾಲೆಯ ಪ್ರಾಂಶುಪಾಲರಾದ ಬಿ.ಆರ್.ಮಂಗಳಾ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಸಂಸ್ಕೃತ ಭಾರತೀ ಮೈಸೂರು ವಿಭಾಗದ ಕೋಶ ಪ್ರಮುಖ್ ಸುಬ್ರಹ್ಮಣ್ಯ, ನಗರ ಸಂಯೋಜಕ ಕೆ.ಉಮಾ ಗಣೇಶದತ್ತ ಗೋಷ್ಠಿಯಲ್ಲಿದ್ದರು.

ಆ.9ರಿಂದ 15ರವರೆಗೆ ಸರಸ್ವತಿಪುರಂನ 8ನೇ ಮುಖ್ಯರಸ್ತೆಯ ವಿಶ್ವಂ ಸಭಾಂಗಣದಲ್ಲಿ ಪ್ರತಿದಿನ 5.50ಕ್ಕೆ ಸಂಸ್ಕೃತ ಮಂತ್ರಗಳ ಪಠಣ ಮತ್ತು ಸಂಸ್ಕೃತದ ವಿವಿಧ ವಿಷಯಗಳ ಕನ್ನಡ ಪ್ರವಚನ ಕಾರ್ಯಕ್ರಮ ನಡೆಯಲಿದೆ. ಅಂತೆಯೇ ಆ.9ರಂದು ಋಗ್ವೇದ ಮಂತ್ರ ಪಠಣ ಮತ್ತು 'ಕಾವ್ಯಶಾಸ್ತ್ರ ವಿನೋದ' ಕುರಿತು ಡಾ.ಹೆಚ್.ವಿ.ನಾಗರಾಜರಾವ್ ಪ್ರವಚನ ನೀಡಲಿದ್ದಾರೆ. ಆ.10ರಂದು ಶುಕ್ಲ ಯಜುರ್ವೇದ ಮಂತ್ರ ಪಠಣ ಮತ್ತು 'ಬ್ರಹ್ಮವಾದಿನಿಯರು' ಕುರಿತು ಸೌದಾಮಿನೀ ಅವರಿಂದ ಪ್ರವಚನ, ಆ.11ರಂದು ಕೃಷ್ಣ ಯಜುರ್ವೇದ ಮಂತ್ರ ಪಠಣ ಹಾಗೂ 'ದೈನಂದಿನ ಜೀವನದಲ್ಲಿ ಸಂಸ್ಕೃತ' ಕುರಿತು ಡಾ.ಎನ್.ರುಕ್ಮಾಂಗದ ಅವರಿಂದ ಪ್ರವಚನ, ಆ.12ರಂದು ಸಾಮವೇದ ಮಂತ್ರ ಪಠಣ ಹಾಗೂ 'ರಘುವಂಶದ ಮೊದಲ ಸರ್ಗ, ರಾಮಾಯಣದಲ್ಲಿ ನಿರ್ವಹಣೆಯ ಕಲೆ' ಕುರಿತು ಡಾ.ಆರ್.ಸುರೇಶ ಮತ್ತು ವಿವೇಕ ಅವರಿಂದ ಪ್ರವಚನ, ಆ.13ರಂದು ಅಥರ್ವಣ ವೇದ ಮಂತ್ರ ಪಠಣ ಹಾಗೂ 'ಸಮಾಜದಲ್ಲಿ ಮೀಮಾಂಸಾ ನ್ಯಾಯಗಳು, ಲೀಲಾವತೀ ಗಣಿತ' ಕುರಿತು ಕೃಷ್ಣಭಟ್ಟ ಹಾಗೂ ಡಾ.ಜಯರಾಮ ಭಟ್ಟ ಅವರಿಂದ ಪ್ರವಚನ ನಡೆಯಲಿದೆ. ಆ.14ರಂದು ಉಪನಿಷತ್ ಮಂತ್ರ ಪಠಣ ಹಾಗೂ 'ಬ್ಯಾಟಲ್ ಆಫ್ ಸ್ಯಾನ್‌ಕ್ರೀಟ್' ಪುಸ್ತಕ ಪರಿಚಯ, ಪಾಣಿನೀಯ ಶೋಧ ಸಂಸ್ಥಾನದ ಅನುಭವ ಕಥನ ಕುರಿತು ಡಾ.ಅನಂತ ಪದ್ಮನಾಭ, ಮಹಿಶ್ರೀ ಮತ್ತು ವರ್ಧಿನಿ ಅವರಿಂದ ಪ್ರವಚನ, ಆ.15ರಂದು ಸಂಗೀತ ಮತ್ತು ನೃತ್ಯ, 'ಸಂಸ್ಕೃತ ಸ್ವಾತಂತ್ರ್ಯ ಯೋಧರು' ಕುರಿತು ಡಾ.ಟಿ.ಎನ್.ಪ್ರಭಾಕರ ಅವರಿಂದ ಪ್ರವಚನ ನಡೆಯಲಿದೆ. ಜೊತೆಗೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ ಸಂಸ್ಥೆಯ ಕರೆ ಮೇರೆಗೆ ಮೈಸೂರಿನ 75 ಶಿಕ್ಷಣ ಸಂಸ್ಥೆಗಳಲ್ಲಿ ಸಂಸ್ಕೃತ ಸಪ್ತಾಹ ಆಚರಿಸಲಾಗುತ್ತಿದೆ.

ಪರೀಕ್ಷಾ ಕೇಂದ್ರಗಳ ಸುತ್ತ ಇಂದು ನಿಷೇಧಾಜ್ಞೆ

ಮೈಸೂರು,ಆ.6(ಎಸ್‌ಪಿಎನ್)–ಮೈಸೂರು ನಗರದ 36 ಪರೀಕ್ಷಾ ಕೇಂದ್ರಗಳಲ್ಲಿ ಬೆಂಗಳೂರಿನ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದಲ್ಲಿ ಖಾಲಿ ಇರುವ ಕಿರಿಯ ಸಹಾಯಕ ಹುದ್ದೆಗಳ ನೇಮಕಾತಿ ಸಂಬಂಧ ಸ್ಪರ್ಧಾತ್ಮಕ ಹಾಗೂ ವಿವಿಧ ಹುದ್ದೆಗಳ ಕನ್ನಡ ಭಾಷಾ ಪರೀಕ್ಷೆ ಭಾನುವಾರ(ಆ.7) ನಡೆಯಲಿದ್ದು, ಈ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 6ರಿಂದ ಸಂಜೆ 6 ಗಂಟೆಯವರೆಗೆ ಕಲಂ 144 ಸಿಆರ್‌ಪಿಸಿ ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ. ಈ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶ ನಿಷೇಧಿಸಲಾಗಿದ್ದು, ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್ ಅಂಗಡಿಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದಾರೆ.


ಚಂದ್ರಕಲಾಗೆ ಪಿಹೆಚ್.ಡಿ



ಮೈಸೂರು, ಆ.6–ಡಾ.ನಾಮದೇವಗೌಡರ ಮಾರ್ಗದರ್ಶನದಲ್ಲಿ ಹಿಂದಿ ವಿಷಯದಲ್ಲಿ ಸಿ.ಚಂದ್ರಕಲಾ ಹಿಂದಿ ವಿಷಯದಲ್ಲಿ ಮಂಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.


ಕರಾಟೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ

ಮೈಸೂರು,ಆ.6(ಎಸ್‌ಪಿಎನ್)– ಜಿಲ್ಲಾ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ 30 ಕೆಜಿಯೊಳಗಿನ ಬಾಲಕರ ವಿಭಾಗದಲ್ಲಿ ಲೋಹಿತ್‌ಕುಮಾರ್ ಪ್ರಥಮ ಸ್ಥಾನಗಳಿಸಿ ಸೆಪ್ಟಂಬರ್‌ನಲ್ಲಿ ಮಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಕರಾಟೆ ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.



ಜು.29ರಂದು ಮೈಸೂರು ಸಿದ್ಧಾರ್ಥ ಬಡಾವಣೆಯ ಗುರು ಭವನದಲ್ಲಿ ಸಾರ್ವಜನಿಕರ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ 30ಕೆಜಿ ಬಾಲಕರ ವಿಭಾಗದ ಕರಾಟೆ ಸ್ಪರ್ಧೆಯಲ್ಲಿ ಡಾ.ಎಂ.ದೇಜಮ್ಮ ಮಹಾವೀರ್ ವಿದ್ಯಾಸಂಸ್ಥೆಯ 7ನೇ ತರಗತಿಯ ವಿದ್ಯಾರ್ಥಿ ಲೋಹಿತ್ ಕುಮಾರ್ ಭಾಗವಹಿಸಿ ಪ್ರಥಮ ಸ್ಥಾನಗಳಿಸಿದ್ದರು. ಈ ಹಿಂದೆ ತಾಲೂಕು ಮಟ್ಟದ ಪಂದ್ಯಾವಳಿಯಲ್ಲೂ ಪ್ರಥಮ ಸ್ಥಾನಗಳಿಸಿ ಜಿಲ್ಲಾಹಂತದ ಕರಾಟೆ ಪಂದ್ಯಾವಳಿಗೆ ಆಯ್ಕೆಯಾಗಿದ್ದರು. ಲೋಹಿತ್‌ಕುಮಾರ್ ಅವರಿಗೆ ವಿದ್ಯಾಸಂಸ್ಥೆಯ ಸಿಇಓ ಸಂಕೀರ್ತನಾ, ಜಿವಿ ಗ್ರೂಪ್‌ನ ಚಾರ್ಲ್ಸ್ ಅಂಥೋಣಿ, ಡಿ.ಹರೀಶ್ ಅವರು ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಲು ಸಹಕಾರ ನೀಡಿದ್ದಾರೆ ಎಂದು ಡಾ.ಎಂ.ದೇಜಮ್ಮ ಮಹಾವೀರ್ ವಿದ್ಯಾಸಂಸ್ಥೆಯ ಮುಖ್ಯಶಿಕ್ಷಕಿ ಕೆ.ಎನ್.ಬೇಬಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ



ಸೈಯ್ಯದ್ ರಫೀಕ್

ಮೈಸೂರು, ಆ.6–ಮೈಸೂರು ಡಿ.ದೇವರಾಜ ಅರಸ್ ರಸ್ತೆಯ ಹಜ್ಹರತ್ ಸೈಯ್ಯದ್ ಸಿಕಂದರ್ ಷಾ ವಲಿ ದರ್ಗಾ ವ್ಯವಸ್ಥಾಪಕ ಸಮಿತಿ ಉಪಾಧ್ಯಕ್ಷ ಸೈಯ್ಯದ್ ರಫೀಕ್ (53) ಶುಕ್ರವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು.

ಇವರು ಶಾಂತಿನಗರ ನಿವಾಸಿಯೂ ಆಗಿದ್ದು, ಪತ್ನಿ, ಇಬ್ಬರು ಮಕ್ಕಳು, ನಾಲ್ವರು ಸಹೋದರರು, ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಶುಕ್ರವಾರ ರಾತ್ರಿ 8.30ಕ್ಕೆ ಇಷಾ ಪ್ರಾರ್ಥನೆ, ನಮಾಜ್–ಎ–ಜನಾಜ್ ನಡೆದು ನಂತರ ಟಿಪ್ಪು ಸರ್ಕಲ್‌ನ ಮುಸ್ಲಿಮರ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ದೇವರಾಜ ಅರಸು ರಸ್ತೆಯ ಹಜ್ಹರತ್ ಸೈಯ್ಯದ್ ಸಿಕಂದರ್ ಷಾ ವಲಿ ದರ್ಗಾದ ಮನ್ಸೂರ್ ಮಜೀದ್ ಸೇಠ್ ಕುಶಾಲಿ, ಕಾರ್ಯದರ್ಶಿ ಝುಲ್ಫಿಕರ್ ಅಹಮದ್ ಖಾನ್ ರಜ್ವಿ, ಸದಸ್ಯ ಎಸ್.ಎಂ.ಸೈಯ್ಯದ್ ಷಫೀಕ್, ಇತರರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಪ್ರತ್ಯೇಕ ಪ್ರಕರಣಗಳಲ್ಲಿ ಬಿಹಾರ ಮೂಲದ

10 ಮಂದಿ ದರೋಡೆಕೋರರ ಬಂಧನ

ಚನ್ನರಾಯಪಟ್ಟಣ, ಆ.6–ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಒಂದೇ ರಾತ್ರಿ 10 ಮಂದಿ ಬಿಹಾರ ಮೂಲದ ದರೋಡೆಕೋರರನ್ನು ಬಂಧಿಸುವಲ್ಲಿ ಚನ್ನರಾಯಪಟ್ಟಣ ಟೌನ್ ಸಬ್ ಇನ್ಸ್‌ಪೆಕ್ಟರ್ ಟಿ.ಲೋಕೇಶ್ ನೇತೃತ್ವದ ತಂಡ ಯಶಸ್ವಿಯಾಗಿದೆ.

ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ನೇತೃತ್ವದ ತಂಡ ಆಗಸ್ಟ್ 4ರ ಮುಂಜಾನೆ 2 ಗಂಟೆ ಸುಮಾರಿನಲ್ಲಿ ಗಸ್ತು ತಿರುಗುತ್ತಿದ್ದ ವೇಳೆ ದೊರೆತ ಮಾಹಿತಿ ಆಧರಿಸಿ ಚನ್ನರಾಯಪಟ್ಟಣ–ಹೊಳೆನರಸೀಪುರ ರಸ್ತೆಯಲ್ಲಿನ ಸುರಗಿ ತೋಪು ಬಳಿ ದಾಳಿ ನಡೆಸಿದಾಗ ಮಾರಕಾಸ್ತ್ರ ಹಾಗೂ ಖಾರದಪುಡಿಯೊಂದಿಗೆ ಐವರು ಡಕಾಯಿತರು ಸಿಕ್ಕಿಬಿದ್ದಿದ್ದಾರೆ. ಅವರನ್ನು ವಿಚಾರಣೆಗೊಳಪಡಿಸಿದಾಗ ಬಿಹಾರದ ನಾಸೀವ್ (24), ಅಮೀತ್ ಕುಮಾರ್ (28), ಮತ್ತೊರ್ವ ಅಮಿತ್ ಕುಮಾರ್ (19), ಚಂದನ್ ಕುಮಾರ್ (19), ರಣಧೀರ್ (28) ಎಂಬುವರಾಗಿದ್ದು, ಅವರನ್ನು ಬಂಧಿಸಿ, ಪೊಲೀಸ್ ಠಾಣೆಗೆ ಕರೆತಂದಿದ್ದಾರೆ.

ಈ ಐವರನ್ನು ವಿಚಾರಣೆ ನಡೆಸುತ್ತಿದ್ದ ವೇಳೆಯೇ ಬೆಳಗಿನ ಜಾವ 5.30ರಲ್ಲಿ ಬಂದ ಮಾಹಿತಿ ಆಧರಿಸಿ ಮತ್ತೆ ಚನ್ನರಾಯಪಟ್ಟಣ–ಹಾಸನ ರಸ್ತೆಯಲ್ಲಿನ ಫಾರೆಸ್ಟ್ ರಸ್ತೆಯಲ್ಲಿ ದರೋಡೆಗೆ ಹೊಂಚು ಹಾಕುತ್ತಿದ್ದ ಬಿಹಾರದ ಬಬ್ಲುಕುಮಾರ್ (25), ಬಾಬುಲ್ ಕುಮಾರ್ (29), ಕುಂದನ್ ಕುಮಾರ್ (19), ಮಣೀಶ್ ಕುಮಾರ್ (20) ಮತ್ತು ಮಿತ್ಯಕುಮಾರ್ (24) ಅವರನ್ನು ಮಾರಕಾಸ್ತ್ರಗಳ ಸಮೇತ ಬಂಧಿಸಿದ್ದಾರೆ. ಬಿಹಾರದ ಈ ದರೋಡೆಕೋರರ ತಂಡವು ರಾಜ್ಯಕ್ಕೆ ಆಗಮಿಸಿ ಹೆದ್ದಾರಿಗಳಲ್ಲಿ ಹೊಂಚು ಹಾಕಿ ವಾಹನಗಳನ್ನು ತಡೆದು ಪ್ರಯಾಣಿಕರಿಂದ ದರೋಡೆ ಮಾಡಿ ಪರಾರಿಯಾಗುವುದನ್ನೇ ಕಾಯಕ ಮಾಡಿಕೊಂಡಿದೆ. ಸಕಾಲದಲ್ಲಿ ಸಬ್ ಇನ್ಸ್‌ಪೆಕ್ಟರ್ ಲೋಕೇಶ್ ನೇತೃತ್ವದ ಪೊಲೀಸರ ತಂಡ ಈ ಹತ್ತೂ ಮಂದಿಯನ್ನು ಬಂಧಿಸದಿದ್ದಲ್ಲಿ ಅನಾಹುತ ಸಂಭವಿಸುತ್ತಿತ್ತು ಎಂದು ಹೇಳಲಾಗಿದೆ. ಎಲ್ಲಾ 10 ದರೋಡೆಕೋರರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಮನೆಗೇ ನುಗ್ಗಿ ಗೃಹಿಣಿ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಖದೀಮ

ಮದ್ದೂರು, ಆ.6–ಖದೀಮನೋರ್ವ ಮನೆಗೇ ನುಗ್ಗಿ ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮದ್ದೂರು ಟೌನ್‌ನ ನರಸಿಂಹಸ್ವಾಮಿ ದೇವಸ್ಥಾನದ ಬೀದಿಯಲ್ಲಿ ನಡೆದಿದೆ. ಅಲ್ಲಿನ ಗೃಹಿಣಿ ಸಿ.ಕೆ.ಜ್ಯೋತಿ(40) ಮಾಂಗಲ್ಯ ಸರ ಕಳೆದುಕೊಂಡವರಾಗಿದ್ದು, ಆ.4ರಂದು ಸಂಜೆ 7.30ರ ಸುಮಾರಿನಲ್ಲಿ ಅವರ ಮನೆ ಬಳಿ ಬಂದ ಯುವಕನೋರ್ವ 'ನಿಮ್ಮ ಮನೆಯಲ್ಲಿ ಬಟ್ಟೆ ಒಗೆಯುವ ನಮ್ಮ ಅಜ್ಜಿ ಇಷ್ಟೊತ್ತಾದರೂ ವಾಪಸ್ಸಾಗಿಲ್ಲ' ಎಂದು ಹೇಳಿದ್ದಾನೆ. ಆಗ ಅವರು ಅಜ್ಜಿ ಸಂಜೆಯೇ ನಮ್ಮ ಮನೆಯಿಂದ ಹೋದರು ಎಂದು ಹೇಳಿದಾಗ ಹೊರಟು ಹೋದ ಯುವಕ ಸುಮಾರು 20 ನಿಮಿಷದ ನಂತರ ಜ್ಯೋತಿಯವರು ಅಡುಗೆ ಮಾಡುತ್ತಿದ್ದಾಗ ಹಠಾತ್ತನೆ ಅಲ್ಲಿಗೆ ನುಗ್ಗಿ ಅವರ ಬಾಯನ್ನು ಅದುಮಿ ಹಿಡಿದುಕೊಂಡು ಕುತ್ತಿಗೆಯಲ್ಲಿದ್ದ 70 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ. ಈ ಸಂಬಂಧ ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ನಾಗಮಂಗಲ, ಆ.6–ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ತಾಲೂಕಿನ ಲಾಳನಕೆರೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ನಿಂಗಮ್ಮ ಅವರು ಆ.2ರಂದು ಮನೆ ಬೀಗ ಹಾಕಿಕೊಂಡು ಕುಣಿಗಲ್‌ಗೆ ಹೋಗಿದ್ದು, ಮರುದಿನ ಮಧ್ಯಾಹ್ನ ವಾಪಸ್ಸಾದಾಗ ಮನೆ ಬಾಗಿಲು ಮುರಿದಿರುವುದು ಕಂಡು ಬಂದಿದೆ. ಖದೀಮರು ಮನೆಯಲ್ಲಿದ್ದ 1.55 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಮತ್ತು 50 ಸಾವಿರ ನಗದು ಕಳವು ಮಾಡಿದ್ದಾರೆ. ಬಿಂಡಿಗನವಿಲೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತ್ಯೇಕ ಪ್ರಕರಣ; ಬೈಕ್‌ಗಳು ಡಿಕ್ಕಿ: ಇಬ್ಬರು ಪಾದಚಾರಿಗಳ ಸಾವು

ಚಾಮರಾಜನಗರ, ಆ.6–ಪ್ರತ್ಯೇಕ ಪ್ರಕರಣಗಳಲ್ಲಿ ಬೈಕ್ ಡಿಕ್ಕಿ ಹೊಡೆದು ಇಬ್ಬರು ಪಾದಚಾರಿಗಳು ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ.

ಕ್ರೈಂ ಬಾಕ್ಸ್

ಚಾಮರಾಜನಗರ ತಾಲೂಕು ವೆಂಕಟಯ್ಯನಛತ್ರ ನಿವಾಸಿ ಮಲ್ಲು (37) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಆ.3ರಂದು ಮಧ್ಯಾಹ್ನ ಸ್ನೇಹಿತ ನಾಗರಾಜಶೆಟ್ಟಿ ಜೊತೆ ಹರದನಹಳ್ಳಿಯ ಶಿವ ವೈನ್ಸ್ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ವೇಗವಾಗಿ ಬಂದ ಬೈಕ್ (ಟಿಎನ್ 38 ಸಿಡಬ್ಲ್ಯೂ 8858) ಇವರಿಬ್ಬರಿಗೂ ಡಿಕ್ಕಿ ಹೊಡೆದಿದೆ. ಅಪಘಾತದ ನಂತರ ಬೈಕ್ ಸವಾರ ಪರಾರಿಯಾಗಿದ್ದು, ತೀವ್ರವಾಗಿ ಗಾಯಗೊಂಡಿದ್ದ ಮಲ್ಲು ಅವರಿಗೆ ಚಾಮರಾಜನಗರ ಜಿಲ್ಲಾಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿದ ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ವೈದ್ಯರ ಸಲಹೆ ಮೇರೆಗೆ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಅವರು ಸಾವನ್ನಪ್ಪಿದ್ದಾರೆ. ಈ ಸಂಬಂಧ ಚಾಮರಾಜನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕೊಳ್ಳೇಗಾಲ ತಾಲೂಕಿನ ಮುಡಿಗುಂಡ ರೇಷ್ಮೆ ಗೂಡಿನ ಮಾರುಕಟ್ಟೆ ಬಳಿ ನಡೆದುಕೊಂಡು ಹೋಗುತ್ತಿದ್ದ ಯಳಂದೂರು ತಾಲೂಕಿನ ಬನ್ನಿಸಾರಿಗೆ ಗ್ರಾಮದ ನಾಗನಾಯಕ (58) ಎಂಬ ರೈತನಿಗೆ ಬೈಕ್ (ಕೆಎ 10 ಕ್ಯೂ 8046) ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾರೆ. ಈ ಸಂಬಂಧ ಕೊಳ್ಳೇಗಾಲ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದುಷ್ಕರ್ಮಿಗಳಿಂದ ಐ–ಫೋನ್ ಕಳವು

ಮೈಸೂರು,ಆ.6–ದ್ವಿಚಕ್ರ ವಾಹನದಲ್ಲಿ ಬಂದ ದುಷ್ಕರ್ಮಿಗಳು ಕಾರು ಚಾಲಕನೊಬ್ಬನಿಂದ 67 ಸಾವಿರ ರೂ. ಮೌಲ್ಯದ ಐ–ಫೋನ್ ಕಿತ್ತುಕೊಂಡು ಪರಾರಿ ಯಾಗಿರುವ ಘಟನೆ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದ ಎದುರು ನಡೆದಿದೆ.

ಹೆಚ್.ಡಿ.ಕೋಟೆ ಹ್ಯಾಂಡ್‌ಪೋಸ್ಟ್ ನಿವಾಸಿ ಕಾರು ಚಾಲಕ ಎಸ್.ಸಂತೋಷ್(22) ಅವರು ಆ.4ರಂದು ರಾತ್ರಿ 8.30ರ ಸುಮಾರಿನಲ್ಲಿ ನಂಜರಾಜ ಬಹದ್ದೂರ್ ಛತ್ರದ ಎದುರು ಬೈಕ್ ನಿಲ್ಲಿಸಿಕೊಂಡು ಮನೆಗೆ ಮೊಬೈಲ್ ಕರೆ ಮಾಡುತ್ತಿದ್ದ ವೇಳೆ ಅವರ ಹಿಂಬದಿಯಿಂದ ಆಕ್ಸಿಸ್ ಸ್ಕೂಟರ್‌ನಲ್ಲಿ ಬಂದ ಮೂವರು ದುಷ್ಕರ್ಮಿಗಳಲ್ಲಿ ಓರ್ವ ಏಯ್ ಎಂದು ಕೂಗಿದ್ದಾನೆ. ಅವರು ತಿರುಗಿ ನೋಡುತ್ತಿದ್ದಂತೆಯೇ ಐ–ಫೋನ್ ಕಸಿದುಕೊಂಡು ಸ್ಕೂಟರ್‌ನಲ್ಲಿ ಪರಾರಿಯಾಗಿದ್ದಾರೆ. ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಂ.ಗೂಡಲ್ಲಿ ಸಂಸದ ವಿ.ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬ ಆಚರಣೆ

● ಕ್ಷೇತ್ರದ 23 ಸಾವಿರ ಶಾಲಾ ಮಕ್ಕಳಿಗೆ ಸಿಹಿ ವಿತರಣೆ ● ಶಾಲಾವರಣದಲ್ಲಿ ಗಿಡನೆಟ್ಟ ಅಭಿಮಾನಿಗಳು



ನಂಜನಗೂಡು ತಾಲೂಕಿನ ಹುರ ಶಾಲೆಯಲ್ಲಿ ಮಕ್ಕಳಿಗೆ ಸಿಹಿ ಹಂಚಲಾಯಿತು

ನಂಜನಗೂಡು, ಆ.6– ಹಿರಿಯ ರಾಜಕೀಯ ಮುತ್ಸದ್ದಿ, ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ 76ನೇ ಹುಟ್ಟುಹಬ್ಬವನ್ನು ಶಾಸಕ ಬಿ.ಹರ್ಷವರ್ಧನ್ ನೇತೃತ್ವದಲ್ಲಿ ನಂಜನಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಸರ್ಕಾರಿ ಶಾಲೆಗಳ 23 ಸಾವಿರ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸುವ ಮೂಲಕ ಸರಳವಾಗಿ ಆಚರಿಸಲಾಯಿತು.

ತಾಲೂಕಿನ ಎಲ್ಲಾ ಶಾಲೆಗಳಿಗೆ ಆಯಾ ಭಾಗದ ವಿ.ಶ್ರೀನಿವಾಸಪ್ರಸಾದ್ ಅಭಿಮಾನಿಗಳು ತೆರಳಿ ಮಕ್ಕಳಿಗೆ ಸಿಹಿ ಹಂಚಿದರು. ಅಲ್ಲದೇ ಶಾಲಾ ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ಸಂಭ್ರಮಿಸಿದರು. ಇನ್ನು ವಿದ್ಯಾರ್ಥಿಗಳು ಕೂಡ ಸಾಮೂಹಿಕವಾಗಿ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಶುಭಾಶಯ ಕೋರುವ ಮೂಲಕ ಗಮನ ಸೆಳೆದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಉಪ ರಾಷ್ಟ್ರಪತಿ ಚುನಾವಣೆ ಹಿನ್ನೆಲೆಯಲ್ಲಿ ದೆಹಲಿಯಲ್ಲಿರುವುದರಿಂದ ಪಕ್ಷದ ಕಾರ್ಯಕರ್ತರು ತಮ್ಮ ಗ್ರಾಮಗಳಲ್ಲಿ ವಿ.ಶ್ರೀನಿವಾಸಪ್ರಸಾದ್ ಹುಟ್ಟುಹಬ್ಬವನ್ನು ವಿವಿಧ ಸಾಮಾಜಿಕ ಕಾರ್ಯ ಕೈಗೊಳ್ಳುವ ಮೂಲಕ ಆಚರಿಸಿದರು.

ದಲಿತರ ಧ್ವನಿ ಪ್ರಸಾದ್: ಧೀನ ದಲಿತರ ಧ್ವನಿಯಾಗಿರುವ ಸಂಸದ ವಿ.ಶ್ರೀನಿವಾಸ ಪ್ರಸಾದ್ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದ್ದಾರೆ ಎಂದು ತಾಪಂ ಮಾಜಿ ಸದಸ್ಯ ಎಸ್.ಬಸವರಾಜ್ ಹೇಳಿದರು.

ಮಲ್ಕುಂಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಸಂಸದ ವಿ.ಶ್ರೀನಿವಾಸ್ ಪ್ರಸಾದ್ 76ನೇ ಹುಟ್ಟುಹಬ್ಬದ ಪ್ರಯುಕ್ತ ಸಿಹಿ ವಿತರಿಸಿ ಮಾತನಾಡಿದ ಅವರು, ಪ್ರಸಾದ್ ಅವರು ಶೋಷಿತರು ಹಾಗೂ ದಲಿತರಿಗಾಗಿ ಹೋರಾಟ ಮಾಡಿ ರಾಜಕೀಯಕ್ಕೆ ಕಾಲಿಟ್ಟು, 6 ಬಾರಿ ಸಂಸದರಾಗಿ, 2 ಬಾರಿ ಶಾಸಕರಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಹಾದಿಯಲ್ಲಿ ಸಾಗುವ ಮೂಲಕ ಯಾವುದೇ ಕಪ್ಪುಚುಕ್ಕೆ ಇಲ್ಲದಂತೆ ಆಡಳಿತ ನಡೆಸಿದ್ದಾರೆ ಎಂದು ಬಣ್ಣಿಸಿದರು.

ಈ ವೇಳೆ ಬಿಜೆಪಿ ಯುವ ಮುಖಂಡ ಮಹದೇವಸ್ವಾಮಿ, ಮುಖಂಡರಾದ ರಮೇಶ್, ಗುರುಸಿದ್ದಪ್ಪ, ಮಹದೇವಪ್ಪ, ಸಣ್ಣಮಾದಪ್ಪ, ಪುಟ್ಟಸ್ವಾಮಿ ಸೇರಿದಂತೆ ಪ್ರಮುಖರಿದ್ದರು.


ಹುರ: ತಾಲೂಕಿನ ಹುರ ಗ್ರಾಮದ ಶಾಲಾ ಮಕ್ಕಳಿಗೂ ಶ್ರೀನಿವಾಸ್ ಪ್ರಸಾದ್ ಹುಟ್ಟುಹಬ್ಬ ಅಂಗವಾಗಿ ಸಿಹಿ ವಿತರಿಸಲಾಯಿತು. ಈ ವೇಳೆ ಮಾತನಾಡಿದ ಗ್ರಾಪಂ ಅಧ್ಯಕ್ಷ ಚಂದ್ರು, ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಶ್ರೀನಿವಾಸ ಪ್ರಸಾದ್ ಹುಟ್ಟುಹಬ್ಬವನ್ನು ತಾಲೂಕಿನಾದ್ಯಂತ ಮಕ್ಕಳಿಗೆ ಸಿಹಿ ಹಂಚುವ ಮೂಲಕ ಸರಳವಾಗಿ ಆಚರಿಸಲಾಗುತ್ತಿದೆ ಎಂದರು.

ಗ್ರಾಪಂ ಸದಸ್ಯ ಶಿವಕುಮಾರ್, ಎಸ್‌ಡಿಎಂಸಿ ಅಧ್ಯಕ್ಷ ಶಿವರಾಜ್, ಪ್ರಕಾಶ್, ಮಹದೇವು, ಕುಮಾರ್, ಮಂಜುನಾಯಕ, ಪದ್ಮನಾಭ, ಕೆಂಪರಾಜು ಸೇರಿದಂತೆ ಪ್ರಮುಖರಿದ್ದರು.

ದೆಹಲಿಯಲ್ಲಿ ಪ್ರಸಾದ್, ಬಿ.ಎಲ್.ಸಂತೋಷ್ ಭೇಟಿ

ರಾಜಕೀಯ ವಿದ್ಯಮಾನಗಳ ಬಗ್ಗೆ ಸುದೀರ್ಘ ಚರ್ಚೆ

ದೆಹಲಿಯಲ್ಲಿರುವ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರನ್ನು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಭೇಟಿ ಮಾಡಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಅಲ್ಲದೇ ರಾಜಕೀಯ ವಿದ್ಯಮಾನಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ್ದಾರೆ. ರಾಜ್ಯ ವಿಧಾನಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸುದೀರ್ಘ 45 ವರ್ಷಗಳ ಕಾಲ ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದಲ್ಲಿ ಅನುಭವ ಹೊಂದಿರುವ ಸಂಸದ ವಿ.ಶ್ರೀನಿವಾಸಪ್ರಸಾದ್ ಅವರೊಂದಿಗೆ ಸಂತೋಷ್ ಅವರು ಚರ್ಚೆ ನಡೆಸಿರುವುದು ಚುನಾವಣೆ ದೃಷ್ಟಿಯಿಂದ ಮಹತ್ವ ಪಡೆದಿದೆ.



ಅಕ್ರಮ ಸಕ್ರಮ ಸಾಗುವಳಿ ಸಮಿತಿ ಸಭೆ



ಹುಣಸೂರು, ಆ.6– ನಗರದ ತಾಲೂಕು ಕಚೇರಿಯಲ್ಲಿ ಶನಿವಾರ ಶಾಸಕ ಹೆಚ್.ಪಿ.ಮಂಜುನಾಥ್ ಅಧ್ಯಕ್ಷತೆಯಲ್ಲಿ ಅಕ್ರಮ ಸಕ್ರಮ ಸಾಗುವಳಿ ಸಮಿತಿ ಸಭೆ ನಡೆಯಿತು.

ಸಭೆಯಲ್ಲಿ ಈ ಹಿಂದೆ ಫಾರಂ ನಂ.53ರಲ್ಲಿ ಸಲ್ಲಿಸಿರುವ 50ಕ್ಕೂ ಹೆಚ್ಚು ಅರ್ಜಿಗಳನ್ನು ಪರಿಶೀಲಿಸಲಾಗಿ ಈ ಪೈಕಿ 15 ಕಡತಗಳನ್ನು ಸಾಗುವಳಿ ನೀಡಲು ಸಭೆಯಲ್ಲಿ ಅನುಮೋದನೆ ನೀಡಲಾಯಿತು. ಮುಂದಿನ ಸಭೆಯಲ್ಲಿ ಫಾರಂ ನಂ.57 ರಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಲು ಕೈಗೆತ್ತಿಕೊಳ್ಳುವಂತೆ ಶಾಸಕರು ತಹಸೀಲ್ದಾರ್ ಅವರಿಗೆ ಸೂಚನೆ ನೀಡಿದರು. ಫಾರಂ ನಂ.54ರಲ್ಲಿ ಗೋಮಾಳಕ್ಕೆ ಹಾಗೂ 'ಬಿ' ಖರಾಬು ಭೂಮಿಗೆ ಸಾಗುವಳಿಗಾಗಿ ಅರ್ಜಿ ಹಾಕಿರುವವರಿಗೆ ಸರ್ಕಾರದ ಆದೇಶ ಬರುವವರೆಗೂ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಇತ್ತೀಚೆಗೆ ಫಾರಂ 57ರಲ್ಲಿ ಅರ್ಜಿ ಹಾಕಿರುವವರು ಸಾಗುವಳಿ ನೀಡಲು ಅರ್ಹರೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕೆಂದು ಸಭೆಯಲ್ಲಿದ್ದ ಇಲಾಖೆ ಅಧಿಕಾರಿಗಳಿಗೆ ಸಮಿತಿ ತಾಕೀತು ಮಾಡಿತು.

ಸಭೆಯಲ್ಲಿ ಅನುಮೋದನೆಗೊಂಡ ಸಾಗುವಳಿ ಅರ್ಜಿದಾರರಿಗೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಸಾಗುವಳಿ ಪತ್ರ ನೀಡಲು ತೀರ್ಮಾನ ಕೈಗೊಳ್ಳಲಾಯಿತು ಎಂದು ಸಮಿತಿ ಅಧ್ಯಕ್ಷ ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು. ಸಭೆಯಲ್ಲಿ ಸಮಿತಿ ಕಾರ್ಯದರ್ಶಿ ತಹಸೀಲ್ದಾರ್ ಡಾ.ಅಶೋಕ್, ಸದಸ್ಯರಾದ ನಾಗರಾಜ್ ಮಲ್ಲಾಡಿ, ವೆಂಕಟಮ್ಮ ಸೇರಿದಂತೆ ಇತರರಿದ್ದರು.

—— ನಂ.ಗೂಡಿನ ಮಳೆ ಹಾನಿ ಪ್ರದೇಶಗಳಿಗೆ ——

ಸಚಿವ ಆರ್.ಅಶೋಕ್ ಭೇಟಿ, ಪರಿಹಾರದ ಚೆಕ್ ವಿತರಣೆ



ನಂಜನಗೂಡು, ಆ.6– ನಮ್ಮ ಸರ್ಕಾರ ರೈತರು ಹಾಗೂ ಬಡವರ ಪರವಾಗಿದ್ದು, ಬೆಳೆ ಹಾನಿ, ಮನೆ ಕಳೆದುಕೊಂಡವರಿಗೆ ಎರಡರಷ್ಟು ಪರಿಹಾರ ನೀಡುತ್ತೇವೆ ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದರು.

ತಾಲೂಕಿನ ಎಲಚಗೆರೆ ಹಾಗೂ ಹುಣಸನಾಳು ಗ್ರಾಮಗಳ ಹಾನಿಗೊಳಗಾದ ಪ್ರದೇಶಗಳಿಗೆ ಶನಿವಾರ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ 15 ದಿನಗಳಿಂದ ರಾಜ್ಯದಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ಕಾರವಾರ, ಉಡುಪಿ, ಮಂಗಳೂರು, ಕೊಡಗು, ಮಂಡ್ಯ, ರಾಮನಗರ, ಹಾಸನ, ಚಾಮರಾಜನಗರ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದ್ದೇನೆ. ತಾಲೂಕಿನ ಎಲಚಗೆರೆ ಹಾಗೂ ಹುಣಸನಾಳು ಗ್ರಾಮಗಳಲ್ಲಿ ಮನೆಗಳು ಹಾನಿಗೊಳಗಾಗಿವೆ. ಹೊಲಗಳಿಗೆ ನೀರು ನುಗ್ಗಿ ಟೊಮೆಟೋ, ಚೆಂಡು ಹೂವು ಬೆಳೆ ನಾಶವಾಗಿದೆ ಎಂದರು.

ಮಳೆಯಿಂದ ಹಾನಿಗೊಳಗಾದವರಿಗೆ ರಾಜ್ಯ ಸರ್ಕಾರ 200 ಕೋಟಿ ಪರಿಹಾರ ಹಣ ಬಿಡುಗಡೆ ಮಾಡಿದ್ದು, ಹೆಚ್ಚಿನ ಹಾನಿ ಸಂಭವಿಸಿರುವುದರಿಂದ ಮುಖ್ಯಮಂತ್ರಿಗಳಿಗೆ 500 ಕೋಟಿ ರೂ. ಬಿಡುಗಡೆ ಮಾಡುವಂತೆ ಮನವಿ ಮಾಡಿದ್ದೇನೆ. ರೈತರಿಗೆ ನೆರೆಯ ತಮಿಳುನಾಡು ಹಾಗೂ ಆಂಧ್ರ ಪ್ರದೇಶಗಳಲ್ಲಿ 12 ಸಾವಿರ ಪರಿಹಾರ ನೀಡುತ್ತಿದ್ದು, ಎನ್‌ಡಿಆರ್‌ಎಫ್ ನಿಯಮದಂತೆ 95 ಸಾವಿರಕ್ಕೆ ಬದಲಾಗಿ 4 ಲಕ್ಷ ಅನುದಾನ ನೀಡಿ 2 ರಿಂದ 3 ಪಟ್ಟು ಹೆಚ್ಚಿನ ಪರಿಹಾರ ನೀಡಲಾಗುವುದು. ಈ ಹಿಂದೆ ಮನೆ ಕಳೆದುಕೊಂಡವರಿಗೆ 50 ಸಾವಿರ ಪರಿಹಾರ ನೀಡಲಾಗುತ್ತಿತ್ತು. ನಮ್ಮ ಸರ್ಕಾರ 3 ಲಕ್ಷ ಪರಿಹಾರ ನೀಡುತ್ತಿದೆ. ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರವಾಗಿ ಸಂತ್ರಸ್ತರ ಖಾತೆಗಳಿಗೆ ತಿಂಗಳೊಳಗೆ ಪರಿಹಾರದ ಹಣ ಹಾಕಲಾಗುವುದು ಎಂದರು.

ಈ ವೇಳೆ ಜಿಲ್ಲಾಧಿಕಾರಿ ಡಾ.ಗೌತಮ್ ಬಗಾದಿ, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ತಹಶೀಲ್ದಾರ್ ಶಿವಮೂರ್ತಿ, ಕಂದಾಯ ಅಧಿಕಾರಿ ಪ್ರಕಾಶ್, ರಾಜ್ಯ ಕಾಂಪೋಸ್ಟ್ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ತಾಲೂಕು ಬಿಜೆಪಿ ಅಧ್ಯಕ್ಷ ಮಹೇಶ್ ಉಪಸ್ಥಿತರಿದ್ದರು.

ತಿ.ನರಸೀಪುರ ತಾಲೂಕು ಆಡಳಿತ ವೈಖರಿ ಶ್ಲಾಘನೀಯ

ಶಾಸಕ ಎಂ.ಅಶ್ವಿನ್‌ಕುಮಾರ್ ಮೆಚ್ಚುಗೆ



ತಿ.ನರಸೀಪುರ, ಆ.6– ಸರ್ಕಾರದ ಸವಲತ್ತುಗಳಿಂದ ಅರ್ಹ ಫಲಾನುಭವಿಗಳು ವಂಚಿತರಾಗದಂತೆ ಸಕಾಲದಲ್ಲಿ ಸೇವೆ ಒದಗಿಸುವ ನಿಟ್ಟಿನಲ್ಲಿ ಇಲ್ಲಿನ ತಾಲೂಕು ಆಡಳಿತ ಕಾರ್ಯ ವೈಖರಿ ಶ್ಲಾಘನೀಯ ಎಂದು ಶಾಸಕ ಎಂ.ಅಶ್ವಿನ್‌ಕುಮಾರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಮಿನಿವಿಧಾನಸೌಧ ಮುಂಭಾಗ ಆಯೋಜಿಸಿದ್ದ ಪಿಂಚಣಿ ಅದಾಲತ್‌ನ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರಿ ಅಧಿಕಾರಿಗಳು ಸರ್ಕಾರದ ಸವಲತ್ತನ್ನು ಬಯಸಿ ಬರುವ ನಾಗರಿಕರನ್ನು ತಮ್ಮ ಕುಟುಂಬದ ಸದಸ್ಯರೆಂದು ಭಾವಿಸಿದರೇ ಅವರು ಸವಲತ್ತುಗಳಿಂದ ವಂಚಿತರಾಗಲು ಸಾಧ್ಯವಿಲ್ಲ. ಅಂತಹ ಭಾವನೆ ಅಧಿಕಾರಿಗಳಲ್ಲಿ ಮೂಡಿದಾಗ ಮಾತ್ರ ಸಮಸ್ಯೆ ಮುಕ್ತ ತಾಲೂಕ್ಕಾಗಿ ಪರಿವರ್ತನೆಗೊಳ್ಳಲಿದೆ ಎಂದರು.

ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ಇಂದಿರಾ ಗಾಂಧಿ ವೃದ್ಧಾಪ್ಯ ಯೋಜನೆ, ಅಂಗವಿಕಲರ ಪಿಂಚಣಿ, ಮನಸ್ವಿ ಯೋಜನೆ ಹಾಗೂ ಮೈತ್ರಿ ಯೋಜನೆ ಪಿಂಚಣಿ ಮುಂತಾದ ಯೋಜನೆ ಬಗ್ಗೆ ಪ್ರತಿ ಗ್ರಾಮಗಳಲ್ಲಿ ಅರಿವು ಮೂಡಿಸಿದಾಗ ಅರ್ಹ ಫಲಾನುಭವಿಗಳು ಇದರ ಯೋಜನೆ ಪಡೆಯಲು ಅನುಕೂಲಕರವಾಗಲಿದೆ ಎಂದು ತಹಸೀಲ್ದಾರ್ ಸಿ.ಜಿ. ಗೀತಾ ಮಾತನಾಡಿ, ಸವಲತ್ತುಗಳನ್ನು ಒದಗಿಸಲು ಸರ್ಕಾರ ನಮ್ಮನ್ನು ನೇಮಿಸಿದೆ ಯಾರೂ ಗೋಗರಿಯುವ ಪ್ರಮೇಯ ಬೇಡ ನಾವು ನಿಮ್ಮ ಸೇವೆ ಮಾಡಲು ಬಂದಿದ್ದೇವೆ. ಈ ನಿಟ್ಟಿನಲ್ಲಿ ಪ್ರತಿ ಶನಿವಾರ ಪಿಂಚಣಿ ಅದಾಲತ್ ನಡೆಸಲಾಗುತ್ತದೆ. ತಾಲೂಕಿನ ಜನತೆ ಇದರ ಸದುಪಯೋಗ ಪಡೆದುಕೊಳ್ಳುವಂತೆ ಕರೆ ನೀಡಿದರು.

ಹಿರಿಯ ನಾಗರಿಕರು ಕಚೇರಿಗೆ ಬರಲು ಸಾಧ್ಯವಾಗದಿದ್ದರೆ, ಸರ್ಕಾರದ ಟೋಲ್ ಫ್ರೀ ನಂಬರ್‌ಗೆ ಮಿಸ್ ಕಾಲ್ ನೀಡಿದರೆ ತಕ್ಷಣ ಸ್ಪಂದಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿರಸ್ತೇದಾರ್ ಮಹದೇವ ನಾಯಕ, ಪ್ರಭುರಾಜ್, ಉಪತಹಸೀಲ್ದಾರ್‌ಗಳಾದ ಸುಬ್ಬಣ್ಣ, ಆನಂದ್, ಕುಮಾರ್, ರಾಜಸ್ವ ನಿರೀಕ್ಷಕರಾದ ಸರ್ವೇಶ್, ಶಾಮ್, ಸಿದ್ದರಾಜು, ಬಸವರಾಜು, ಗ್ರಾಮ ಲೆಕ್ಕಿಗರಾದ ಹೇಮಂತ್, ಶ್ರೀನಿವಾಸ್, ನಿಂಗರಾಜು, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್ ಹಾಗೂ ವಯೋವೃದ್ಧ ಫಲಾನುಭವಿಗಳು ಉಪಸ್ಥಿತರಿದ್ದರು.



ಚಿಲ್ಕುಂದ ತಂಬಾಕು ಮಾರುಕಟ್ಟೆ ಸಂಖ್ಯೆ 62ರಲ್ಲಿ ಡೆಕ್ಕನ್ ಟೊಬ್ಯಾಕೋ ಕಂಪನಿಯಿಂದ ತಂಬಾಕು ರೈತರಿಗೆ ಟಾರ್ಪಾಲಿನ್, NTRM ಡಸ್ಟ್ ಬಿನ್, ಕ್ಲೂರೋಮೀಟರ್ ವಿತರಿಸಲಾಯಿತು. ಹರಾಜು ಅಧೀಕ್ಷಕ ಡಾ.ಬ್ರಿಜ್ ಭೂಷಣ್, ತಂಬಾಕು ಮಂಡಳಿ ಸದಸ್ಯ ಹೆಚ್.ಆರ್.ದಿನೇಶ್, ಕ್ಷೇತ್ರಾಧಿಕಾರಿ ನಾಗರಾಜ್, ಡೆಕ್ಕನ್ ಕಂಪನಿ ಮ್ಯಾನೇಜರ್ ಪಾಷಾ ಹಾಜರಿದ್ದರು.

ಕಾಡಾನೆಗಳ ಹಿಂಡು ದಾಳಿ, ಬೆಳೆ ನಾಶ



ಹನಗೋಡು, ಆ.6– ಕಾಡಾನೆಗಳ ಹಿಂಡು ರೈತರ ಜಮೀನಿನ ಮೇಲೆ ದಾಳಿ ನಡೆಸಿ ಬೆಳೆ ನಾಶ ಮಾಡಿರುವ ಘಟನೆ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ವೀರನಹೊಸಹಳ್ಳಿ ಅರಣ್ಯ ವಲಯದ ಸಮೀಪ ಹಳೆಪೆಂಜಹಳ್ಳಿ ಶುಕ್ರವಾರ ರಾತ್ರಿ ನಡೆದಿದೆ.

ಗ್ರಾಮದ ಕಾಂತರಾಜ್ ಪ್ರಕಾಶ್ ಎಂಬುವರ ಜಮೀನಿನ ಮೇಲೆ ಆನೆಗಳ ಹಿಂಡು ದಾಳಿ ಮಾಡಿ 20 ತೆಂಗಿನ ಗಿಡ ತುಳಿದು ಹಾಕಿವೆ. ಅಲ್ಲದೆ ಮುಸುಕಿನ ಜೋಳ ತಿಂದಿವೆ. ಸ್ಪಿಂಕ್ಲರ್ ಪೈಪ್‌ಗಳು ತುಳಿದು ನಾಶಪಡಿಸಿವೆ. ಇದರಿಂದ ಸಾವಿರಾರು ರೂ. ಮೌಲ್ಯದ ವಸ್ತುಗಳು ನಷ್ಟವಾಗಿದೆ. ಗ್ರಾಮದ ವ್ಯಾಪ್ತಿಯಲ್ಲಿ ಗಜಪಡೆಗಳು ರೈತರ ಜಮೀನುಗಳಿಗೆ ನುಗ್ಗಿ ಬೆಳೆಗಳನ್ನು ನಾಶ ಪಡಿಸುತ್ತಲೇ ಇವೆ. ಮಾವು, ತೆಂಗು, ಬಾಳೆ ಸೇರಿದಂತೆ ವಿವಿಧ ಬೆಳೆಗಳ ಮೇಲೆ ನಿರಂತರವಾಗಿ ಆನೆಗಳು ದಾಳಿ ಮಾಡುತ್ತಿವೆ. ಕಳೆದ ಮೂರು ದಿನಗಳ ಹಿಂದೆ ರಾತ್ರಿ 8 ಗಂಟೆ ಸಮಯದಲ್ಲೇ ಆನೆಗಳು ಗ್ರಾಮದ ಒಳಗೆ ಪ್ರವೇಶ ಮಾಡಿ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದವು.


ವೈಜ್ಞಾನಿಕ ಪರಿಹಾರಕ್ಕೆ ಆಗ್ರಹ : ಆನೆಗಳ ಕಾಟ ವಿಪರೀತವಾಗಿದ್ದು, ರೈತರ ಬೆಳೆದ ಫಸಲು ಆನೆಗಳ ದಾಳಿಯಿಂದ ನಾಶವಾಗುತ್ತಿದೆ. ಆನೆ ದಾಳಿಗೆ ಹಾಳಾದ ಬೆಳೆಗೆ ಅರಣ್ಯ ಇಲಾಖೆ ವೈಜ್ಞಾನಿಕ ಪರಿಹಾರ ನೀಡುತ್ತಿಲ್ಲ. ಸರ್ಕಾರ ನೀಡುವ ಪರಿಹಾರ ಯಾವುದಕ್ಕೂ ಸಾಕಾಗುತ್ತಿಲ್ಲ. ಬೆಳೆ ನಷ್ಟಕ್ಕೆ ವೈಜ್ಞಾನಿಕ ಪರಿಹಾರ ನೀಡುವಂತೆ ಸರ್ಕಾರ ಮತ್ತು ಅರಣ್ಯಾಧಿಕಾರಿಗಳನ್ನು ರೈತರು ಆಗ್ರಹಿಸಿದರು. ಆನೆಗಳು ಕಾಡಿನಿಂದ ನಾಡಿಗೆ ಬರದಂತೆ ಮಾಡಲು ಕೈಗೊಂಡ ಸರ್ಕಾರದ ಕ್ರಮಗಳು ವಿಫಲವಾಗಿವೆ. ಆನೆ ದಾಳಿಯನ್ನು ತಡೆಗಟ್ಟುವಲ್ಲಿ ಪರಿಣಾಮಕಾರಿಯಾಗಿರುವ ರೈಲು ಹಳಿಯ ಬೇಲಿ ಯೋಜನೆಯ ಅನುಷ್ಠಾನ ಮಾಡುತ್ತಿಲ್ಲ ಎಂದು ರೈತರು ಆರೋಪಿಸಿದ್ದಾರೆ.

ಫಲ ಕೊಡದ ಸರ್ಕಾರದ ಕ್ರಮಗಳು: ಆನೆ ದಾಳಿ ತಡೆಯುವ ನಿಟ್ಟಿನಲ್ಲಿ ನಿರ್ಮಿಸಿದ ಆನೆ ಕಂದಕ, ಸೋಲಾರ್ ಬೇಲಿ ಸೇರಿದಂತೆ ಯಾವುದೇ ಕ್ರಮಗಳು ಆನೆ ದಾಳಿ ತಡೆಗಟ್ಟುವಲ್ಲಿ ವಿಫಲವಾಗಿದೆ ಎಂದು ಗ್ರಾಪಂ ಸದಸ್ಯ ಶ್ರೀನಿವಾಸ್ ಆರೋಪಿಸಿದ್ದಾರೆ.


ವನಸಿರಿ ನಾಡಲ್ಲಿ ಮೈದುಂಬಿದ ಕಬಿನಿ, ನುಗು, ತಾರಕ



ಕಬಿನಿ ಜಲಾಶಯ



ತಾರಕ ಜಲಾಶಯ



ನುಗು ಜಲಾಶಯ

ಹೆಚ್.ಡಿ.ಕೋಟೆ, ಆ.6– 'ವನಸಿರಿ ನಾಡು' ಎಂದೇ ಹೆಸರುವಾಸಿಯಾಗಿರುವ ಹೆಚ್.ಡಿ.ಕೋಟೆ ತಾಲೂಕಿನ ಪ್ರಮುಖ 3 ಜಲಾಶಯಗಳಾದ ಕಬಿನಿ, ನುಗು, ತಾರಕ ಭರ್ತಿಯಾಗಿ ಮೈದುಂಬಿ ಹರಿಯುತ್ತಿವೆ.

ಕೇರಳದ ವೈನಾಡಿನಲ್ಲಿ ಭಾರೀ ಮಳೆ ಆಗುತ್ತಿರುವ ಹಿನ್ನೆಲೆಯಲ್ಲಿ ಕಬಿನಿ ಜಲಾಶಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಬರುತ್ತಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ಕಬಿನಿ ಜಲಾಶಯದ 4 ಕ್ರಸ್ಟ್ ಗೇಟ್‌ಗಳ ಮೂಲಕ 20 ಸಾವಿರ ಕ್ಯೂಸೆಕ್ ನೀರು ಹಾಗೂ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್(ವಿದ್ಯುತ್ ಉತ್ಪಾದನಾ ಘಟಕ)ನಿಂದ 5 ಸಾವಿರ ಕ್ಯೂಸೆಕ್ ಸೇರಿದಂತೆ ಒಟ್ಟು 25 ಸಾವಿರ ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಒಟ್ಟು 2284 ಗರಿಷ್ಠ ಮಟ್ಟದ ಕಬಿನಿ ಜಲಾಶಯದಲ್ಲಿ ಪ್ರಸ್ತುತ 2283 ಅಡಿಗಳಷ್ಟು ನೀರು ಶೇಖರಣೆಯಾಗಿದೆ. ಕಳೆದ ವರ್ಷ ಇದೇ ದಿನ ಜಲಾಶಯದಲ್ಲಿ 2280 ಅಡಿ ನೀರು ಸಂಗ್ರಹವಾಗಿತ್ತು ಅಲ್ಲದೇ 37400 ಕ್ಯೂಸೆಕ್ಸ್ ಒಳಹರಿವು, 43000 ಸಾವಿರ ಕ್ಯೂಸೆಕ್ಸ್ ಹೊರ ಹರಿವಿತ್ತು ಎಂದರು.

ನುಗು ಜಲಾಶಯ: ಜಲಾಶಯದ ಗರಿಷ್ಠ ಮಟ್ಟ 2,380 ಅಡಿಗಳಾಗಿದ್ದು, ಸದ್ಯ 3,500 ಕ್ಯೂಸೆಕ್ ಒಳಹರಿವಿದ್ದು, ಜಲಾಶಯ ಮಟ್ಟ 2,378 ಅಡಿ ತಲುಪಿದ್ದು, ಪ್ರಮುಖ 2 ಗೇಟ್‌ಗಳಿಂದ 3.500 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗಿದೆ.

ನುಗು ಜಲಾಶಯಕ್ಕೆ ಕೇರಳ ರಾಜ್ಯದ ಸುಲ್ತಾನ್ ಬತ್ತೇರಿ, ವೈನಾಡು, ಕರ್ನಾಟಕದ ಕೆಲವು ಗುಡ್ಡಗಾಡು ಪ್ರದೇಶಗಳಿಂದ ನೀರು ಹರಿದು ಬರಲಿದ್ದು, ನಾಲ್ಕು ವರ್ಷಗಳ ಹಿಂದೆ ಭರ್ತಿಯಾಗಿತ್ತು. ಅಂದಿನಿಂದ ಪ್ರತಿ ವರ್ಷವೂ ಭರ್ತಿಯಾಗುತ್ತಾ ಬಂದಿದೆ ಎಂದು ನುಗು ಜಲಾಶಯದ ಸಹಾಯಕ ಇಂಜಿನಿಯರ್ ದೀಪಕ್ ತಿಳಿಸಿದ್ದಾರೆ.

ತಾರಕ ಜಲಾಶಯ: ಜಲಾಶಯದ ಗರಿಷ್ಠ ಮಟ್ಟ 2,425 ಅಡಿಗಳಾಗಿದ್ದು, 260 ಕ್ಯೂಸೆಕ್ ಒಳಹರಿವಿದೆ. ಜಲಾಶಯದ 3 ಗೇಟ್‌ಗಳಿಂದ 600 ಕ್ಯೂಸೆಕ್ ನೀರನ್ನು ನದಿಗೆ ಬಿಡಲಾಗಿದೆ. ತಾರಕ ಜಲಾಶಯ ಭರ್ತಿಯಾಗಿ 4 ವರ್ಷಗಳಾಗಿತ್ತು. ಮತ್ತೆ ಈ ಬಾರಿ ಜಲಾಶಯ ಭರ್ತಿಯಾಗಿದೆ ಎಂದು ಜಲಾಶಯದ ಸಹಾಯಕ ಇಂಜಿನಿಯರ್ ಮಂಜುನಾಥ್ ಮಾಹಿತಿ ನೀಡಿದ್ದಾರೆ.

ಜಲಾಶಯ ಭರ್ತಿಯಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್‌.ಟಿ.ಸೋಮಶೇಖರ್ ಅವರೊಂದಿಗೆ ಚರ್ಚಿಸಿ, ದಿನಾಂಕ ನಿಗದಿ ಪಡಿಸಿ ಜಲಾಶಯಕ್ಕೆ ಬಾಗಿನ ಅರ್ಪಿನ ಅರ್ಪಿಸುವುದಾಗಿ ಶಾಸಕ ಅನಿಲ್ ಚಿಕ್ಕಮಾದು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ವಿಕ್ರಾಂತ್ ರೋಣ (ಕ): ಬೆ.10.30ಕ್ಕೆ, ವಿಕ್ರಾಂತ್ ರೋಣ (3ಡಿ) (ಕ): ಮ.1.30ಕ್ಕೆ, ಸೀತಾರಾಮಂ (ತೆ): ಸಂ.4.20ಕ್ಕೆ, ಬುಲೆಟ್ ಟ್ರೇನ್ (ಇಂ): ರಾ.7.25ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಪಾಪ್ಪಂ (ಮ): ಬೆ.9.50ಕ್ಕೆ, ರಾ.10ಕ್ಕೆ, ಕಟೇರಿ (ತ): ಮ.1ಕ್ಕೆ, ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಮ.3.25ಕ್ಕೆ, ಸಂ.5.35ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 3	ಸೀತಾರಾಮಂ (ತೆ): ಬೆ.10.10ಕ್ಕೆ, ಸಂ.6.55ಕ್ಕೆ, ಕುರುತಿ ಆಟಂ (ತ): ಮ.1.15ಕ್ಕೆ, ಬುಲೆಟ್ ಟ್ರೇನ್ (ಇಂ): ಸಂ.4.15ಕ್ಕೆ, ಬಿಂಬಿಸಾರ (ತೆ): ರಾ.10.05ಕ್ಕೆ.
ಸ್ಕ್ರೀನ್ 4	ವಿಕ್ರಾಂತ್ ರೋಣ (3ಡಿ) (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ವಿಕ್ರಾಂತ್ ರೋಣ (3ಡಿ) (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಸೀತಾರಾಮಂ (ತೆ): ಬೆ.10.15ಕ್ಕೆ, ಸಂ.6.40ಕ್ಕೆ, ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಮ.1.35ಕ್ಕೆ, ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಮ.3.55ಕ್ಕೆ, ಪಾಪ್ಪಂ (ಮ): ರಾ.10ಕ್ಕೆ
ಸ್ಕ್ರೀನ್ 3	ಬುಲೆಟ್ ಟ್ರೇನ್ (ಇಂ): ಬೆ.10.10ಕ್ಕೆ, ಮ.3.30ಕ್ಕೆ, ಪೊಯ್‌ಕ್ಕಲ್ ಕುತ್ತಿರೈ (ತ): ಮ.12.55ಕ್ಕೆ, ವಿಕ್ರಾಂತ್ ರೋಣ (ಕ): ಸಂ.6.15ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	ಡಿಸಿ ಲೀಗ್ ಆಫ್ ಸೂಪರ್ ಪೆಟ್ (ಇಂ): ಬೆ.11.45ಕ್ಕೆ, ರಾ.8.10ಕ್ಕೆ, ಬಿಂಬಿಸಾರ (ತೆ): ಮ.2.05ಕ್ಕೆ, ಕುರುತಿ ಆಟಂ (ತ): ಸಂ.5.05ಕ್ಕೆ, ಬುಲೆಟ್ ಟ್ರೇನ್ (ಇಂ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಚೇಜ಼್ (ಕ): ಬೆ.10.45ಕ್ಕೆ, ಸಂ.4ಕ್ಕೆ, ಕರ್ಮಣ್ಯೇ ವಾಧಿಕಾರಸ್ತೆ (ಕ): ಮ.1.30ಕ್ಕೆ, ಪೆಟ್ರೋಮ್ಯಾಕ್ಸ್ (ಕ): ಸಂ.6.45ಕ್ಕೆ, ಮೈ ಡಿಯರ್ ಭೂತ್ (ತ): ರಾ.9.20ಕ್ಕೆ.
ಸ್ಕ್ರೀನ್ 2	ಪೆಟ್ರೋಮ್ಯಾಕ್ಸ್ (ಕ): ಬೆ.10.45ಕ್ಕೆ, ಮ.1.30ಕ್ಕೆ, ಗಾರ್ಗಿ (ಕ): ಸಂ.4.05ಕ್ಕೆ, ಬೆಂಕಿ (ಕ): ಸಂ.6.50ಕ್ಕೆ, ಲಡ್ಕಿ (ಹಿಂ): ರಾ.9.15ಕ್ಕೆ.
ಸ್ಕ್ರೀನ್ 3	ಗಾರ್ಗಿ (ಕ): ಮ.1.30ಕ್ಕೆ, 777 ಚಾರ್ಲಿ (ಕ): ರಾ.7.45ಕ್ಕೆ.
ಸ್ಕ್ರೀನ್ 4	ದಿ ವಾರಿಯರ್ (ತೆ): ಬೆ.10.30ಕ್ಕೆ, ಸಂ.6.20ಕ್ಕೆ, ರಾ.9.20ಕ್ಕೆ, ಬೆಂಕಿ (ಕ): ಮ.1.30ಕ್ಕೆ, ಜುಡಾ ಹೊಕೆ ಬೈ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವಿಕ್ರಾಂತ್ ರೋಣ (3ಡಿ) (ಕ): ಬೆ.8.50ಕ್ಕೆ, ಬೆ.9.50ಕ್ಕೆ, ಮ.12ಕ್ಕೆ, ಮ.1ಕ್ಕೆ, ಮ.3.10ಕ್ಕೆ, ಸಂ.4.10ಕ್ಕೆ, ಸಂ.6.20ಕ್ಕೆ, ರಾ.7.20ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ವಿಕ್ರಾಂತ್ ರೋಣ (ಕ): ಬೆ.9.40ಕ್ಕೆ, ಮ.12.50ಕ್ಕೆ, ಮ.3.55ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ, ವಿಕ್ರಾಂತ್ ರೋಣ (ಹಿಂ): ಬೆ.9.35ಕ್ಕೆ, ಮ.12.45ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಶಂಶೀರಾ (ಹಿಂ): ಮ.3.45ಕ್ಕೆ, ಏಕ್ ವಿಲ್ಲನ್ ರಿಟರ್ನ್ಸ್ (ಹಿಂ): ಬೆ.10.05ಕ್ಕೆ, ಮ.12.55ಕ್ಕೆ, ಸಂ.4ಕ್ಕೆ, ಸಂ.6.55ಕ್ಕೆ, ರಾ.9.45ಕ್ಕೆ, ಗುಲುಗುಲು (ತ): ಮ.3.45ಕ್ಕೆ, ರಾಮರಾವ್ ಆನ್ ಡ್ಯೂಟಿ (ತೆ): ಬೆ.9.10ಕ್ಕೆ, ಮ.12.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಿಕ್ರಾಂತ್ ರೋಣ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಾಂತ್ ರೋಣ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ತ್ರಿವಿಕ್ರಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸೀತಾರಾಮಂ (ತೆ)	4 ಪ್ರದರ್ಶನಗಳು
ರಾಜ್‌ಕಮಲ್	
ಕುರುತಿ ಆಟಂ (ತ), ಕಟೇರಿ (ತ)	2 ಪ್ರದರ್ಶನಗಳು
ಸಂಗಂ	
ರಾಮರಾವ್ (ತೆ)	4 ಪ್ರದರ್ಶನಗಳು
ಲಿಡೋ	
ಕಟೇರಿ (ತ)	4 ಪ್ರದರ್ಶನಗಳು
ತಿಬ್ಬಾದೇವಿ	
ಪೆಟ್ರೋಮ್ಯಾಕ್ಸ್ (ಕ)	4 ಪ್ರದರ್ಶನಗಳು
ಸ್ಟರ್ಲಿಂಗ್	
ಓ ಮೈ ಲವ್ (ಕ)	4 ಪ್ರದರ್ಶನಗಳು
ಸ್ಕೈಲೈನ್	
ಅಂಜನ (ಕ)	4 ಪ್ರದರ್ಶನಗಳು
ಪ್ರಭಾ	
ಬಿಂಬಿಸಾರ (ತೆ)	4 ಪ್ರದರ್ಶನಗಳು

ಪುರಸಭಾ ಸದಸ್ಯನ ಮೇಲೆ ಹಲ್ಲೆ ಪ್ರಕರಣ

ಆರೋಪಿಗಳ ಬಂಧನಕ್ಕೆ ಮೈ.ವಿ.ರವಿಶಂಕರ್ ಒತ್ತಾಯ



ತಿ.ನರಸೀಪುರ, ಆ.6– ಪುರಸಭಾ ಸದಸ್ಯನ ಮೇಲೆ ಹಲ್ಲೆ ನಡೆಸಿದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಬಿಜೆಪಿ ವಿಭಾಗ ಪ್ರಭಾರಿ ಮೈ.ವಿ.ರವಿಶಂಕರ್ ಒತ್ತಾಯಿಸಿದರು.

ಪಟ್ಟಣದ ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಮನೆಗೆ ಭೇಟಿ ನೀಡಿ, ಧೈರ್ಯ ಹೇಳಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪುರಸಭೆ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯ ಎಸ್.ಕೆ.ಕಿರಣ್ ಅವರು ಕಾಂಗ್ರೆಸ್ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಹುಲ್ಲಹಳ್ಳಿ ನಾಲೆ ಏರಿ ಮೇಲೆ ಅಕ್ರಮವಾಗಿ ವಾಣಿಜ್ಯ ಮಳಿಗೆ ನಿರ್ಮಿಸಿದ್ದಾರೆ ಎಂದು ವಿಷಯ ಪ್ರಸ್ತಾಪಿಸಿ, ನಿರ್ಮಾಣ ಮಾಡಿರುವ ಕಟ್ಟಡ ತೆರವುಗೊಳಿಸುವಂತೆ ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಕಿರಣ್ ಮೇಲೆ ಹಲ್ಲೆ ನಡೆದಿರುವುದು ಖಂಡನೀಯ. ಘಟನೆಗೆ ಸಂಬಂಧಿಸಿದಂತೆ ಸ್ಥಳೀಯ ಬಿಜೆಪಿ ಘಟಕ ಎಸ್ಪಿಗೆ ದೂರು ಸಲ್ಲಿಸಿದ್ದು, ನಾನೂ ಸಹ ಅವರೊಂದಿಗೆ ಮಾತನಾಡುತ್ತೇನೆ. ಅಲ್ಲದೇ ಉಸ್ತುವಾರಿ ಸಚಿವರು ಮೈಸೂರಿನಲ್ಲೇ ಇದ್ದು, ಅವರಿಗೆ ಘಟನೆ ವಿವರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತೇನೆ. ಹೀಗಾಗಿ ಕೂಡಲೇ ಹಲ್ಲೆ ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಾತನಾಡಿದ ಪುರಸಭಾ ಸದಸ್ಯ ಕಿರಣ್, ನಂಜುಂಡಸ್ವಾಮಿ ಅವರ ಕುಮ್ಮಕ್ಕಿನಿಂದಲೇ ನನ್ನ ಮೇಲೆ ಹಲ್ಲೆ ನಡೆಸಲಾಗಿದೆ. ಕೂಡಲೇ ಹಲ್ಲೆ ಮಾಡಿದವರನ್ನು ಬಂಧಿಸಿ ಕಾರ್ಯಕರ್ತರು ನಿರ್ಭಯವಾಗಿ ಪಕ್ಷ ಸಂಘಟಿಸಲು ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೇ ನನ್ನ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮೈ.ವಿ.ರವಿ ಶಂಕರ್, ಪಕ್ಷ ಎಂದಿಗೂ ಕಾರ್ಯಕರ್ತರ ಹಿತಕಾಯಲು ಮೊದಲ ಆದ್ಯತೆ ನೀಡುತ್ತದೆ. ದುಡುಕಿನ ನಿರ್ಧಾರ ಬೇಡ. ಆರೋಪಿಗಳಿಗೆ ಕಾನೂನು ಪ್ರಕಾರ ಶಿಕ್ಷೆ ಕೊಡಿಸಲು ಎಲ್ಲಾ ರೀತಿಯ ಕ್ರಮ ವಹಿಸಲಿದೆ ಎಂದು ಭರವಸೆ ನೀಡಿದರು.

ಈ ವೇಳೆ ಕ್ಷೇತ್ರ ಬಿಜೆಪಿ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಜಿಲ್ಲಾ ಕಾರ್ಯದರ್ಶಿ ಮಡವಾಡಿ ಮಹೇಶ್, ಹಿಂದುಳಿದ ವರ್ಗಗಳ ಅಧ್ಯಕ್ಷ ಗೂಳಿ ಮಹೇಶ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಸೊಸಲೆ ಶಿವಕುಮಾರ್, ರಂಗರಾಜ್, ಸಿ.ಬಿ.ಹುಂಡಿ ಸಿದ್ದು, ಕರೋಹಟ್ಟಿ ಮಹದೇವಯ್ಯ, ತಿರುಮಕೂಡಲು ವಾಸು ಮತ್ತಿತರರಿದ್ದರು.

ನಿಧನ




ವಿ.ರವಿಚಂದ್ರ

ಮೈಸೂರು, ಆ.6– ಹಲವಾರು ವರ್ಷ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ (ಕೆಬಿಜಿ) ಅವರಿಗೆ ಕಾರು ಚಾಲಕರಾಗಿದ್ದ ವಿ. ರವಿಚಂದ್ರ (65) ಶನಿವಾರ ಮುಂಜಾನೆ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು.

ಮೈಸೂರಿನ ವಿದ್ಯಾರಣ್ಯಪುರಂ, 2ನೇ ಮುಖ್ಯರಸ್ತೆ, 4ನೇ ಕ್ರಾಸ್ ನಿವಾಸಿ ವರದರಾಜು ನಾಯ್ಡು ಅವರ ಪುತ್ರರಾದ ರವಿಚಂದ್ರ, ಪತ್ನಿ ಉಮಾಮಹೇಶ್ವರಿ, ಪುತ್ರ ಆರ್.ದುಶ್ಯಂತ್, ಪುತ್ರಿ ಆರ್. ಪದ್ಮಾಂಜಲಿ ಸೇರಿದಂತೆ ಅಪಾರ ಬಂಧು–ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ರವಿಚಂದ್ರ ಅವರು ಕೆಬಿಜಿಯವರಿಗೆ ಕಾರು ಚಾಲಕರಾಗುವ ಮುನ್ನ ಸೇನೆಯಲ್ಲಿ ನಂತರ ಕೆಎಸ್‌ಆರ್‌ಟಿಸಿಯಲ್ಲಿ ಚಾಲಕರಾಗಿ ಸೇವೆ ಸಲ್ಲಿಸಿದ್ದರು.

ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ (ಆ.6) ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರದ್ಧಾಂಜಲಿ



ಸರಸ್ವತಿ ಮೋಹನ್

30/10/1938 - 06/08/2022

ಅಮ್ಮ ಎಂಬ ಉದಾತ್ತತೆಗೆ ಅಮೂಲ್ಯವಾದ ಅರ್ಥ ಹೊಸೆದ ಮಾತೃದೇವತೆಗೆ ನಮೋ ನಮಃ

ಅಶ್ರು ತರ್ಪಣಗಳು: ಮೃತರ ಕುಟುಂಬ



ಸೇಲ್ ಈಗ ನಡೆಯುತ್ತಿದೆ!

40% ವರೆಗೆ ಕಡಿತ

28.07.2022 to 29.08.2022

ಸಮಯ - ಬೆಳಿಗ್ಗೆ 10.00 ರಿಂದ ರಾತ್ರಿ 8.00 ರ ವರೆಗೆ (ಭಾನುವಾರ ತೆರೆದಿರುತ್ತದೆ)

ವಿಶೇಷ ಕೌಂಟರ್‌ನಿಂದ ಯಾವುದೇ 2 ಸೀರೆಗಳನ್ನು ಖರೀದಿಸಿ ಫ್ಲಾಟ್	₹590
ಸೀರೆಗಳ ಬೆಲೆ ಪ್ರಾರಂಭ	₹295 ರಿಂದ ₹1200
ಡ್ರೆಸ್ ಮೆಟೀರಿಯಲ್ ಬೆಲೆ ಪ್ರಾರಂಭ	ಪ್ರತಿ ಮೀಟರ್‌ಗೆ ₹68 ಮಾತ್ರ

ಮೈಸೂರು:
ಆನಂದ ವಿಹಾರ ಕಲ್ಯಾಣ ಮಂಟಪ, ಕಲ್ಯಾಣ್ ಜ್ಯುವೆಲ್ಲರ್ಸ್ ಹಿಂಭಾಗ, 2930/1ಅ, ಚರ್ಚ್ ರಸ್ತೆ, ಬೆಂಗಳೂರು ನೀಲ್‌ಗಿರಿ ರಸ್ತೆ, ಮೈಸೂರು – 570001

ಸಗಟು ವ್ಯಾಪಾರ ವಿಚಾರಣೆಗಾಗಿ ಸಂಪರ್ಕಿಸಿ: ಮೊಬೈಲ್ : 9342940284 / 6357406279.

ಸೇಲ್ಸ್‌ಮ್ಯಾನ್ ಉದ್ಯೋಗಕ್ಕಾಗಿ ಸಂಪರ್ಕಿಸಿ: ಮೊಬೈಲ್ : 6359973319 / 6357406272.

Garden VARELI

ಬೇಕಾಗಿದ್ದಾರೆ

ಮೈಸೂರು ನಗರಾದ್ಯಂತ ಬ್ಯಾಂಕ್ ವೆರಿಫಿಕೇಶನ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಕಡ್ಡಾಯ)
ಸಂಪರ್ಕಿಸಿ: ಅನಿಲ್ : 7026996123
ಶೇಖರ್ : 9739343495
Arthor Services Pvt Ltd, L-89 2nd Floor, M Block opp Karuna Hospital, kuvempunagar, Mysore

URGENT REQUIREMENT

Experienced Pharma Aide/Delivery Boys required for Medical Shop

Contact: 9880587586

ವರಮಹಾಲಕ್ಷ್ಮಿ ಹಬ್ಬದ ಮಾರಾಟ OFFER UPTO 50% OFF

ಭಾನುವಾರ ತೆರೆದಿರುತ್ತದೆ

U.P WOODEN HANDCARVED ಪೀಠೋಪಕರಣಗಳು

Pure Burma TeakWood

OFFER ONLY 5 DAYS

EXCHANGE YOUR OLD FURNITURE-GET 20%EXTRA

ALL DEBIT & CREDIT CARDS ACCEPTED

TIMINGS : 9AM TO 9PM

FREE HOME DELIVERY BIG ITEMS - 30KMS

ಸ್ಥಳ: ರಾಜ್ಯ ಸರ್ಕಾರಿ ನೌಕರರ ಸಂಘದ ಕಟ್ಟಡ ವಾರ್ತಾ ಭವನದ ಹತ್ತಿರ, ಜೆ.ಕೆ.ಗ್ರೌಂಡ್ ಎದುರು, ದಾಸಪ್ಪ ವೃತ್ತದ ಹತ್ತಿರ, ಧನವಂತ್ರಿ ರಸ್ತೆ, ಮೈಸೂರು

SITES FOR SALE MUDA APPROVED MYSORE

KBL GREEN WOOD
30x40 - N/F & S/F
40x60 - S/F Middle
30x50 W/F
Near JSS 2nd Stage, Mysore
9900466811, 9980270076

NISARGA PARADISE

DEVELOPED PLOTS

FULLY DEVELOPED
READY FOR REGISTRATION

Varamahalakshmi Festival Offers

HURRY!! FEW LEFT

BOOKING OPENS
30X40 I 30X50
40X60



BANK LOAN AVAILABLE
ICICI Bank
LIC HFL
HDFC BANK

HYLAND PROPERTIES
Hunsur-Mysore Highway, Mysuru
9620016941, 9513301854

COMMERCIAL PROPERTY FOR SALE

33 x 53 on KRS Main Road Near Kusuma Chandrashekhar Choultry

Contact: 8618258778

FARM SITES

5 kms from Siddharta Layout, Bannur road with Amenities.
Ready for construction.
65x95 (6000 sft) Rs. 375/-sft

Call: 90714 01234

ಮೈಸೂರು ಮಿತ್ರ 43

ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

HOUSE FOR SALE

Architect designed brand new 3 BHK duplex in 20x30 MUDA North facing site with all Teak doors & windows, Granite flooring, fully furnished at Vijaynagar 4th stage 2nd phase very close to ring road.

Contact: 7019928507 / 94480 54571

FARM SITES

5 minutes from Nanjangud Circle, 15 minutes from Airport, Ooty road.
Rs. 5700/- sft & Rs. 3000/- sft site

Call 76767 71396

IMKTA PRE SCHOOL TEACHER TRAINING

www.imkta.in

JOIN FOR DIPLOMA MONTESSORI / PRIMARY TEACHER TRAINING

IMKTA Since 2003

FOR SSLC, PUC OR ANY DEGREE CANDIDATES

Online Course Available

NCVTE Approved Courses
6 TO 9 MONTHS COURSE

@ ALPHA INTERNATIONAL SCHOOL Srirampura / Gokulam

782 993 7469

BUILDING CONSTRUCTION

Nawin Builders
Starts from Rs.1599/-sqft

Call: 7676768868/9988554496

REQUIRE A EAST/ NORTH CLEAR TITLE PROPERTY ONLY

Muda approved, 60/ 40 plot or a 2/ 3/ 4 BHK Independent House built on a 60/ 40 plot closer to main road in Yadavgiri, Jayalakshmipuram, Kuvempunagar, Saraswathipuram, Gokulam, in and around Kalidasa Road in Mysore to buy owners call,

Mobile: 9972529705

Agents excuse


Crystal City MUDA & RERA Aprd.
30x40
30x50
40 Acre Premium Layout
Fully Developed
5 Mins from Kuvempu Nagar
90714 01234

WANTED

Reputed Hotel in Coorg, looking for Front Office Staffs, Experienced Candidate

8105841401
8105491402

ಜನ್ಮ ಶತಮಾನೋತ್ಸವದ ಸವಿನೆನಪು



ಎಂ.ಎಸ್. ಗುರುಪಾದಸ್ವಾಮಿ

(1922–2022)

ಸ್ವಾತಂತ್ರ್ಯ ಹೋರಾಟಗಾರ ಮತ್ತು ಮಾಜಿ ಕೇಂದ್ರ ಸಚಿವರು

ಪ್ರೀತಿಯಿಂದ ನೆನಪಿಸಿಕೊಂಡವರು:
ಮಂಜುಳಾ ಪ್ರಭಾಕರ್, ಎಂ.ಜಿ. ಪ್ರಕಾಶ್, ಜಸ್ವಂತಿ ಶ್ರೀಕಾಂತ್
ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು, ಮಾಲಂಗಿ ಕುಟುಂಬದ ಸದಸ್ಯರು
ಸ್ನೇಹಿತರು ಮತ್ತು ಹಿತೈಷಿಗಳು
ಮೋ : 9900265040

ಕೀನ್ಯಾ ದೇಶದ ಮಸ್ಯೆಮರ ಹಾಗೂ ತಾನ್‌ಜೇನಿಯಾದ ಕಿಲಿ ಮಂಜಾರೋ ಪರ್ವತದ ಚಾರಣಕ್ಕೆ ತೆರಳುತ್ತಿರುವ

ಪುನೀತಪ್ರದೀಪ್

ಹಾಗೂ

ಟೈಗರ್ ಸೋಲಂಕಿ

ಅವರ ತಂಡದ ಪ್ರಯಾಣ ಸುಖಕರವಾಗಿರಲಿ ಎಂದು ಶುಭಹಾರೈಸುವ



ಸ್ವೀಟ್ ಮಹೇಶ್

ಅಂಬಾರಿ ಕನ್ವೆನ್ಷನ್ ಮಾಲೀಕರು ಮತ್ತು ಸ್ನೇಹಿತರು



ಕನಕ ಭವನ ಉದ್ಘಾಟನೆಗೆ ಆಗಮಿಸುತ್ತಿರುವ

ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ರವರಿಗೆ ಸ್ವಾಗತ

ಹುಣಸೂರಿನಲ್ಲಿ ಕನಕ ಭವನ ನಿರ್ಮಾಣಕ್ಕೆ ತಮ್ಮ ಅಧಿಕಾರದ ಅವಧಿಯಲ್ಲಿ 1.50 ಕೋಟಿ ರೂ ಅನುದಾನ ಮಂಜೂರು ಮಾಡಿ ಕೊಟ್ಟ ತಮ್ಮ 75ನೇ ಅಮೃತ ಮಹೋತ್ಸವ ಆಚರಿಸಿಕೊಂಡ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ರವರಿಗೆ ಹಾಗೂ ಅಂದಿನ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿ ಶ್ರೀ ರಾಮಯ್ಯ ನವರಿಗೆ ಹಾಗೂ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಿಸಲು ಶ್ರಮವಹಿಸಿ ತಮ್ಮ ತಾಯಿ ಶ್ರೀಮತಿ ರತ್ನಪ್ರೇಮಕುಮಾರ್ ರವರ ಹೆಸರಿನಲ್ಲಿ ವೈಯಕ್ತಿಕವಾಗಿ 10 ಲಕ್ಷ ರೂ ಸಹಾಯಧನ ನೀಡಿ ಕನಕ ಭವನ ನಿರ್ಮಾಣಕ್ಕೆ ನೆರವಾದ ಸನ್ಮಾನ್ಯ ಸ್ನೇಹಜೀವಿ ಶ್ರೀ ಹೆಚ್.ಪಿ.ಮಂಜುನಾಥ್ ರವರಿಗೆ ಹಾಗೂ ಕನಕ ಭವನ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುತ್ತಿರುವ ಎಲ್ಲಾ ಗಣ್ಯರಿಗೆ ತುಂಬು ಹೃದಯದ ಸ್ವಾಗತ.

